ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಏಪ್ರಿಲ್ 23 ಮಂಗಳವಾರ 2024

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

45

ಸಂಪುಟ: 45 | ಸಂಚಿಕೆ: 8 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4



ಕಾವೇರಿ ಶೈಕ್ಷಣಿಕ ಸಂಸ್ಥೆಗಳ ವತಿಯಿಂದ ಮತದಾನ ಜಾಗೃತಿ ಅಭಿಯಾನ



ಮೈಸೂರು,ಏ.22– ಡಾ.ಚಂದ್ರಶೇಖರ್ ಫೌಂಡೇಶನ್, ಕಾವೇರಿ ಗ್ರೂಪ್ ಆಫ್ ಇನ್ಸಿಟಿಟ್ಯೂಷನ್ ವತಿಯಿಂದ ವಿದ್ಯಾರ್ಥಿಗಳಿಂದ ಸಾರ್ವಜನಿಕರಿಗೆ ಮತದಾನ ಜಾಗೃತಿ ಮೂಡಿಸುವ ಅಭಿಯಾನವನ್ನು ಇಂದು ಬೆಳಗ್ಗೆ 8 ಗಂಟೆಯಿಂದ ಹಮ್ಮಿಕೊಳ್ಳಲಾಗಿತ್ತು.

ಸದರಿ ಜಾಥಾವು ಸಿಟಿ ರೈಲ್ವೆ ಸ್ಟೇಷನ್ ಮುಂದಿನ ಬಾಬು ಜಗಜೀವನ ರಾಮ್ ವೃತ್ತದಿಂದ ಪ್ರಾರಂಭಗೊಂಡು ಜನರಲ್ ಕಾರಿಯಪ್ಪ ವೃತ್ತ, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ ವೃತ್ತ ರಾಮಸ್ವಾಮಿ ವೃತ್ತದ ಮೂಲಕ ಹಾದು ಹೋಗಿ ಮೈಸೂರು ಜಿಲ್ಲಾ ನ್ಯಾಯಾಲಯಗಳ ಮುಂದಿನ ಮಹಾತ್ಮಗಾಂಧಿ ವೃತ್ತದಲ್ಲಿ ಕೊನೆಗೊಂಡಿತು. ಜಾಥಾದ ಪ್ರಾರಂಭದಲ್ಲಿ ಕಾವೇರಿ ಗ್ರೂಪ್ ಆಫ್ ಇನ್ಸಿಟಿಟ್ಯೂಷನ್‌ನ ಅಧ್ಯಕ್ಷ ಡಾ.ಜಿ.ಆರ್.ಚಂದ್ರಶೇಖರ್ ಮತ್ತು ಮ್ಯಾನೇಜಿಂಗ್ ಡೈರೆಕ್ಟರ್ ಡಾ.ಸರಳಾ ಚಂದ್ರಶೇಖರ್, ಮತದಾನದ ಪ್ರಾಮುಖ್ಯತೆಯ ಬಗ್ಗೆ ವಿದ್ಯಾರ್ಥಿಗಳಿಗೆ ಮತ್ತು ಸಾರ್ವಜನಿಕರಿಗೆ ಮನವರಿಕೆ ಮಾಡಿಕೊಟ್ಟರು.

ಜಾಥಾದಲ್ಲಿ ಆಯುರ್ವೇದಿಕ್ ಮೆಡಿಕಲ್ ಕಾಲೇಜ್, ಫಿಸಿಯೋಥೆರಪಿ, ಫಾರ್ಮಸಿ, ನರ್ಸಿಂಗ್ ಹಾಗೂ ಅಲೈಡ್ ಹೆಲ್ತ್ ಸೈನ್ಸ್ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

ಇದೇ ವೇಳೆ ದಾಸಪ್ಪ ವೃತ್ತ, ಜನರಲ್ ಕಾರಿಯಪ್ಪ ವೃತ್ತ, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ ವೃತ್ತ, ರಾಮಸ್ವಾಮಿ ವೃತ್ತ ಮತ್ತು ಮಹಾತ್ಮಗಾಂಧಿ ವೃತ್ತದಲ್ಲಿ ವಿದ್ಯಾರ್ಥಿಗಳು ಮತದಾನದ ಬಗ್ಗೆ ಜಾಗೃತಿ ಮೂಡಿಸುವ ಕಿರು ನಾಟಕಗಳನ್ನು ಪ್ರದರ್ಶಿಸಲಾಯಿತು. ಕಾರ್ಯಕ್ರಮದಲ್ಲಿ ಕಾವೇರಿ ಗ್ರೂಪ್ ಆಫ್ ಇನ್ಸಿಟಿಟ್ಯೂಷನ್‌ನ ಡೀನ್ ಪ್ರೊ.ಎಸ್.ಶ್ರೀಕಂಠಸ್ವಾಮಿ ಪ್ರಾಂಶುಪಾಲರು, ಅಧ್ಯಾಪಕರು ಭಾಗವಹಿಸಿದ್ದರು.



ಚಾಮರಾಜ ಕ್ಷೇತ್ರದ 40ನೇ ವಾರ್ಡ್‌ನಲ್ಲಿ ಮೈಸೂರು–ಕೊಡಗು ಲೋಕಸಭಾ ಕ್ಷೇತ್ರ ಅಭ್ಯರ್ಥಿ ಯದುವೀರ್ ಪರ ನಗರಪಾಲಿಕೆ ಮಾಜಿ ಸದಸ್ಯ ಪ್ರಶಾಂತ್‌ಗೌಡ ಮತ ಯಾಚಿಸಿದರು. ಈ ವೇಳೆ ನಗರ ಉಪಾಧ್ಯಕ್ಷ ಸೋಮಶೇಖರ್ ರಾಜು, ನಗರ ಅಲ್ಪಸಂಖ್ಯಾತ ಮೋರ್ಚಾ ಅಧ್ಯಕ್ಷ ವಿನೋದ್ ಜೈನ್, ಅನೂಜ್ ಸರಸ್ವತ್, ಸಂದೇಶ್ ಪವಾರ್, ಪನ್ನಲಾಲ್, ರಾಜೇಶ್, ಧನಲಕ್ಕಿ, ವಾರ್ಡಿನ ಮುಖಂಡರು ಹಾಜರಿದ್ದರು.



ಮೈಸೂರು ಎಸ್‌ಟಿ ಮೋರ್ಚಾ ವತಿಯಿಂದ ಬಿಜೆಪಿ ಅಭ್ಯರ್ಥಿ ಯದುವೀರ ಅವರ ಪರ ರಮ್ಮನಹಳ್ಳಿಯಲ್ಲಿ ಮಾಜಿ ಮೇಯರ್ ಶಿವಕುಮಾರ್, ಎಸ್‌ಟಿ ಮೋರ್ಚಾದ ನಗರಾಧ್ಯಕ್ಷ ಪಡುವಾರಹಳ್ಳಿ ಎಂ.ರಾಮಕೃಷ್ಣ ಮತಯಾಚಿಸಿದರು. ಈ ವೇಳೆ ಟೆನ್ನಿಸ್ ಗೋಪಿ, ಪೈಲೋಕೇಶ್, ಜಯಸಿಂಹ, ಬಿ.ಜೆ.ನಾರಾಯಣಸ್ವಾಮಿ, ಚಾಮುಂಡೇಶ್ವರಿ ಮಂಡಲದ ಪ್ರಧಾನ ಕಾರ್ಯದರ್ಶಿ ಮದಕರಿ, ತ್ಯಾಗರಾಜ್ ಮತ್ತಿತರರು ಇದ್ದರು.



ಸರ್ ಎಂ.ವಿಶ್ವೇಶ್ವರಯ್ಯ ನಲ್ಲಿ–ಒಳಚರಂಡಿ ಕಾರ್ಮಿಕರ ಕ್ಷೇಮಾಭಿವೃದ್ಧಿ ಸಂಘದಿಂದ ಮತದಾನ ಜಾಗೃತಿ ಮೂಡಿಸಲಾಯಿತು. ಸಂಘದ ಅಧ್ಯಕ್ಷ ಮಹೇಶ್, ಕಾರ್ಯದರ್ಶಿ ರವಿಕುಮಾರ್, ಖಜಾಂಚಿ ಪ್ರಕಾಶ್, ನಿರ್ದೇಶಕರಾದ ಚಂದ್ರೇಗೌಡ, ಕುಮಾರ್, ರುದ್ರಸ್ವಾಮಿ, ಶಿವರಾಜ್, ಯೋಗೇಶ್, ಜಾಕಿರ್ ಹುಸೇನ್, ಸದಸ್ಯರು ಉಪಸ್ಥಿತರಿದ್ದರು.

ದಿಂಗಾಲೇಶ್ವರ ಸ್ವಾಮೀಜಿ ನಾಮಪತ್ರ ವಾಪಸ್

ಧಾರವಾಡ: ಕ್ಷೇತ್ರದ ಪಕ್ಷೇತರ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದ ಶಿರಹಟ್ಟಿ–ಬಾಲೇಹೊಸೂರಿನ ಶ್ರೀ ದಿಂಗಾಲೇಶ್ವರ ಸ್ವಾಮೀಜಿ ಸೋಮವಾರ ನಾಮಪತ್ರ ವಾಪಸ್ ಪಡೆದಿದ್ದಾರೆ.



ಸ್ವಾಮೀಜಿ ಪರ ಏಜೆಂಟ್ ಸಚಿನ್ ಪಾಟೀಲ ಜಿಲ್ಲಾ ಚುನಾವಣಾಧಿಕಾರಿ ಕಚೇರಿಗೆ ತೆರಳಿ ನಾಮಪತ್ರ ವಾಪಸ್ ಪಡೆದರು. ಸ್ವಾಮೀಜಿ ಸೂಚನೆಯಂತೆ ನಾಮಪತ್ರ ವಾಪಸ್ ಪಡೆದಿದ್ದೇವೆ. ಮುಂದಿನ ನಿರ್ಧಾರವನ್ನು ಸ್ವಾಮೀಜಿ ತಿಳಿಸುತ್ತಾರೆ ಎಂದು ಸಚಿನ್ ಪಾಟೀಲ ಪ್ರತಿಕ್ರಿಯಿಸಿದರು.

ಸ್ವಾಮೀಜಿ ಸ್ಪರ್ಧೆ ಕ್ಷೇತ್ರದಲ್ಲಿ ತೀವ್ರ ಕುತೂಹಲ ಕೆರಳಿಸಿತ್ತು. ಚುನಾವಣಾ ಪ್ರಕ್ರಿಯೆ ಆರಂಭವಾದಾಗ ಪ್ರಹ್ಲಾದ ಜೋಶಿ ಅವರನ್ನು ಸೋಲಿಸುವುದು ನನ್ನ ಗುರಿ ಎಂದಿದ್ದರು. ಜೋಶಿಯನ್ನು ಸೋಲಿಸುವ ಗುರಿ ಇತ್ತು. ಈಗ ಗೆಲ್ಲಬೇಕು ಎನ್ನಿಸುತ್ತಿದೆ ಎಂದು ಸ್ವಾಮೀಜಿ ಇತ್ತೀಚೆಗೆ ಹೇಳಿದ್ದರು.

ಸ್ವಾಮೀಜಿ ಸ್ಪರ್ಧೆಯಿಂದ ಕ್ಷೇತ್ರದಲ್ಲಿ ತ್ರಿಕೋನ ಸ್ಪರ್ಧೆ ಏರ್ಪಟ್ಟಿತ್ತು. ಇದೀಗ ಸ್ವಾಮೀಜಿ ಕಣದಿಂದ ಹಿಂದೆ ಸರಿದಿದ್ದರಿಂದ ಬಿಜೆಪಿಯ ಪ್ರಹ್ಲಾದ ಜೋಶಿ ಹಾಗೂ ಕಾಂಗ್ರೆಸ್‌ನ ವಿನೋದ ಅಸೂಟಿ ಮಧ್ಯೆ ನೇರ ಸ್ಪರ್ಧೆ ಏರ್ಪಟ್ಟಿದೆ.

6ನೇ ತರಗತಿ ಪ್ರವೇಶಕ್ಕೆ ಅರ್ಜಿ ಆಹ್ವಾನ

ಮೈಸೂರು,ಏ.22–2024–25ನೇ ಸಾಲಿನಲ್ಲಿ ಸಮೈಸೂರು ಜಿಲ್ಲೆಯಲ್ಲಿರುವ ಪ್ರತಿಷ್ಠಿತ ಶಾಲೆಗಳಲ್ಲಿ ಪರಿಶಿಷ್ಟ ಜಾತಿಯ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ 6ನೇ ತರಗತಿಗೆ ಪ್ರವೇಶ ಕಲ್ಪಿಸುವ ಸಂಬಂಧ ಅರ್ಹ ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಆಸಕ್ತ ವಿದ್ಯಾರ್ಥಿಗಳು ಮೇ 9ರಿಂದ 21 ರವರೆಗೆ ಸಮಾಜ ಕಲ್ಯಾಣ ಇಲಾಖೆಯ ವೆಬ್‌ಸೈಟ್‌ನಲ್ಲಿ www.sw.kar.nic.in ಆನ್‌ಲೈನ್ ಮೂಲಕ ಅರ್ಜಿಗಳನ್ನು ನೋಂದಾಯಿಸಿದ ನಂತರ ದಾಖಲಾತಿಗಳನ್ನು ಸಮಾಜ ಕಲ್ಯಾಣ ಇಲಾಖೆಯ ಜಂಟಿ ನಿರ್ದೇಶಕರ ಕಚೇರಿಗೆ ಮೇ 21ರೊಳಗೆ ಸಲ್ಲಿಸುವಂತೆ ಸಮಾಜ ಕಲ್ಯಾಣ ಇಲಾಖೆಯ ಜಂಟಿ ನಿರ್ದೇಶಕರು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಂಜನಗೂಡು ನಗರಸಭೆಯ ಪೌರಕಾರ್ಮಿಕ ಮಾಣಿಕ್ಯ ನಿಧನ



ಮೈಸೂರು, ಏ. 22– ಮೈಸೂರು ಜಿಲ್ಲೆ ನಂಜನಗೂಡು ನಗರಸಭೆಯಲ್ಲಿ ಪೌರಕಾರ್ಮಿಕರಾಗಿ ಕೆಲಸ ನಿರ್ವಹಿಸುತ್ತಿದ್ದ ಮಾಣಿಕ್ಯ (58) ಭಾನುವಾರ ಬೆಳಿಗ್ಗೆ ಅನಾರೋಗ್ಯದಿಂದ ನಿಧನರಾದರು. ಮೃತರು ಪತ್ನಿ ರಾಣಿ, 4 ಹೆಣ್ಣು ಮಕ್ಕಳು, ಅಪಾರ ಬಂಧು ಬಳಗವನ್ನು ಅಗಲಿದ್ದಾರೆ.

ನಂಜನಗೂಡು ನಗರಸಭೆಯ ಪೌರಾಯುಕ್ತ ನಂಜುಂಡಸ್ವಾಮಿ, ನಗರಸಭೆ ಸದಸ್ಯ ದೇವ, ನಗರಸಭೆಯ ಮಾಜಿ ಅಧ್ಯಕ್ಷ ಚೆಲುವರಾಜು, ಬಡಾವಣೆಯ ಯಜಮಾನರಾದ ಬನ್ನಾರಿ, ನಗರಸಭೆ ಮೇಸ್ತ್ರಿಗಳಾದ ನಾರಾಯಣ್, ಮಾದಯ್ಯ, ಶಿವಣ್ಣ, ಮಹದೇವ, ಸೂಪರ್‌ವೈಸರ್ ರಂಗನಾಥ್, ನಗರಸಭೆಯ ಅಧಿಕಾರಿ ಮತ್ತು ಸಿಬ್ಬಂದಿ ವರ್ಗ ಅಂತಿಮ ದರ್ಶನ ಪಡೆದರು. ಅಂತ್ಯ ಸಂಸ್ಕಾರ ಸಂಜೆ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ನೇಹಾ ಹಿರೇಮಠ ಪ್ರಕರಣ: ಸಿಐಡಿ ತನಿಖೆ; ವಿಶೇಷ ಕೋರ್ಟ್ ಸ್ಥಾಪನೆ

●ಸಿಎಂ ಸಿದ್ದರಾಮಯ್ಯ ಭರವಸೆ ●ಬಿಜೆಪಿಯವರಿಂದ ಪ್ರಕರಣಕ್ಕೆ ರಾಜಕೀಯ ಬಣ್ಣ ●ಬಿಜೆಪಿ ಜಾಹೀರಾತಿಗೆ ಸಿಎಂ ಕೆಂಡಾಮಂಡಲ

ಬೆಂಗಳೂರು, ಏ.22(ಕೆಎಂಶಿ)–ವಿದ್ಯಾರ್ಥಿನಿ ನೇಹಾ ಹಿರೇಮಠ್ ಕೊಲೆ ಪ್ರಕರಣವನ್ನು ಸಿಐಡಿ ತನಿಖೆಗೆ ವಹಿಸಲಾಗುವುದು. ವಿಶೇಷ ನ್ಯಾಯಾಲಯ ಸ್ಥಾಪಿಸಿ ಕಾಲಮಿತಿಯಲ್ಲಿ ವಿಚಾರಣೆ ನಡೆಸಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಘೋಷಣೆ ಮಾಡಿದ್ದಾರೆ.

ಪಕ್ಷದ ಅಭ್ಯರ್ಥಿಗಳ ಪರ ಚುನಾವಣಾ ಪ್ರಚಾರ ಕೈಗೊಳ್ಳುವುದಕ್ಕೂ ಮುನ್ನ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಪ್ರಕರಣವನ್ನು ನಾವು ಮುಚ್ಚಿಹಾಕುವ ಪ್ರಯತ್ನ ಮಾಡಿಲ್ಲ, ಇದನ್ನು ಕೆಲವರು ರಾಜಕೀಯವಾಗಿ ಬಳಸಿಕೊಳ್ಳಲು ಹೊರಟಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಪ್ರಕರಣಕ್ಕೆ ಸಂಬಂಧಿಸಿದಂತೆ ಬಿಜೆಪಿ ಇಂದು ರಾಜ್ಯಾದ್ಯಂತ ಪ್ರತಿಭಟನೆ, ಧರಣಿ ಮಾಡುತ್ತಿರುವ ಬೆನ್ನಲ್ಲೇ ಮುಖ್ಯಮಂತ್ರಿ ಅವರು ಸಿಐಡಿ ತನಿಖೆ ಘೋಷಣೆ ಮಾಡಿದ್ದಾರೆ. ಪ್ರಕರಣ ನಮ್ಮ ಗಮನಕ್ಕೆ ಬರುತ್ತಿದ್ದಂತೆ ನಮ್ಮ ಸಚಿವ ಹೆಚ್.ಕೆ.ಪಾಟೀಲ್ ಭೇಟಿ ನೀಡಿದ್ದಾರೆ, ಧಾರವಾಡಕ್ಕೆ ತೆರಳಿದ ಸಂದರ್ಭದಲ್ಲಿ ನಾನೂ ಭೇಟಿ ನೀಡುವುದಾಗಿ ಸಿದ್ದರಾಮಯ್ಯ ತಿಳಿಸಿದರು.

ತಪ್ಪಿತಸ್ಥ ಉಗ್ರ ಶಿಕ್ಷೆಯಿಂದ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ. ಇದೇ ಕಾರಣಕ್ಕಾಗಿ ನಾವು ಪ್ರಕರಣವನ್ನು ಸಿಐಡಿಯಿಂದ ತನಿಖೆ ಮಾಡಿಸುತ್ತಿರುವುದಲ್ಲದೆ, ವಿಶೇಷ ನ್ಯಾಯಾಲಯ ಸ್ಥಾಪಿಸಿ ತ್ವರಿತವಾಗಿ ಕಾಲಮಿತಿಯಲ್ಲಿ ವಿಚಾರಣೆ ನಡೆಸಲಾಗುವುದು. ಬಿಜೆಪಿಯವರು ರಾಜಕೀಯ ಬಣ್ಣ ಕಟ್ಟಿ ಇದನ್ನು ಚುನಾವಣೆಗೆ ಬಳಸಿಕೊಳ್ಳಲು ಹೋಗುತ್ತಿದ್ದಾರೆ, ಜನಕ್ಕೂ ಇದು ಅರ್ಥವಾಗುತ್ತದೆ. ತನಿಖೆಯಿಂದ ಸತ್ಯಾಸತ್ಯತೆ ಹೊರಬೀಳಲಿದೆ ಎಂದರು.



ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ಸಮಾನ ಆಸ್ತಿ ಹಂಚಿಕೆ ಮಾಡುತ್ತಾರೆ. ಮಹಿಳೆಯರ ಮಾಂಗಲ್ಯವನ್ನು ಮುಸ್ಲಿಮರಿಗೆ ಕೊಡುತ್ತಾರೆ ಎಂದು ಪ್ರಧಾನಮಂತ್ರಿ ಆರೋಪ ಮಾಡಿರುವ ಬಗ್ಗೆ ಮಾತನಾಡಿ, ಪ್ರಧಾನಿಯಾಗಿ ಅವರು ಇಷ್ಟು ಕೆಳಮಟ್ಟದಲ್ಲಿ ಮಾತನಾಡಬಾರದಿತ್ತು. ಹಿಂದೂಗಳ ಮಂಗಳಸೂತ್ರವನ್ನು ತೆಗೆದು ಮುಸ್ಲಿಮರಿಗೆ ನೀಡುತ್ತಾರೆ ಎನ್ನುವುದು ಅವರ ಸ್ಥಾನಕ್ಕೆ ಅಗೌರವ ತರುವಂಥ ಮಾತುಗಳು, ದೇಶದ ಪ್ರಧಾನಮಂತ್ರಿಯಾಗಿ ಎಲ್ಲಾ ಜನಾಂಗವನ್ನು ಸಮಾನವಾಗಿ ನೋಡಿಕೊಳ್ಳುವ ಕರ್ತವ್ಯ ಅವರದ್ದು, ಇಂಥ ಮಾತುಗಳು ಅವರಿಗೆ ಶೋಭೆ ತರುವುದಿಲ್ಲ ಎಂದರು.

ಸಮಾನವಾಗಿ ಆಸ್ತಿ ಹಂಚಿಕೆಯಾಗುವುದು ಸಾಮಾಜಿಕ ನ್ಯಾಯ, ಸಮ ಸಮಾಜ ನಿರ್ಮಾಣವಾಗಬೇಕಾದರೆ ಎಲ್ಲರೂ ಮುಖ್ಯವಾಹಿನಿಗೆ ಬರಬೇಕು. ಕೆಲವೇ ಜನರ ಕೈಯ್ಯಲ್ಲಿ ಅಧಿಕಾರ, ಸಂಪತ್ತು ಇದ್ದರೆ ಇದು ಆಗುವುದಿಲ್ಲ ಎಂದರು.

ರಾಜ್ಯದಲ್ಲಿ ಕಾಂಗ್ರೆಸ್ ಇದ್ದರೆ, ಭ್ರಷ್ಟಾಚಾರ ಹೆಚ್ಚಾಗಲಿದೆ ಎಂಬ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ನಡ್ಡಾ ಅವರ ಹೇಳಿಕೆಗೆ ಪ್ರತಿಕ್ರಿಯೆ ನೀಡಿ, ಕಾನೂನು ಪ್ರಕಾರ ರೇಡ್ ಮಾಡುವುದನ್ನು ನಾವು ಎಂದೂ ವಿರೋಧಿಸುವುದಿಲ್ಲ. ಬಿಜೆಪಿಯಲ್ಲಿ ಶ್ರೀಮಂತರಿಲ್ಲವೇ? ಯಡಿಯೂರಪ್ಪ, ವಿಜಯೇಂದ್ರ ಭ್ರಷ್ಟಾಚಾರ ಮಾಡಿಲ್ಲವೇ, ಶೋಭಾ ಕರಂದ್ಲಾಜೆ, ಅಶೋಕ್, ಬಸವರಾಜ್ ಬೊಮ್ಮಾಯಿ ಸೇರಿದಂತೆ ಬಿಜೆಪಿಯವರ ಮೇಲೆ ರೇಡ್‌ಗಳು ಏಕೆ ಆಗುತ್ತಿಲ್ಲ. ಆದಾಯ ತೆರಿಗೆಯನ್ನು ಸರಿಯಾಗಿ ಪಾವತಿಸದವರ ಮೇಲೆ ಕ್ರಮವಾಗಲಿ. ಆದಾಯ ಮೀರಿ ಆಸ್ತಿ ಸಂಪಾದಿಸಿದ ಎಲ್ಲರ ಮೇಲೂ ಕಾನೂನು ಕ್ರಮವಾಗಬೇಕು ಎಂದರು. ಕಾಂಗ್ರೆಸ್ ಸರ್ಕಾರದ ಅವಧಿಯಲ್ಲಿ ರಾಜ್ಯದ ಕಾನೂನು ಸುವ್ಯವಸ್ಥೆ ಹದಗೆಟ್ಟಿದೆ ಎಂಬ ಆರೋಪ ಸರಿಯಲ್ಲ, 2022ಕ್ಕೆ ಹೋಲಿಸಿದರೆ ಕಾಂಗ್ರೆಸ್ ಸರ್ಕಾರವಿದ್ದಾಗಲೇ ಅಪರಾಧಗಳು ಕಡಿಮೆಯಾಗಿದೆ. 2023ರಲ್ಲಿ 1,295 ಅಪರಾಧ ಪ್ರಕರಣಗಳು ನಡೆದಿದ್ದರೆ, ಬಿಜೆಪಿ ಆಡಳಿತ ಕಾಲ 2022ರಲ್ಲಿ 1,370 ಪ್ರಕರಣಗಳು ನಡೆದಿದೆ ಎಂದರು.

ಬಿಜೆಪಿಯೇ ಡೇಂಜರ್

ಕಾಂಗ್ರೆಸ್ ಜಾಹೀರಾತಿಗೆ ಪ್ರತಿಯಾಗಿ ಬಿಜೆಪಿಯವರು 'ಕಾಂಗ್ರೆಸ್ ಡೇಂಜರ್' ಜಾಹೀರಾತು ಬಿಡುಗಡೆ ಮಾಡಿರುವ ಬಗ್ಗೆ ಪ್ರತಿಕ್ರಿಯೆ ನೀಡಿದ ಸಿದ್ದರಾಮಯ್ಯ, ಹೆಣ್ಣು ಮಕ್ಕಳಿಗೆ ಉಚಿತ ಬಸ್ ಸೌಲಭ್ಯ, ಉಚಿತ ವಿದ್ಯುತ್, ಅನ್ನಭಾಗ್ಯ ಯೋಜನೆಗಳು ಡೇಂಜರ್ ಆಗುತ್ತವೆಯೇ, ಸಮಾಜವನ್ನು ಒಡೆಯುವಂತಹ ಕಾರ್ಯಗಳು, ಮತಗಳ ಧ್ರುವೀಕರಣ ಮಾಡುವುದು ಅಪಾಯಕಾರಿಯೇ ಹೊರತು, ವಿವಿಧತೆಯಲ್ಲಿ ಏಕತೆಯನ್ನು ತರುವುದು ಡೇಂಜರ್ ಅಲ್ಲ, ದೇಶಕ್ಕೆ ಬಿಜೆಪಿ ಪಕ್ಷವೇ ಡೇಂಜರ್ ಹೊರತು, ಕಾಂಗ್ರೆಸ್ ಪಕ್ಷ ಅಲ್ಲ ಎಂದರು.

ಸಂವಿಧಾನ ಉಳಿವಿಗೆ ಕಾಂಗ್ರೆಸ್‌ಗೆ ಮತ ನೀಡಿ

ವಿಶ್ವಜ್ಞಾನಿ ಡಾ.ಬಿ.ಆರ್. ಅಂಬೇಡ್ಕರ್ ಜನಸೇವಾ ಪ್ರತಿಷ್ಠಾನ ಮನವಿ

ಮೈಸೂರು, ಏ.22–ಡಾ.ಬಿ.ಆರ್. ಅಂಬೇಡ್ಕರ್ ಅವರು ರಚಿಸಿರುವ ಭಾರತದ ಸಂವಿಧಾನದ ಉಳಿವಿಗೆ 2024ರ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಮತ ನೀಡುವಂತೆ ವಿಶ್ವಜ್ಞಾನಿ ಡಾ.ಬಿ.ಆರ್. ಅಂಬೇಡ್ಕರ್ ಜನಸೇವಾ ಪ್ರತಿಷ್ಠಾನದ ಅಧ್ಯಕ್ಷ ಕೆ.ಮಹೇಶ್ ಮನವಿ ಮಾಡಿದ್ದಾರೆ.

ಸಂವಿಧಾನ ಜಾರಿಗೊಂಡ ದಿನದಿಂದಲೂ ಸಂಘ ಪರಿವಾರದವರು ವಿರೋಧ ಮಾಡುತ್ತಿದ್ದಾರೆ. ರಾಷ್ಟ್ರದ ರಾಜಧಾನಿಯಲ್ಲಿ ಸಂವಿಧಾನದ ಪ್ರತಿ ಸುಡಲಾಯಿತು. ಕೇಂದ್ರದ ಸಚಿವರಾಗಿದ್ದವರು ಸಂವಿಧಾನ ಬದಲಿಸುವ ಹೇಳಿಕೆಗಳನ್ನು ನೀಡಿದ್ದರು. ಹಾಗಾಗಿ ಈ ಚುನಾವಣೆ ಸಂವಿಧಾನ ಪರ ಮತ್ತು ಸಂವಿಧಾನ ವಿರೋಧಿಗಳ ನಡುವಿನ ಹೋರಾಟವಾಗಿದೆ. ಸಂವಿಧಾನ ಬದಲಿಸುವ ಮಾತುಗಳನ್ನಾಡುವ ನಾಯಕರ ಪಕ್ಷವಾದ ಬಿಜೆಪಿಗೆ ದಲಿತ ಜನಾಂಗದವರು ಮತ ಕೊಡಬಾರದು. ಎಲ್ಲ ಕ್ಷೇತ್ರಗಳಲ್ಲೂ ಬಿಜೆಪಿ ಅಭ್ಯರ್ಥಿಗಳನ್ನು ತಿರಸ್ಕರಿಸಬೇಕು ಎಂದರು.

ನುಡಿದಂತೆ ನಡೆದ, ಸಂವಿಧಾನ ಮತ್ತು ಪ್ರಜಾಪ್ರಭುತ್ವದ ಮೌಲ್ಯಗಳಿಗೆ ಬದ್ಧವಾಗಿರುವ ಹಿಂದುಳಿದವರು, ಬಡವರು, ಅಲ್ಪಸಂಖ್ಯಾತರು, ದಲಿತರ ಪರವಾಗಿರುವ ಕಾಂಗ್ರೆಸ್ ಪಕ್ಷದ ಅಭ್ಯರ್ಥಿಗಳನ್ನು ಬೆಂಬಲಿಸಬೇಕು. ಕರ್ನಾಟಕದಲ್ಲಿ ಪಂಚ ಗ್ಯಾರಂಟಿ ಯೋಜನೆಗಳು ಮುಂದುವರಿಯಬೇಕಾದರೆ ಕಾಂಗ್ರೆಸ್‌ಗೆ ಹೆಚ್ಚಿನ ಸ್ಥಾನಗಳನ್ನು ಗೆಲ್ಲಬೇಕು. ನಾಲ್ಕು ದಶಕಗಳಿಂದ ಸಾರ್ವಜನಿಕ ಜೀವನದಲ್ಲಿ ಸಕ್ರಿಯವಾಗಿರುವ ಮೈಸೂರು ಕೊಡಗು ಕ್ಷೇತ್ರದ ಅಭ್ಯರ್ಥಿ ಎಂ.ಲಕ್ಷ್ಮಣ್ ಮತ್ತು ಚಾಮರಾಜನಗರ ಕ್ಷೇತ್ರದ ಅಭ್ಯರ್ಥಿ ಸಮಾಜ ಕಲ್ಯಾಣ ಸಚಿವ ಎಚ್.ಸಿ.ಮಹದೇವಪ್ಪ ಅವರ ಪುತ್ರ ಸುನಿಲ್ ಬೋಸ್ ಅವರನ್ನು ಹೆಚ್ಚಿನ ಮತಗಳ ಅಂತರದಿಂದ ಗೆಲ್ಲಿಸಬೇಕು ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕೃಷ್ಣರ ಆರೋಗ್ಯ ವಿಚಾರಿಸಿದ ಪ್ರಧಾನಿ ಮೋದಿ



ಪ್ರಧಾನಿ ಮೋದಿ



ಎಸ್.ಎಂ. ಕೃಷ್ಣ

ಮೈಸೂರು, ಏ.22(ಎಸ್‌ಬಿಡಿ)– ಅನಾರೋಗ್ಯದಿಂದ ಬೆಂಗಳೂರಿನ ಖಾಸಗಿ ಆಸ್ಪತ್ರೆಗೆ ದಾಖಲಾಗಿರುವ ಮಾಜಿ ಮುಖ್ಯಮಂತ್ರಿ ಎಸ್.ಎಂ. ಕೃಷ್ಣಅವರಿಗೆ ಪ್ರಧಾನಿ ಮೋದಿ ಅವರು ಕರೆ ಮಾಡಿ, ಆರೋಗ್ಯ ವಿಚಾರಿಸಿದರು ಎಂದು ಮೈಸೂರಿನ ಗೋಪಾಲಗೌಡ ಆಸ್ಪತ್ರೆ ನ್ಯೂರೋ ಜೋನ್ ವ್ಯವಸ್ಥಾಪಕ ನಿರ್ದೇಶಕ ಡಾ.ಶುಶ್ರುತ್ ಗೌಡ ತಿಳಿಸಿದ್ದಾರೆ.

ಎಸ್.ಎಂ.ಕೃಷ್ಣ ಅವರು ಚೆಸ್ಟ್ ಇನ್ಫೆಕ್ಷನ್‌ನಿಂದ ಕಳೆದ ಐದು ದಿನಗಳಿಂದ ಬೆಂಗಳೂರಿನ ಮಲ್ಯ ಆಸ್ಪತ್ರೆಯ ಐಸಿಯು ಘಟಕಕ್ಕೆ ದಾಖಲಾಗಿದ್ದಾರೆ. ಇನ್ಫೆಕ್ಷನ್ ನಿಯಂತ್ರಣಕ್ಕೆ ಬರುತ್ತಿದ್ದು, ಅವರು ಚೇತರಿಸಿಕೊಳ್ಳುತ್ತಿದ್ದಾರೆ. ಸೋಮವಾರ ಬೆಳಗ್ಗೆ ಪ್ರಧಾನಿ ಮೋದಿ ಅವರ ಕಚೇರಿಯಿಂದ ಎಸ್.ಎಂ.ಕೃಷ್ಣ ಅವರ ಆಪ್ತ ಸಹಾಯಕ ಓಂಕಾರ್ ಅವರಿಗೆ ಕರೆ ಬಂದಿದೆ. ಕೂಡಲೇ ಅವರು ಕೃಷ್ಣ ಅವರ ಶುಶ್ರೂಷೆ ನೋಡಿಕೊಳ್ಳುತ್ತಿರುವ ಯೋಗೇಶ್ ಅವರಿಗೆ ಮೊಬೈಲ್ ನೀಡಿದ್ದಾರೆ. ನಂತರ ಮೋದಿ ಅವರು ಎಸ್.ಎಂ.ಕೃಷ್ಣ ಅವರೊಂದಿಗೆ ಮಾತನಾಡಿ, ಬಹುಬೇಗ ಗುಣ ಮುಖರಾಗುವಂತೆ ಆಶಿಸಿದರು ಎಂದು ಡಾ.ಶುಶ್ರುತ್ ಗೌಡ ಹೇಳಿದರು.

ದಿ ರಾಮೇಶ್ವರಂ ಕೆಫೆ ಬಾಂಬ್ ಸ್ಫೋಟ: ಶಂಕಿತರು ಪುನಃ ಎನ್‌ಐಎ ಕಸ್ಟಡಿಗೆ

ಬೆಂಗಳೂರು: ದಿ ರಾಮೇಶ್ವರಂ ಕೆಫೆ ಬಾಂಬ್ ಸ್ಫೋಟ ಪ್ರಕರಣದ ಆರೋಪಿಗಳಾದ ಮುಸಾವೀರ್ ಹುಸೇನ್ ಶಾಜೀಬ್ ಹಾಗೂ ಅಬ್ದುಲ್ ಮತೀನ್ ಅಹಮದ್ ತಾಹಾನನ್ನು ಹೆಚ್ಚಿನ ವಿಚಾರಣೆ ಗಾಗಿ ಪುನಃ ಏ.29ರವರೆಗೆ ಎನ್‌ಐಎ ಕಸ್ಟಡಿಗೆ ನೀಡಲಾಗಿದೆ. ಮಾ.1ರಂದು ನಡೆದಿದ್ದ ಬಾಂಬ್ ಸ್ಫೋಟ ಪ್ರಕರಣದಲ್ಲಿ ಇಬ್ಬರನ್ನೂ ಏ.12ರಂದು ಬಂಧಿಸಲಾಗಿತ್ತು. ನಂತರ, ನ್ಯಾಯಾಲಯಕ್ಕೆ ಹಾಜರುಪಡಿಸಿ ವಿಚಾರಣೆಗಾಗಿ ಏ,22ರವರೆಗೆ ಕಸ್ಟಡಿಗೆ ಪಡೆಯಲಾಗಿತ್ತು. ಕಸ್ಟಡಿ ಅವಧಿ ಮುಗಿದಿದ್ದರಿಂದ ಇಬ್ಬರನ್ನೂ ನ್ಯಾಯಾಧೀಶರ ಎದುರು ಸೋಮವಾರ ಹಾಜರುಪಡಿಸಲಾಯಿತು. 'ಸ್ಫೋಟ ಹಾಗೂ ಸಂಚಿನ ಬಗ್ಗೆ ಶಂಕಿತರು ಹಲವು ಮಾಹಿತಿ ನೀಡಿದ್ದಾರೆ. ಅವುಗಳ ಪರಿಶೀಲನೆ ನಡೆಯುತ್ತಿದೆ. ಜೊತೆಗೆ, ಇದು ದೇಶದ ಭದ್ರತೆಗೆ ಸಂಬಂಧಪಟ್ಟ ಪ್ರಕರಣ. ಶಂಕಿತರು ಮತ್ತಷ್ಟು ಕಡೆಗಳಲ್ಲಿ ಬಾಂಬ್ ಸ್ಫೋಟಿಸಲು ಸಂಚು ರೂಪಿಸಿರುವ ಮಾಹಿತಿ ಇದೆ. ಈ ಬಗ್ಗೆ ಹೆಚ್ಚಿನ ವಿಚಾರಣೆ ನಡೆಸಬೇಕಿದ್ದು, ಇಬ್ಬರನ್ನೂ ಪುನಃ ಕಸ್ಟಡಿಗೆ ನೀಡಬೇಕು' ಎಂದು ಎನ್‌ಐಎ ಅಧಿಕಾರಿಗಳು ಕೋರಿದರು. ಮನವಿ ಪುರಸ್ಕರಿಸಿದ ನ್ಯಾಯಾ ಧೀಶರು, ಶಂಕಿತರನ್ನು ಎನ್‌ಐಎ ಕಸ್ಟಡಿಗೆ ನೀಡಿ ಆದೇಶ ಹೊರಡಿಸಿದರು.

ರಾಜ್ಯದ ಅಭಿವೃದ್ಧಿಗೆ ಶ್ರಮಿಸುತ್ತಿರುವ ಕಾಂಗ್ರೆಸ್ ಬೆಂಬಲಿಸಿ

ವಿಧಾನಪರಿಷತ್ ಮಾಜಿ ಸದಸ್ಯ ಮರಿತಿಬ್ಬೇಗೌಡ ಮನವಿ

ಮೈಸೂರು, ಏ.22(ಜಿಎ)–ಲೋಕಸಭಾ ಚುನಾವಣೆಯಲ್ಲಿ ರಾಜ್ಯದ ಜನತೆ ಬಗ್ಗೆ ಕಾಳಜಿ ಇಲ್ಲದ ಬಿಜೆಪಿ ಬದಲು ರಾಜ್ಯ ಅಭಿವೃದ್ಧಿ ಶ್ರಮಿಸುತ್ತಿರುವ ಕಾಂಗ್ರೆಸ್ ಅಭ್ಯರ್ಥಿಗಳಿಗೆ ಮತ ನೀಡಿ ಎಂದು ವಿಧಾನಪರಿಷತ್ ಮಾಜಿ ಸದಸ್ಯ ಮರಿತಿಬ್ಬೇಗೌಡ ಮನವಿ ಮಾಡಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪ್ರಧಾನಮಂತ್ರಿ ನರೇಂದ್ರ ಮೋದಿ ನೇತೃತ್ವದ ಬಿಜೆಪಿ ಸರ್ಕಾರದಿಂದ ರಾಜ್ಯ ಅಥವಾ ಮೈಸೂರಿಗೆ ದೊರೆತಿರುವ ಕೊಡುಗೆ ಶೂನ್ಯ. ನಮ್ಮ ತೆರಿಗೆ ಪಾಲು ನೀಡಿಲ್ಲ. ಇಲ್ಲಿ ಪ್ರಚಾರಕ್ಕೆ ಬಂದ ಅವರು ಜಿಲ್ಲೆಗೆ ನೀಡಿದ ಒಂದಾದರೂ ಕೊಡುಗೆ ಬಗ್ಗೆ ಪ್ರಸ್ತಾಪಿಸಲಿಲ್ಲ. ಕಳೆದ 10 ವರ್ಷಗಳಿಂದ ಅವರು ಯಾವುದೇ ಅಭಿವೃದ್ಧಿ ಮಾಡಿಲ್ಲ. ಆದರೆ, ಸಿದ್ದರಾಮಯ್ಯ ಹಾಗೂ ಡಿ.ಕೆ.ಶಿವಕುಮಾರ್ ಅವರ ನೇತೃತ್ವದ ಕಾಂಗ್ರೆಸ್ ಸರ್ಕಾರ ರಾಜ್ಯದ ಜನರ ಹಿತರಕ್ಷಣೆಗಾಗಿ ಪ್ರತಿ ತಿಂಗಳು ಒಂದು ಕುಟುಂಬಕ್ಕೆ 4ರಿಂದ 5 ಸಾವಿರ ರೂ. ದೊರೆಯುವಂತೆ ಮಾಡಿದೆ. ಕೊಟ್ಟ ಮಾತಿನಂತೆ ಐದು ಗ್ಯಾರಂಟಿಗಳನ್ನು ಅನುಷ್ಠಾನ ಮಾಡಲಾಗಿದೆ. ಆದರೆ, ವಿರೋಧ ಪಕ್ಷದವರು ಇದರ ಲಾಭ ಪಡೆಯುತ್ತಿದ್ದರೂ ಕೀಳುಮಟ್ಟದಲ್ಲಿ ವಿರೋಧಿಸುತ್ತಿದ್ದಾರೆ. ಕುಮಾರಸ್ವಾಮಿ ಅವರಂತೂ ಹೆಣ್ಣು ಮಕ್ಕಳ ಬಗ್ಗೆ ಅವಮಾನಕಾರಿ ಮಾತನ್ನಾಡಿದ್ದಾರೆ. ಇದು ಎಷ್ಟು ಸರಿ ಎಂದು ಪ್ರಶ್ನಿಸಿದರು.



ಮರಿತಿಬ್ಬೇಗೌಡ


ಹುಬ್ಬಳ್ಳಿಯ ನೇಹಾ ಹಿರೇಮಠ ಅವರ ಬರ್ಬರ ಕೊಲೆ ಖಂಡನೀಯ. ಹಾಗೆಂದು ಅದಕ್ಕೆ ರಾಜಕೀಯ ಬಣ್ಣ ಕಟ್ಟಿ ಲಾಭ ಪಡೆಯುವ ಕೆಲಸ ಆಗಬಾರದು. ಸೂಕ್ತ ತನಿಖೆಯಾಗಿ ಆರೋಪಿಗೆ ಕಠಿಣ ಶಿಕ್ಷೆಯಾಗಲಿ. ಬೊಮ್ಮಾಯಿ ನೇತೃತ್ವದ ಬಿಜೆಪಿ ಸರ್ಕಾರದ 3.5 ವರ್ಷಗಳ ಅವಧಿಯಲ್ಲಿ ರಾಜ್ಯದಲ್ಲಿ ಏನೆಲ್ಲಾ ಅವಾಂತರವಾಯಿತು ಎಂಬುದು ಎಲ್ಲರಿಗೂ ತಿಳಿದಿದೆ. ಅದಕ್ಕೆ ಹೋಲಿಸಿದರೆ ಕಾಂಗ್ರೆಸ್ ಅಧಿಕಾರಕ್ಕೆ ಬಂದ 10 ತಿಂಗಳಲ್ಲಿ ನೆಮ್ಮದಿ ನೆಲೆಸಿದೆ. ಅಹಿತಕರ ಘಟನೆಗಳಾದಾಗಲೂ ತಕ್ಷಣ ಕ್ರಮ ಜರುಗಿದೆ. ಆದ್ದರಿಂದ ಮೈಸೂರು –ಕೊಡಗು ಲೋಕಸಭೆ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಎಂ.ಲಕ್ಷ್ಮಣ್, ಚಾಮ ರಾಜ ನಗರ ಕ್ಷೇತ್ರದ ಅಭ್ಯರ್ಥಿ ಸುನೀಲ್ ಬೋಸ್ ಗೆಲುವಿಗೆ ಮತದಾರರು ಸಹಕರಿಸಬೇಕು ಎಂದು ಮಾಜಿ ಎಂಎಲ್‌ಸಿ ಮರಿತಿಬ್ಬೇಗೌಡರು ಮನವಿ ಮಾಡಿದರು.

ಕಾಂಗ್ರೆಸ್ ಜಿಲ್ಲೆಗೆ ಉತ್ತಮ ಆಸ್ಪತ್ರೆಗಳನ್ನು ತರುವಲ್ಲಿ, ರಸ್ತೆಗಳ ಅಭಿವೃದ್ಧಿಗೆ ಶ್ರಮಿಸುವಲ್ಲಿ, ವಿವಿಧ ಆಡಳಿತಾತ್ಮಕ ಕಟ್ಟಡಗಳನ್ನು ನಿರ್ಮಿಸುವಲ್ಲಿ ಸಿದ್ದರಾಮಯ್ಯ, ಡಾ.ಹೆಚ್.ಸಿ. ಮಹದೇವಪ್ಪ ಅವರ ಕಾರ್ಯ ಶ್ಲಾಘನೀಯ. ಬಿಜೆಪಿಯಿಂದ ಕ್ಷೇತ್ರಗಳಿಗೆ ಯಾವುದೇ ಲಾಭವಿಲ್ಲ. ರಾಜ್ಯದ ಜನರ ಬಗ್ಗೆ ಕಾಳಜಿಯಿಲ್ಲ. ಅವರಿಗೆ ಮತ್ತೊಮ್ಮೆ ಅಧಿಕಾರ ದೊರೆತರೆ ದೇಶದಲ್ಲಿ ಪ್ರಜಾಪ್ರಭುತ್ವ ಉಳಿಯುವುದಿಲ್ಲ.

–ಮರಿತಿಬ್ಬೇಗೌಡ

ಕಾಂಗ್ರೆಸ್ ಜಿಲ್ಲಾ ಅಧ್ಯಕ್ಷ ಡಾ.ಬಿ.ಜೆ. ವಿಜಯ್‌ಕುಮಾರ್ ಮಾತನಾಡಿ, ಬಿಜೆಪಿ ಮುಖಂಡ ಎನ್.ಮಹೇಶ್ ಅವರು ಚಾಮರಾಜನಗರ ಕ್ಷೇತ್ರ ವ್ಯಾಪ್ತಿಯಲ್ಲಿ ರಾತ್ರಿ ಹೊತ್ತು ಪ್ರಚಾರ ಮಾಡುತ್ತಿದ್ದು, ಕಾಂಗ್ರೆಸ್ ಅಭ್ಯರ್ಥಿ ಸುನೀಲ್ ಬೋಸ್ ವಿರುದ್ಧ ವೈಯಕ್ತಿಕ ಮಾನಹಾನಿ, ತೇಜೋವಧೆಗೆ ಮುಂದಾಗಿದ್ದಾರೆ. ಜಾತಿ ಹೆಸರಿಸಿ ಮತಗಳ ಕ್ರೋಢೀಕರಣ ಮಾಡುತ್ತಿದ್ದಾರೆ. ಈ ಬಗ್ಗೆ ಚುನಾವಣಾ ಆಯೋಗಕ್ಕೆ ದೂರು ದಾಖಲಿಸಲಾಗಿದ್ದು, ಚುನಾವಣೆ ಆಯೋಗವೂ ಪಕ್ಷಪಾತಿಯಂತೆ ನಡೆದುಕೊಳ್ಳುತ್ತಿರುವುದು ಕಂಡು ಬಂದಿದೆ. ಈ ವಿಚಾರದಲ್ಲಿಯಾದರೂ ಮಹೇಶ್ ಅವರ ವಿರುದ್ಧ ಕ್ರಮ ಕೈಗೊಳ್ಳಬೇಕು. ಇಡೀ ರಾಜ್ಯದಲ್ಲಿಯೇ ಅವರನ್ನು ಚುನಾವಣೆ ಪ್ರಚಾರದಿಂದ ದೂರ ವಿರಿಸಬೇಕು. ಪ್ರಕರಣ ದಾಖಲಿಸಬೇಕು ಎಂದು ಒತ್ತಾಯಿಸಿದರು. ಸುದ್ದಿಗೋಷ್ಠಿಯಲ್ಲಿ ಮೈಸೂರು ನಗರ ಕಾಂಗ್ರೆಸ್ ನಗರಾಧ್ಯಕ್ಷ ಆರ್.ಮೂರ್ತಿ, ಬಿ.ಎನ್.ರಾಮು ಉಪಸ್ಥಿತರಿದ್ದರು.


ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

23.04.2024 ಮಂಗಳವಾರ, ಮಳೆ ನಕ್ಷತ್ರ: ಅಶ್ವಿನಿ 13.04.2024 ರಿಂದ 26.04.2024
ಕ್ರೋಧಿ ನಾಮ ಸಂವತ್ಸರ, ಉತ್ತರಾಯಣ, ವಸಂತ ಋತು, ಚೈತ್ರ ಮಾಸ, ಶುಕ್ಲ ಪಕ್ಷ,
ತಿಥಿ: ಹುಣ್ಣಿಮೆ, ನಕ್ಷತ್ರ: ಚಿತ್ತ, ರಾಹುಕಾಲ: ಮಧ್ಯಾಹ್ನ 3 ರಿಂದ 4.30ರವರೆಗೆ

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10ಕ್ಕೆ ಕರುನಾಡ ಕಬ್ಬಿಗರು, ಪ್ರಸ್ತುತಿ– ಡಾ. ವಿನೋದಾ, 6.40 ಪದಸಂಸ್ಕೃತಿ, ಪ್ರಸ್ತುತಿ– ಕೆ. ಎಲ್. ಪದ್ಮಿನಿ ಹೆಗಡೆ, 6.50 ರೈತರಿಗೆ ಸಲಹೆ, 7.15 ಕಾದಂಬರಿ ವಿಹಾರ, 8.30 ಪರಾಗ–ಬೇಸಾಯದ ಬದುಕು ಸರಾಗ, ಬಾನುಲಿ ಸರಣಿ– ಪ್ರಸ್ತುತಿ–ಎನ್.ಕೇಶವಮೂರ್ತಿ, 8.45 ಚಿತ್ರಗೀತೆ, 10.00 ಶಾಸ್ತ್ರೀಯ ಸಂಗೀತ –ಚಿಟ್ಟಿ ಬಾಬು – ವೀಣಾವಾದನ, 11.00 ಮಿಶ್ರ ಮಾಧುರ್ಯ

ಮಧ್ಯಾಹ್ನ: 12.30 ದೇವರನಾಮ, 1.20 ಭಾವಗೀತೆಗಳು, 2.30 2024ರ ಸಾರ್ವತ್ರಿಕ ಲೋಕಸಭಾ ಚುನಾವಣೆ ಮಾನ್ಯತೆ ಪಡೆದ ರಾಜ್ಯಮಟ್ಟದ ರಾಜಕೀಯ ಪಕ್ಷಗಳ ಚುನಾವಣಾ ಪ್ರಚಾರ ಭಾಷಣ, 4.30 ಕಥಾ ಕಾಲಕ್ಷೇಪ–ನಳದಮಯಂತಿ, ಪ್ರಸ್ತುತಿ–ವಿದ್ವಾನ್ ಆರ್. ಗುರುರಾಜಲು ನಾಯ್ಡು, 6.50 ಕೃಷಿರಂಗ 'ರೇಷ್ಮೆ ಐಸಿರಿ' – ರೇಷ್ಮೆ ಕೃಷಿ ತಾಂತ್ರಿಕತೆಗಳನ್ನು ಕುರಿತ ಬಾನುಲಿ ಸರಣಿ ಬೇಸಿಗೆಯಲ್ಲಿ ರೇಷ್ಮೆಹುಳು ರೋಗಗಳ ನಿರ್ವಹಣೆ ಈ ಕುರಿತು ಮೈಸೂರಿನ ಕೇಂದ್ರ ರೇಷ್ಮೆ ಸಂಶೋಧನೆ ಹಾಗೂ ತರಬೇತಿ ಸಂಸ್ಥೆಯ ವಿಜ್ಞಾನಿ ಡಾ. ಜಿ. ಮಲ್ಲಿಕಾರ್ಜುನ ಅವರೊಂದಿಗೆ ಸಂದರ್ಶನ. ಸಂದರ್ಶಕರು– ಎನ್. ಕೇಶವಮೂರ್ತಿ, 10.10 ಗಮಕ ವ್ಯಾಖ್ಯಾನ 'ಚೈತ್ರವನ' ಲಕ್ಷ್ಮೀಶನ ಜೈಮಿನಿ ಭಾರತದ ಸಮಗ್ರ ವಾಚನ ಹಾಗೂ ವ್ಯಾಖ್ಯಾನ, ವಾಚನ– ಹೆಚ್.ಆರ್. ಕೇಶವಮೂರ್ತಿ, ವ್ಯಾಖ್ಯಾನ– ಮಾರ್ಕಾಂಡೇಯ ಅವಧಾನಿ ಪ್ರಸ್ತುತಿ– ಡಾ.ಎ.ಎಸ್. ಶಂಕರನಾರಾಯಣ, 10.30 ಸವಿನೆನಪು

■ **ರಾಮ್‌ಸನ್ಸ್ ಬೊಂಬೆ ಮನೆ:** ದಸರೆ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10 ರಿಂದ ಸಂಜೆ 7ರವರೆಗೆ

■ **ಮೈಸೂರು ವಿಶ್ವವಿದ್ಯಾನಿಲಯ, ಯುವರಾಜ ಕಾಲೇಜು :** ಡಾ. ಬಿ.ಆರ್. ಅಂಬೇಡ್ಕರ್ ಅವರ 133ನೇ ಜನ್ಮ ದಿನಾಚರಣೆ, ಅಧ್ಯಕ್ಷತೆ : ಯುವರಾಜ ಕಾಲೇಜು ಪ್ರಿನ್ಸಿಪಾಲ್ ಪ್ರೊ. ಎಂ.ಕೆ. ಮಹೇಶ್, ಮುಖ್ಯ ಅತಿಥಿಗಳು : ವಿಶ್ರಾಂತ ಪ್ರಾಧ್ಯಾಪಕ ಪ್ರೊ. ರಾಜಪ್ಪ ದಳವಾಯಿ, ಉಪಸ್ಥಿತರು : ಜಿ. ಕೃಷ್ಣಮೂರ್ತಿ, ಪ್ರೊ. ಬಿ.ಎಂ. ವೆಂಕಟೇಶ್, ಪ್ರೊ.ಕೆ. ಅಜಯ್‌ಕುಮಾರ್, ಸ್ಥಳ: ಅಮೃತ ಮಹೋತ್ಸವ ಸಭಾಂಗಣ, ಯುವರಾಜ ಕಾಲೇಜು, ಬೆಳಗ್ಗೆ 11ಕ್ಕೆ.

■ **ಚಾರ್ವಾಕ ಸಂಸ್ಥೆ :** ಸಂವಿಧಾನ ಉಳಿಸಲು ಕೋಮುವಾದ ಅಳಿಸಲು ಎಡಗೈ ಬಲಗೈ ಜಾತಿಗಳು ಒಂದುಗೂಡುವ ಅನಿವಾರ್ಯತೆ ಕುರಿತು ವಿಚಾರ ಸಂಕಿರಣ, ಉದ್ಘಾಟನೆ : ಮಾಜಿ ಮೇಯರ್ ನಾರಾಯಣ, ಅಧ್ಯಕ್ಷತೆ : ಅಹಿಂದ ಜವರಪ್ಪ, ಮುಖ್ಯ ಅತಿಥಿಗಳು : ಡಾ. ಕೃಷ್ಣಮೂರ್ತಿ ಚಮರಂ, ಆರ್.ಎಸ್. ದೊಡ್ಡಣ್ಣ, ಶಿವಪ್ರಸಾದ್ ಎಂ.ಸಿ. ಹುಂಡಿ, ಸ್ಥಳ: ಕಿರು ರಂಗಮಂದಿರ, ಬೆಳಗ್ಗೆ 11ಕ್ಕೆ

■ **ಸುಯೋಗ್ ವುಮೆನ್ಸ್ ಹೆಲ್ತ್ ಕ್ಲಬ್, ಸುಯೋಗ್ ಆಸ್ಪತ್ರೆ :** ಮಹಿಳೆಯರಿಗೆ ಮಾಹಿತಿ ಮತ್ತು ಮನರಂಜನಾ ಕಾರ್ಯಕ್ರಮ, ವೈದ್ಯ ಸಾಹಿತಿ ಡಾ. ಎಸ್.ಪಿ. ಯೋಗಣ್ಣ ಅವರಿಂದ ಬೇಸಿಗೆಯಲ್ಲಿನ ದೈಹಿಕ ಬವಣೆಗಳು ಮತ್ತು ಸುಲಭ ಪರಿಹಾರೋಪಾಯಗಳು ಕುರಿತು ಉಪನ್ಯಾಸ ಕಾರ್ಯಕ್ರಮ, ಉದ್ಘಾಟನೆ : ಸಮರ್ಪಣಾ ಶಿಕ್ಷಣ ಸಂಸ್ಥೆ ಕಾರ್ಯದರ್ಶಿ ಶ್ರೀಮತಿ ಸುಧಾ ಫಣೀಶ್, ಅಧ್ಯಕ್ಷತೆ : ಸುಯೋಗ್ ವುಮೆನ್ಸ್ ಹೆಲ್ತ್ ಕ್ಲಬ್ ಅಧ್ಯಕ್ಷೆ ಶ್ರೀಮತಿ ಪನ್ನಗ ವಿಜಯ್ ಕುಮಾರ್, ಉಪಸ್ಥಿತರು : ಕ್ಲಬ್ ಗೌರವಾಧ್ಯಕ್ಷೆ ಡಾ. ಜಯಲಕ್ಷ್ಮೀ ಸೀತಾಪುರ, ಶ್ರೀಮತಿ ಗಾಯಿತ್ರಿ ಸುಂದರೇಶ್, ಶ್ರೀಮತಿ ಪದ್ಮ ಮಹದೇವ್, ಸ್ಥಳ: ಸುಯೋಗ್ ಆಸ್ಪತ್ರೆ ಸಭಾಂಗಣ, ರಾಮಕೃಷ್ಣನಗರ, ಬೆಳಗ್ಗೆ 11ಕ್ಕೆ.

■ **ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಸಾಹಿತಿಗಳು ಹಾಗೂ ಕಲಾವಿದರು :** ಮತ ಜಾಗೃತಿ ಅಭಿಯಾನ–2024, ಜಾಥಾ, ಹಾಡುಗಳು, ಕವಿಗೋಷ್ಠಿ ಹಾಗೂ ಬೀದಿ ನಾಟಕ ಪ್ರದರ್ಶನ, ಅಭಿಯಾನಕ್ಕೆ ಚಾಲನೆ : ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಉಪಸ್ಥಿತರು : ಹಿರಿಯ ರಂಗಕರ್ಮಿ ಮೈಮ್ ರಮೇಶ್, ಡಾ. ಕೆ. ಲೀಲಾಪ್ರಕಾಶ್, ರಾಜಶೇಖರ ಕದಂಬ, ಎಂ. ಚಂದ್ರಶೇಖರ್, ಡಾ. ವೈ.ಡಿ. ರಾಜಣ್ಣ, ಡಾ. ಜಯಪ್ಪ ಹೊನ್ನಾಳಿ, ಎಂ. ಮಹಾಲಿಂಗು, ಮುರಳೀಧರ್, ಮಂಜು, ಸ್ಥಳ: ಅಗ್ರಹಾರ ವೃತ್ತ, ಸಂಜೆ 5ಕ್ಕೆ

■ **ಕಾದಂಬರಿ ಏಜೆನ್ಸೀಸ್ ಮತ್ತು ವಿಕಲ ವಿಕಾಸ ಟ್ರಸ್ಟ್ :** ಮಕ್ಕಳ ಪುಸ್ತಕಗಳ ಪ್ರದರ್ಶನ ಮತ್ತು ಮಾರಾಟ, ಸ್ಥಳ: ನಂ.45, ಕೆ.ಆರ್. ಸರ್ಕಲ್, ದೇವರಾಜ ಅರಸು ರಸ್ತೆ, ಸಂಜೆ 5.30ಕ್ಕೆ

■ **ದೀಕ್ಷಿತ್ ಆರೋಗ್ಯ ಧಾಮ :** ರಾಮೋತ್ಸವ ವಿಶೇಷ ಮಾಸದ ಆನಂದ ಆರೋಗ್ಯ ಕಾರ್ಯಕ್ರಮ, ವಿದ್ವಾನ್ ಎಂ.ಎಸ್. ದೀಪಕ್ ಅವರಿಂದ ರಾಮನಾಮ ತಾನಾನುರಣನ, ವಿದುಷಿ ಪೃಥ್ವಿ ಭಾಸ್ಕರ್–ಪಿಟೀಲು, ವಿದ್ವಾನ್ ನಂದನ್ ಕಶ್ಯಪ್–ಮೃದಂಗ, ಡಾ. ಸಿ.ಎಸ್. ಅನಿಲ್ ಕುಮಾರ್ ಅವರಿಂದ ಹೆಸರಲ್ಲೇನಿದೆ? ಕುರಿತು ಉಪನ್ಯಾಸ, ಸ್ಥಳ: ದೀಕ್ಷಿತ್ ಆರೋಗ್ಯ ಧಾಮ, ವಿಜಯನಗರ 3ನೇ ಹಂತ, ಸಂಜೆ 6 ರಿಂದ.

■ **ಮೈಸೂರು ನಗರ ಮತ್ತು ಜಿಲ್ಲಾ ಬ್ರಾಹ್ಮಣ ಸಂಘ :** ಕಡ್ಡಾಯ ಮತದಾನ ಜಾಗೃತಿ ಸಭೆ, ಸ್ಥಳ: ಶ್ರೀ ಕೃಷ್ಣಧಾಮ, ಸರಸ್ವತಿಪುರಂ, ಸಂಜೆ 6ಕ್ಕೆ

■ **ಶ್ರೀ ರಾಮಸೇವಾ ಮಂಡಲಿ :** 71ನೇ ವರ್ಷದ ಶ್ರೀ ರಾಮೋತ್ಸವ, ಗಾನಕಲಾಶ್ರೀ ವಿದ್ವಾನ್ ಎಲ್.ವಿ. ಮುಕುಂದ್ ಅವರಿಂದ ವೇಣುವಾದನ, ವಿದ್ವಾನ್ ವೆಂಕಟೇಶ್ ಜೋಸ್ಯರ್–ಪಿಟೀಲು, ವಿದ್ವಾನ್ ಜಿ.ಎಸ್. ನಾಗರಾಜ್–ಮೃದಂಗ, ವಿದ್ವಾನ್ ಆರ್. ನರಸಿಂಹನ್–ಘಟಂ, ಸ್ಥಳ: ಶ್ರೀರಾಮ ಸೇವಾ ಮಂಡಲಿ, 9ನೇ ಅಡ್ಡ ರಸ್ತೆ, ವಿದ್ಯಾರಣ್ಯಪುರಂ, ಸಂಜೆ 6.30ಕ್ಕೆ.

■ **ಶ್ರೀ ರಾಮಾಭ್ಯುದಯ ಸಭಾ, ಪಬ್ಲಿಕ್ ಚಾರಿಟೆಬಲ್ ಟ್ರಸ್ಟ್:** 134ನೇ ವರ್ಷದ ಶ್ರೀ ರಾಮೋತ್ಸವ, ವಿದುಷಿ ಜೆ.ಬಿ. ಶೃತಿ ಸಾಗರ್ ಅವರಿಂದ ಕೊಳಲು ವಾದನ, ವಿದ್ವಾನ್ ಕಾರ್ತಿಕ್ ನಾಗರಾಜ್–ಪಿಟೀಲು, ವಿದ್ವಾನ್ ಅನಂತ ಆರ್. ಕೃಷ್ಣ–ಮೃದಂಗ, ವಿದ್ವಾನ್ ಗುರುಪ್ರಸನ್ನ–ಘಟಂ, ಸ್ಥಳ: ಶ್ರೀರಾಮಮಂದಿರ, ವಿನೋಬ ರಸ್ತೆ, ಶ್ರೀರಾಮಪೇಟೆ ಸಂಜೆ 6.30 ರಿಂದ.

■ **ಶ್ರೀರಾಮಮಂದಿರ:** 58ನೇ ವರ್ಷದ ರಾಮೋತ್ಸವ, ಬೆಳಗ್ಗೆ 7ಕ್ಕೆ ಶ್ರೀ ಲಲಿತಾಹೋಮ, ಸಂಜೆ 6.30ಕ್ಕೆ ಚಿತ್ರ ಪೌರ್ಣಿಮಾ ಪ್ರಯುಕ್ತ ಶ್ರೀ ಸತ್ಯನಾರಾಯಣ ಸ್ವಾಮಿ ಪೂಜೆ, ಶ್ರೀ ಸುದರ್ಶನ ನಾರಸಿಂಹ ಹೋಮ, ಸ್ಥಳ: ರಾಮಮಂದಿರ ಆವರಣ, ಜಯನಗರ.

■ **ಶ್ರೀ ರಾಮಕೃಷ್ಣ ಪರಮಹಂಸ ಸೇವಾ ಪ್ರತಿಷ್ಠಾನ :** ತಿಂಗಳ ತಿರುವು ಕಾರ್ಯಕ್ರಮ, ಸಾನ್ನಿಧ್ಯ : ಶ್ರೀ ಮುಕ್ತಿದಾನಂದ ಮಹಾರಾಜ್, ತಿಂಗಳ ಅತಿಥಿಗಳು : ಗಾಂಧಿನಗರ ಶ್ರೀ ಶಿವಯೋಗಿ ಮಠದ ಶ್ರೀ ಜ್ಞಾನಪ್ರಕಾಶ ಸ್ವಾಮೀಜಿ, ಉಪಸ್ಥಿತರು : ಡಿ. ಮಾದೇಗೌಡ, ಡಾ. ಎಸ್.ಪಿ. ಯೋಗಣ್ಣ, ಕೆಂಪಲಿಂಗರಾಜು, ಸ್ಥಳ: ಪರಮಹಂಸ ಮಂಟಪ, ರಾಮಕೃಷ್ಣನಗರ, ಸಂಜೆ 6.30ಕ್ಕೆ.

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ | ಏಪ್ರಿಲ್ 23 ಮಂಗಳವಾರ 2024


ಮೈಸೂರು ಮಿತ್ರ 45

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 45 | ಸಂಚಿಕೆ: 8 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com
₹4

ವಾರದಲ್ಲಿ ರಾಜ್ಯದ ರೈತರಿಗೆ ಬರ ಪರಿಹಾರ ಬಿಡುಗಡೆ

ಸುಪ್ರೀಂಕೋರ್ಟ್‌ಗೆ ಕೇಂದ್ರ ಸರ್ಕಾರ ಭರವಸೆ



ಬೆಂಗಳೂರು, ಏ.22(ಕೆಎಂಶಿ)– ಕರ್ನಾಟಕಕ್ಕೆ ಇನ್ನೊಂದು ವಾರದಲ್ಲಿ ಬರ ಪರಿಹಾರ ಹಣ ಬಿಡುಗಡೆ ಮಾಡುವುದಾಗಿ ಕೇಂದ್ರ ಸರ್ಕಾರ ಪ್ರಕಟಿಸಿದೆ.

ರಾಜ್ಯಕ್ಕೆ ಬರ ಪರಿಹಾರ ನಿಧಿ ಬಂದಿಲ್ಲ. ಪರಿಹಾರ ನೀಡಲು ಕೇಂದ್ರ ಸರ್ಕಾರಕ್ಕೆ ನಿರ್ದೇಶನ ನೀಡುವಂತೆ ಕರ್ನಾಟಕ ಸರ್ಕಾರ ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಿತ್ತು. ನ್ಯಾಯಮೂರ್ತಿ ಬಿ.ಆರ್. ಗವಾಯಿ ನೇತೃತ್ವದ ದ್ವಿಸದಸ್ಯ ಪೀಠ ಸೋಮವಾರ ವಿಚಾರಣೆ ನಡೆಸುವ ವೇಳೆ ಕೇಂದ್ರ ಸರ್ಕಾರದ ಪರ ಅಟಾರ್ನಿ ಜನರಲ್ ವೆಂಕಟ ರಮಣಿ ಮಧ್ಯೆ ಪ್ರವೇಶಿಸಿ, ಕರ್ನಾಟಕದ ರೈತರಿಗೆ ಪರಿಹಾರ ನೀಡಲು ಕೇಂದ್ರ ಚುನಾವಣಾ ಆಯೋಗ ಸಮ್ಮತಿ ನೀಡಿದೆ.

ಆಯೋಗ ಸಮ್ಮತಿ ನೀಡಿರುವ ಹಿನ್ನೆಲೆಯಲ್ಲಿ ಇನ್ನೊಂದು ವಾರದೊಳಗೆ ರಾಜ್ಯದ ರೈತರಿಗೆ ಪರಿಹಾರ ಬಿಡುಗಡೆ ಮಾಡಲಾಗುವುದು ಎಂಬ ಮಾಹಿತಿ ನೀಡುತ್ತಿದ್ದಂತೆ ವಿಚಾರಣೆಯನ್ನು ಏಪ್ರಿಲ್ 29ಕ್ಕೆ ಮುಂದೂಡಲಾಯಿತು. ಮಾಹಿತಿ ತಿಳಿಯುತ್ತಿದ್ದಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ತಮ್ಮ ಎಕ್ಸ್ ಖಾತೆಯಲ್ಲಿ ಹರ್ಷ ವ್ಯಕ್ತಪಡಿಸಿ, ಸುಪ್ರೀಂ ಕೋರ್ಟ್‌ಗೆ ಕೇಂದ್ರ ಭರವಸೆ ನೀಡಿದ್ದನ್ನು ಸ್ವಾಗತಿಸಿದ್ದಾರೆ. ಬರ ಪರಿಹಾರ ವಿಳಂಬ ವಿಚಾರದಲ್ಲಿ ಸುಪ್ರೀಂ ಕೋರ್ಟ್ ಮಧ್ಯಸ್ಥಿಕೆ ವಹಿಸಿರುವುದಕ್ಕೆ ಮುಖ್ಯಮಂತ್ರಿ ಧನ್ಯವಾದ ತಿಳಿಸಿದ್ದಾರೆ.



ಮುಂಗಾರು ಮತ್ತು ಹಿಂಗಾರು ರಾಜ್ಯದಲ್ಲಿ ಕೈಕೊಟ್ಟಿದ್ದರಿಂದ 223 ತಾಲೂಕುಗಳು ಬರಕ್ಕೆ ಸಿಲುಕಿ ರೈತರು ಸಂಕಷ್ಟದಲ್ಲಿದ್ದು, ವಿಪತ್ತು ನಿರ್ವಹಣಾ ಪ್ರಾಧಿಕಾರದ ವತಿಯಿಂದ ಪರಿಹಾರ ನೀಡುವಂತೆ ಕೇಂದ್ರಕ್ಕೆ ಮನವಿ ಸಲ್ಲಿಸಿತ್ತು. ಮನವಿ ನಂತರ ಕೇಂದ್ರ ಕೃಷಿ ಇಲಾಖಾ ಅಧಿಕಾರಿಗಳ ತಂಡ ಕಳುಹಿಸಿ, ಬರ ಅಧ್ಯಯನ ವರದಿ ತರಿಸಿಕೊಂಡಿತ್ತು. ಇಷ್ಟಾದ ನಂತರವೂ ಪರಿಹಾರ ● 9ನೇ ಪುಟಕ್ಕೆ

"ಕರ್ನಾಟಕ ರಾಜ್ಯಕ್ಕೆ ಬರ ಪರಿಹಾರ ಬಿಡುಗಡೆ ಸಂಬಂಧ ಒಂದು ವಾರದೊಳಗೆ ಕ್ರಮ ತೆಗೆದುಕೊಳ್ಳುವುದಾಗಿ ಕೇಂದ್ರ ಬಿಜೆಪಿ ಸರ್ಕಾರ ಸುಪ್ರಿಂ ಕೋರ್ಟ್‌ನಲ್ಲಿ ಹೇಳಿದೆ. ಪರಿಹಾರ ಬಿಡುಗಡೆಗೆ ಚುನಾವಣಾ ಆಯೋಗ ಕೂಡಾ ಸಮ್ಮತಿಸಿದೆ ಎಂದು ಅಟಾರ್ನಿ ಜನರಲ್ ನ್ಯಾಯಾಲಯಕ್ಕೆ ತಿಳಿಸಿದ್ದಾರೆ. ಬರ ಪರಿಹಾರಕ್ಕಾಗಿ ಮನವಿ ನೀಡಿ ಐದು ತಿಂಗಳುಗಳು ಕಳೆದರೂ ಕೇಂದ್ರ ಸರ್ಕಾರವು ಯಾವುದೇ ನಿರ್ಣಯ ಕೈಗೊಳ್ಳದೆ ನ್ಯಾಯಾಲಯದ ಮೆಟ್ಟಿಲೇರುವಂತಹ ಅನಿವಾರ್ಯತೆಯನ್ನು ಸೃಷ್ಟಿಸಿತ್ತು ಇಡೀ ನಾಡಿನ ರೈತರಿಗೆ ಸಿಗಬೇಕಿದ್ದ ನ್ಯಾಯಯುತ ಪರಿಹಾರವನ್ನು ಕೊಡಿಸುವ ನಮ್ಮ ಹೋರಾಟಕ್ಕೆ ಸಿಕ್ಕ ಮೊದಲ ಹಂತದ ಜಯ. –ಸಿಎಂ ಸಿದ್ದರಾಮಯ್ಯ



ಹುಕ್ಕಾ ನಿಷೇಧ ಎತ್ತಿ ಹಿಡಿದ ಹೈಕೋರ್ಟ್



ಬೆಂಗಳೂರು: ಬಹುಕೋಟಿ ಮೊತ್ತದ ವಹಿವಾಟು ಹೊಂದಿದೆ ಎಂದೇ ಅಂದಾಜಿಸಲಾಗಿರುವ ಹುಕ್ಕಾ ಮತ್ತು ಹುಕ್ಕಾ ಬಾರ್‌ಗಳನ್ನು ನಿಷೇಧಿಸಿದ್ದ ರಾಜ್ಯ ಸರ್ಕಾರದ ಆದೇಶವನ್ನು ಪ್ರಶ್ನಿಸಿದ್ದ ಎಲ್ಲ ರಿಟ್ ಅರ್ಜಿಗಳನ್ನು ಹೈಕೋರ್ಟ್ ವಜಾ ಮಾಡಿ ಮಹತ್ವದ ತೀರ್ಪು ನೀಡಿದೆ.

ಈ ಸಂಬಂಧ ಆರ್.ಭರತ್ ಸೇರಿದಂತೆ ಹತ್ತಕ್ಕೂ ಹೆಚ್ಚು ಅರ್ಜಿದಾರರು ಸಲ್ಲಿಸಿದ್ದ ಅರ್ಜಿಗಳನ್ನು ವಿಚಾರಣೆ ನಡೆಸಿ ಕಾಯ್ದಿರಿಸಿದ್ದ ತೀರ್ಪನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಸೋಮವಾರ ಪ್ರಕಟಿಸಿತು. ಸಿಗರೇಟು ಮತ್ತು ಇತರೆ ತಂಬಾಕು ಉತ್ಪನ್ನಗಳ ಜಾಹೀರಾತು ನಿಷೇಧ ಮತ್ತು ವ್ಯಾಪಾರ, ವಹಿವಾಟು, ಉತ್ಪಾದನೆ, ಪೂರೈಕೆ ● 9ನೇ ಪುಟಕ್ಕೆ

ಸಿಇಟಿಯಲ್ಲಿ ಪಠ್ಯಕ್ರಮ ಹೊರತಾದ ಪ್ರಶ್ನೆ

ತಜ್ಞರ ಸಮಿತಿ ರಚನೆ; ನಾಲ್ಕು ವಿಷಯಗಳಿಗೆ ಸಂಬಂಧಿಸಿದಂತೆ ತಕ್ಷಣ ವರದಿಗೆ ಸರ್ಕಾರ ಸೂಚನೆ

ಬೆಂಗಳೂರು, ಏ.22(ಕೆಎಂಶಿ)– ಕರ್ನಾಟಕ ಸಾಮಾನ್ಯ ಪ್ರವೇಶ ಪರೀಕ್ಷೆಯಲ್ಲಿ ಪಠ್ಯಕ್ರಮದಿಂದ ಹೊರತಾಗಿರುವ ಪ್ರಶ್ನೆಗಳ ಸಂಖ್ಯೆಗಳನ್ನು ಖಚಿತಪಡಿಸಿಕೊಳ್ಳಲು ಸರ್ಕಾರವು 4 ವಿಷಯಗಳಿಗೆ ಸಂಬಂಧಿಸಿದಂತೆ ಪ್ರತ್ಯೇಕ ತಜ್ಞರ ಸಮಿತಿಯನ್ನು ರಚಿಸಿದೆ.

ತಜ್ಞರ ಸಮಿತಿಯು ತನ್ನ ವರದಿಯನ್ನು ತಕ್ಷಣವೇ ನೀಡುವಂತೆ ಸರ್ಕಾರ ಆದೇಶಿಸಿದೆ. ಸಿಇಟಿ ಪರೀಕ್ಷೆಗೆ ಹಾಜರಾದ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಕೆಇಎಯು ಕಾರ್ಯನಿರ್ವಹಿಸಲಿದೆ. ತಜ್ಞರ ಸಮಿತಿಯ ವರದಿಯನ್ನು ಆಧರಿಸಿ ಈ ಬಗ್ಗೆ ಮುಂದಿನ ನಿರ್ಧಾರ ಕೈಗೊಳ್ಳಲಾಗುವುದು. ವಿದ್ಯಾರ್ಥಿಗಳ ಹಿತಾಸಕ್ತಿಗೆ ಹೆಚ್ಚಿನ ಆದ್ಯತೆ ನೀಡಲಾಗುವುದು ಮತ್ತು ವಿದ್ಯಾರ್ಥಿಗಳಿಗೆ ಯಾವುದೇ ತೊಂದರೆಯಾಗುವುದಿಲ್ಲ ಎಂದು ಉನ್ನತ ಶಿಕ್ಷಣ ಸರ್ಕಾರದ ಪ್ರಧಾನ ಕಾರ್ಯದರ್ಶಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕರ್ನಾಟಕ ಸಾಮಾನ್ಯ ಪ್ರವೇಶ ಪರೀಕ್ಷೆಯನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರದಿಂದ ಏಪ್ರಿಲ್ 18 ಮತ್ತು 19ರಂದು ನಡೆಸಿದ್ದು, ಸಿಇಟಿ ಪರೀಕ್ಷೆಯನ್ನು 4 ವಿಷಯಗಳಿಗೆ (ಭೌತಶಾಸ್ತ್ರ, ರಸಾಯನ ಶಾಸ್ತ್ರ, ಗಣಿತ ಮತ್ತು ಜೀವಶಾಸ್ತ್ರ) ನಡೆಸಲಾಗಿದೆ. ರಾಜ್ಯಾದ್ಯಂತ 3 ಲಕ್ಷಕ್ಕೂ ಹೆಚ್ಚು ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದಾರೆ.

ಪರೀಕ್ಷೆಗಳು ನಡೆದ ನಂತರ, ಪತ್ರಿಕೆಗಳ ವರದಿಗಳು ಹಲವಾರು ಪ್ರಶ್ನೆಗಳು ಸಿಇಟಿಯ ಪಠ್ಯಕ್ರಮದ ಹೊರತಾಗಿವೆ ಎಂದು ಉಲ್ಲೇಖಿಸಿವೆ. ಅನೇಕ ಪ್ರಶ್ನೆಗಳು ಪಠ್ಯಕ್ರಮದ ಹೊರತಾಗಿರುವ ಕಾರಣ ಇದು ವಿದ್ಯಾರ್ಥಿಗಳ ಮೇಲೆ ಪರಿಣಾಮ ಬೀರಿದೆ ಎಂದು ಕೋರಿರುವ ಮನವಿಗಳು ಸಹ ಸ್ವೀಕೃತವಾಗಿವೆ. ಗ್ರೇಸ್ ಅಂಕಗಳನ್ನು ಒದಗಿಸುವಂತೆ ಅಥವಾ ಮರು ಪರೀಕ್ಷೆಯನ್ನು ನಡೆಸುವಂತೆಯೂ ಬೇಡಿಕೆ ಸಲ್ಲಿಸಲಾಗಿದೆ. ಪ್ರಶ್ನೆಗಳಿಗೆ ಆಕ್ಷೇಪಣೆಗಳನ್ನು ಸಲ್ಲಿಸಲು ಕೆಇಎಯು ವಿದ್ಯಾರ್ಥಿಗಳಿಗೆ ಏಪ್ರಿಲ್ 27ರವರೆಗೆ ಅವಕಾಶ ನೀಡಿದೆ. ಈ ಸಂಬಂಧ ಸರ್ಕಾರಕ್ಕೆ ವಿಸ್ತೃತ ವರದಿ ಸಲ್ಲಿಸುವಂತೆ ಕೆಇಎಗೆ ಸೂಚಿಸಲಾಗಿದೆ.

ಮೈಸೂರು–ಕೊಡಗು ಪಾರಂಪರಿಕತೆ ರಕ್ಷಣೆಗೆ ಜೈಪುರ ಮಾದರಿ ಪಾರಂಪರಿಕ ಪ್ರಾಧಿಕಾರ ರಚನೆ

ಕಾಂಗ್ರೆಸ್ ಅಭ್ಯರ್ಥಿ ಲಕ್ಷ್ಮಣ 23 ಅಂಶಗಳ ಪ್ರತ್ಯೇಕ ಚುನಾವಣಾ ಪ್ರಣಾಳಿಕೆ ಬಿಡುಗಡೆ



ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಎಂ.ಲಕ್ಷ್ಮಣ ಪ್ರತ್ಯೇಕ ಚುನಾವಣಾ ಪ್ರಣಾಳಿಕೆಯನ್ನು ಶಾಸಕ ತನ್ವೀರ್ ಸೇಠ್ ಬಿಡುಗಡೆ ಮಾಡಿದರು.

ಮೈಸೂರು,ಏ.22 (ಎಂಟಿವೈ) ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಎಂ. ಲಕ್ಷ್ಮಣ ಅವರು ತಾವು ಸ್ಪರ್ಧಿಸುತ್ತಿರುವ ಕ್ಷೇತ್ರಕ್ಕೆ ಸಂಬಂಧಿಸಿದಂತೆ 23 ಅಂಶಗಳ ಪ್ರತ್ಯೇಕ ಚುನಾವಣಾ ಪ್ರಣಾಳಿಕೆ ಬಿಡುಗಡೆ ಮಾಡಿದ್ದು, ಮೈಸೂರು ಮತ್ತು ಕೊಡಗು ಪಾರಂಪರಿಕ ಪ್ರದೇಶಗಳ ಅಭಿವೃದ್ಧಿಗಾಗಿ ಜೈಪುರ ಮಾದರಿ ಪಾರಂಪರಿಕ ಪ್ರಾಧಿಕಾರ ರಚನೆ, ಐಟಿ,ಬಿಟಿ ಕಂಪನಿಗಳ ಸ್ಥಾಪನೆ, ಕೊಡಗಿನಲ್ಲಿ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆ ನಿರ್ಮಾಣ, ಕಾಫಿ ಬೆಳೆಗಾರರ ಸಮಸ್ಯೆ ಪರಿಹಾರ ಸೇರಿದಂತೆ ಹಲವಾರು ಭರವಸೆಗಳನ್ನು ನೀಡಿದ್ದಾರೆ.

ಮೈಸೂರು–ಕೊಡಗು ಜಿಲ್ಲೆಗಳ ಸಮಗ್ರ ಅಭಿವೃದ್ಧಿಗಾಗಿ ಜೈಪುರ ಮಾದರಿ ಪ್ರಾಧಿಕಾರ ರಚಿಸಿ ಕೇಂದ್ರದಿಂದ ಮೂರು ಸಾವಿರ ಕೋಟಿ ಅನುದಾನ ಬಿಡುಗಡೆಗೆ ಪ್ರಯತ್ನ, ಎರಡು ಜಿಲ್ಲೆಗಳಲ್ಲೂ ಐಟಿಬಿಟಿ ಕಂಪನಿಗಳನ್ನು ಪ್ರಾರಂಭಿಸಲು ಆದ್ಯತೆ ನೀಡಿ ನಿರುದ್ಯೋಗ ಸಮಸ್ಯೆ ನಿವಾರಣೆ, ಪಿರಿಯಾಪಟ್ಟಣದಲ್ಲಿ ಕೇಂದ್ರ ಸರ್ಕಾರದಿಂದ ಕೃಷಿ ಸಂಶೋಧನಾ ಕೇಂದ್ರ ಸ್ಥಾಪನೆಗೆ ಪ್ರಯತ್ನಿಸಲಾಗುವುದು. ಎಲ್ಲಾ ತಾಲೂಕುಗಳಲ್ಲೂ ಕೋಲ್ಡ್ ಸ್ಟೋರೇಜ್ ಯುನಿಟ್‌ಗಳನ್ನು ಸ್ಥಾಪಿಸಲಾಗುವುದು. ಕೊಡಗಿಗೆ ಸಂಬಂಧಿಸಿದಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕಾವೇರಿ ಪ್ರವಾಸೋದ್ಯಮ ಪ್ರಾಧಿಕಾರ ಸ್ಥಾಪಿಸಿರುವುದರಿಂದ ಕೇಂದ್ರ ಸರ್ಕಾರದ ನೆರವಿನೊಂದಿಗೆ ಮತ್ತಷ್ಟು ಅನುದಾನ ಬಿಡುಗಡೆಗೊಳಿಸಿ ಕೊಡಗಿನ ಪ್ರವಾಸೋದ್ಯಮ ಅಭಿವೃದ್ಧಿಗೆ ಮಾಸ್ಟರ್ ಪ್ಲಾನ್ ರಚಿಸಲಾಗುವುದು ಎಂದು ಅವರು ತಿಳಿಸಿದ್ದಾರೆ. ಕೊಡಗಿನಲ್ಲಿ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ ಹಾಗೂ ತುರ್ತು ಟ್ರಾಮಾ ಸೆಂಟರ್ ಸ್ಥಾಪನೆಗೆ ಪ್ರಯತ್ನ. ಸೋಮವಾರಪೇಟೆಯಲ್ಲಿ ಸೈನ್ಸ್ ಸಿಟಿ ಪ್ಲಾನಿಟೋರಿಯಂ ವ್ಯವಸ್ಥೆ ಮೂಲಕ ಉನ್ನತ ಪದವಿ ವಿದ್ಯಾರ್ಥಿಗಳಿಗೆ ಅನುಕೂಲವಾಗುವಂತೆ ಟೆಕ್ನಾಲಜಿ ಪಾರ್ಕ್ ಸ್ಥಾಪನೆ. ಕೊಡಗಿನ ಕಾಫಿ, ಏಲಕ್ಕಿ, ಮೆಣಸು ಬೆಳೆಗಾರರು ಹಾಗೂ ಕಾರ್ಮಿಕರು ಮತ್ತು ನಿವೃತ್ತ ಸೇನಾನಿಗಳ ಸಮಸ್ಯೆಗಳಿಗೆ ಪ್ರತ್ಯೇಕ ಪ್ಯಾಕೇಜ್ ಮೂಲಕ ಪರಿಹಾರ. ಫೀಲ್ಡ್ ಮಾರ್ಷಲ್ ಕಾರ್ಯಪ್ಪ ಅವರಿಗೆ ಮರಣೋತ್ತರ ಭಾರತರತ್ನ ಕೊಡಿಸಲು ಪ್ರಯತ್ನಿಸಲಾಗುವುದು. ಮಡಿಕೇರಿ ನಗರದಲ್ಲಿ ಕೇಂದ್ರ ಸರಕಾರದ ನೆರವಿನಿಂದ ಲಘು ವಿಮಾನ ನಿಲ್ದಾಣ ನಿರ್ಮಿಸಲು ಪ್ರಯತ್ನ. ಹುಣಸೂರಿನಲ್ಲಿ ಕೇಂದ್ರಿಯ ವಿಶ್ವವಿದ್ಯಾನಿಲಯ ಸ್ಥಾಪಿಸಲಾಗುವುದು. ಕಟ್ಟಡ ಕಾರ್ಮಿಕರು, ಗುತ್ತಿಗೆದಾರರಿಗೆ, ವಾಹನಗಳ ದುರಸ್ತಿದಾರರಿಗೆ, ಕಾರ್ಪೆಂಟರ್‌ಗಳಿಗೆ, ಪೈಂಟಿಂಗ್ ಕೆಲಸ ಮಾಡುವವರಿಗಾಗಿ ಕೌಶಲ್ಯ ತರಬೇತಿ ಕೇಂದ್ರ ಸ್ಥಾಪಿಸಲಾಗುವುದು ಸೇರಿದಂತೆ 23 ಅಂಶಗಳನ್ನು ಪ್ರಣಾಳಿಕೆಯಲ್ಲಿ ತಿಳಿಸಿದ್ದಾರೆ. ಮೈಸೂರಿನ ಕಾಂಗ್ರೆಸ್ ● 9ನೇ ಪುಟಕ್ಕೆ

ಬಿಜೆಪಿಯಿಂದ ಮಾಜಿ ಡಿಸಿಎಂ ಕೆ.ಎಸ್.ಈಶ್ವರಪ್ಪ ಉಚ್ಚಾಟನೆ

ಬೆಂಗಳೂರು: ಮಾಜಿ ಸಿಎಂ ಬಿಎಸ್ ಯಡಿಯೂರಪ್ಪ ಹಾಗೂ ಬಿಜೆಪಿ ವಿರುದ್ಧ ಸೆಡ್ಡು ಹೊಡೆದು ಶಿವಮೊಗ್ಗ ಲೋಕಸಭೆ ಚುನಾವಣೆಯಿಂದ ಪಕ್ಷೇತರ ಅಭ್ಯರ್ಥಿಯಾಗಿ ಸ್ಪರ್ಧಿಸುತ್ತಿರುವ ಮಾಜಿ ಡಿಸಿಎಂ ಕೆಎಸ್ ಈಶ್ವರಪ್ಪರನ್ನು ಪಕ್ಷದಿಂದ ಉಚ್ಚಾಟಿಸಲಾಗಿದೆ.

ಶಿವಮೊಗ್ಗ ಲೋಕಸಭೆ ಚುನಾವಣೆಯಿಂದ ನಾಮಪತ್ರ ವಾಪಸ್ ಪಡೆಯುವಂತೆ ಈಶ್ವರಪ್ಪ ಅವರಿಗೆ ಡೆಡ್‌ಲೈನ್ ನೀಡಲಾಗಿತ್ತು. ಆದರೆ ಅವರು ನಾಮಪತ್ರ ಹಿಂಪಡೆಯದ ಕಾರಣ ರಾಜ್ಯ ಬಿಜೆಪಿ ಶಿಸ್ತು ಸಮಿತಿ ಕೆಎಸ್ ಈಶ್ವರಪ್ಪ ಅವರನ್ನು ಆರು ವರ್ಷಗಳ ಕಾಲ ಪಕ್ಷದಿಂದ ಉಚ್ಚಾಟನೆ ಮಾಡಿದ್ದಾರೆ. ಮಾಜಿ ಮುಖ್ಯಮಂತ್ರಿ ಬಿಎಸ್ ಯಡಿಯೂರಪ್ಪ ಅವರಿಗೆ ಸೆಡ್ಡು ಹೊಡೆದು, ಅವರ ಪುತ್ರ ಬಿವೈ ರಾಘವೇಂದ್ರ ವಿರುದ್ಧ ಬಂಡಾಯ ಅಭ್ಯರ್ಥಿಯಾಗಿ ನಾಮಪತ್ರ ಸಲ್ಲಿಸಿದ್ದ ಮಾಜಿ ಡಿಸಿಎಂ ಕೆಎಸ್ ಈಶ್ವರಪ್ಪ ಅವರು ಕೊನೆ ಕ್ಷಣದಲ್ಲಿ ನಾಮಪತ್ರ ವಾಪಸ್ ಪಡೆಯಬಹುದು ಎಂಬ ● 9ನೇ ಪುಟಕ್ಕೆ

ನಾನು ಉಚ್ಚಾಟನೆಗೆ ಹೆದರುವುದಿಲ್ಲ



ನಾನು ಉಚ್ಚಾಟನೆಗೆ ಹೆದರುವುದಿಲ್ಲ. ಚುನಾವಣೆಯಲ್ಲಿ ಗೆದ್ದು ಮತ್ತೆ ಬಿಜೆಪಿಗೆ ಹೋಗುತ್ತೇನೆ ಎಂದು ಪಕ್ಷೇತರ ಅಭ್ಯರ್ಥಿ ಕೆ.ಎಸ್. ಈಶ್ವರಪ್ಪ ಹೇಳಿದ್ದಾರೆ. ಬಿಜೆಪಿಯಿಂದ 6 ವರ್ಷ ಉಚ್ಚಾಟನೆ ಬೆನ್ನಲ್ಲೇ ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಪ್ಪ, ಮಕ್ಕಳು ಆರಂಭದಿಂದ ಸುಳ್ಳು ಹೇಳುತ್ತಾ ಬಂದಿದ್ದಾರೆ. ಅವರು ಷಡ್ಯಂತ್ರ ಮಾಡುತ್ತಾ ಬಂದರು. ಅವರು ಯಾವ ಮುಖ ಇಟ್ಟುಕೊಂಡು ಉತ್ತರ ನೀಡುತ್ತಾರೆ. ಅವರು ಪ್ರಕ್ರಿಯೆ ನೀಡಲಿ, ನಂತರ ನಾನು ಅವರಿಗೆ ಉತ್ತರ ನೀಡುತ್ತೇನೆ ಎಂದು ವಾಗ್ದಾಳಿ ಮಾಡಿದ್ದಾರೆ.

ಬಿಎಸ್ ಯಡಿಯೂರಪ್ಪ ಕುಟುಂಬ ದಿಕ್ಕು ತಪ್ಪಿಸುವ ಪ್ರಯತ್ನ ಮಾಡಿದರು. ಪ್ರಧಾನಿ ಮೋದಿ ಕಾರ್ಯಕ್ರಮಕ್ಕೆ ಈಶ್ವರಪ್ಪ ಬರುತ್ತಾರೆ ಅಂದರು. ಬಳಿಕ ನಾಮಪತ್ರ ಹಾಕುವುದಿಲ್ಲ ಎಂದಿದ್ದರು. ದಿನಾಂಕ 19ನೇ ತಾರೀಖು ಶಾಕಿಂಗ್ ಅಂತಾ ಹೇಳಿದ್ದರು. ಇಂದು ನಾಮಪತ್ರ ವಾಪಸ್‌ಗೆ ಕಡೇ ದಿನ. ಇಂದು ನಾನು ಕಣದಲ್ಲಿದ್ದೇನೆ. ನನಗೆ ಕಾಂಗ್ರೆಸ್ ಮತ್ತು ಜೆಡಿಎಸ್ ಮುಖಂಡರ ಬೆಂಬಲವಿದೆ ಎಂದಿದ್ದಾರೆ. ನಾನು ಐದು ಬಾರಿ ಕಮಲದ ಚಿಹ್ನೆಯಿಂದ ಸ್ಪರ್ಧೆ ಮಾಡಿದ್ದೇನೆ. ನನಗೆ ರೈತನ ಚಿಹ್ನೆ ಬಂದಿರುವುದು ಸಂತೋಷ ತಂದಿದೆ. ಲೋಕಸಭೆಯಲ್ಲಿ ಶಿವಮೊಗ್ಗ ಕ್ಷೇತ್ರದಿಂದ ನನಗೆ ಶೇ. 60ರಷ್ಟು ಬಿಜೆಪಿ ಬೆಂಬಲ ಇದೆ ಎಂದು ಹೇಳಿದ್ದಾರೆ.

ಸೂರತ್ ಕ್ಷೇತ್ರದ ಅಭ್ಯರ್ಥಿ ಅವಿರೋಧ ಆಯ್ಕೆ

ಚುನಾವಣೆಗೂ ಮೊದಲೇ ಖಾತೆ ತೆರೆದ ಬಿಜೆಪಿ

ಸೂರತ್: ಕಾಂಗ್ರೆಸ್ ಅಭ್ಯರ್ಥಿಯ ನಾಮಪತ್ರ ತಿರಸ್ಕೃತ ಹಾಗೂ 8 ಅಭ್ಯರ್ಥಿಗಳು ಕಣದಿಂದ ಹಿಂದೆ ಸರಿದ ಕಾರಣ ಗುಜರಾತ್‌ನ ಸೂರತ್ ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಮುಖೇಶ್ ದಲಾಲ್ ಅವಿರೋಧವಾಗಿ ಲೋಕಸಭೆಗೆ ಆಯ್ಕೆಯಾಗಿದ್ದಾರೆ ಎಂದು ಬಿಜೆಪಿ ಹೇಳಿದೆ.



ಸೂರತ್ ಲೋಕಸಭಾ ಕ್ಷೇತ್ರದಲ್ಲಿ ಇತಿಹಾಸ ಸೃಷ್ಟಿಯಾಗಿದೆ. ಗುಜರಾತ್‌ನ 26 ಸ್ಥಾನಗಳ ಪೈಕಿ ಒಂದನ್ನು ಬಿಜೆಪಿ ಚುನಾವಣೆಗೂ ಮೊದಲೇ ವಶಪಡಿಸಿಕೊಂಡಿದೆ. ಚುನಾವಣೆಗೂ ಮುನ್ನವೇ ಸೂರತ್ ಕ್ಷೇತ್ರದಲ್ಲಿ ಬಿಜೆಪಿ ಖಾತೆಗೆ ಬಂದಿದೆ. ಬಿಜೆಪಿ ಅಭ್ಯರ್ಥಿ ಮುಖೇಶ್ ದಲಾಲ್ ಅವಿರೋಧವಾಗಿ ಗೆಲುವು ಸಾಧಿಸಿದ್ದಾರೆ. ನಿನ್ನೆ ಸೂರತ್‌ನಲ್ಲಿ ಕಾಂಗ್ರೆಸ್ ಅಭ್ಯರ್ಥಿ ನೀಲೇಶ್ ಕುಂಭಾಣಿ ಅವರ ನಾಮಪತ್ರ ರದ್ದಾಗಿದೆ. ಅದರ ನಂತರ ಎಲ್ಲಾ ಸ್ವತಂತ್ರ ಅಭ್ಯರ್ಥಿಗಳು ಇಂದು ತಮ್ಮ ನಾಮಪತ್ರವನ್ನು ಹಿಂಪಡೆದಿದ್ದಾರೆ. ಹಾಗಾಗಿ ಮುಖೇಶ್ ದಲಾಲ್ ಅವಿರೋಧವಾಗಿ ಸಂಸದನಾಗಿ ಆಯ್ಕೆಯಾಗಿದ್ದಾರೆ. ಈ ವಿಷಯವನ್ನು ಪಕ್ಷದ ಗುಜರಾತ್ ರಾಜ್ಯ ಘಟಕದ ಅಧ್ಯಕ್ಷ ಸಿ.ಆರ್.ಪಾಟೀಲ ಸೋಮವಾರ ಎಕ್ಸ್ ಖಾತೆಯಲ್ಲಿ ತಿಳಿಸಿದ್ದಾರೆ.


COUNTDOWN
2024 LS Polls on APRIL 26
3 DAYS TO GO

ಮಹಿಳೆಯರ ಮೇಲೆ ವ್ಯಾಪಕ ದೌರ್ಜನ್ಯ ಖಂಡಿಸಿ ಮೈಸೂರಲ್ಲಿ ಬಿಜೆಪಿ ಪ್ರತಿಭಟನೆ

ನೇಹಾ ಹತ್ಯೆ ಪ್ರಕರಣ ಸಿಬಿಐ ತನಿಖೆಗೆ ಬಿ.ವೈ.ವಿಜಯೇಂದ್ರ ಆಗ್ರಹ

ಮೈಸೂರು, ಏ.22(ಜಿಎ)– ರಾಜ್ಯದಲ್ಲಿ ಮಿತಿ ಮೀರುತ್ತಿರುವ ಮಹಿಳೆಯರ ಮೇಲಿನ ದೌರ್ಜನ್ಯಗಳು, ಹುಬ್ಬಳ್ಳಿಯ ವಿದ್ಯಾರ್ಥಿನಿ ನೇಹಾ ಹಿರೇಮಠ ಹತ್ಯೆ, ಹದಗೆಟ್ಟ ಕಾನೂನು ಸುವ್ಯವಸ್ಥೆ ಮುಂದಿಟ್ಟುಕೊಂಡು ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ ನೇತೃತ್ವದಲ್ಲಿ ಮೈಸೂರಲ್ಲಿ ಸೋಮವಾರ ಪ್ರತಿಭಟನೆ ನಡೆಸಲಾಯಿತು.

ಬಿಸಿಲ ಬೇಗೆಯನ್ನು ಲೆಕ್ಕಿಸದೇ ನೂರಾರು ಬಿಜೆಪಿ ಕಾರ್ಯಕರ್ತರು 'ಇನ್ನೆಷ್ಟು ಹಲ್ಲೆ? ಇನ್ನೆಷ್ಟು ಬಲಿ?', 'ಅಮಾಯಕ ಹಿಂದೂ ಹೆಣ್ಣು ಮಕ್ಕಳ ಕಗ್ಗೊಲೆ', 'ಅಲ್ಪಸಂಖ್ಯಾತರ ತುಷ್ಟೀಕರಣ, ಹಿಂದೂಗಳ ಮೇಲಿನ ದ್ವೇಷದ ರಾಜಕಾರಣ', 'ಹಿಂದೂ ಮಹಿಳೆಯರಿಗೆ ರಕ್ಷಣೆ ನೀಡದ ಕಾಂಗ್ರೆಸ್ ಲವ್ ಜಿಹಾದ್‌ಗೆ ಕುಮ್ಮಕ್ಕು ನೀಡುತ್ತಿದೆ', 'ಕಾಂಗ್ರೆಸ್‌ಗೆ ಧಿಕ್ಕಾರ' ಹೀಗೆ ವಿವಿಧ ಭಿತ್ತಿ ಫಲಕಗಳನ್ನು ಹಿಡಿದು ಕಾಂಗ್ರೆಸ್ ಮತ್ತು ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ವಿವಿಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ಯಾವುದೇ ಅಹಿತಕರ ಘಟನೆ ಸಂಭವಿಸದಂತೆ ಮುಂಜಾಗ್ರತಾ ಕ್ರಮವಾಗಿ ಪೊಲೀಸರು ಗಾಂಧಿಚೌಕಕ್ಕೆ ಸಂಪರ್ಕಿಸುವ ಎಲ್ಲಾ ರಸ್ತೆಗಳಲ್ಲಿ ಬ್ಯಾರಿಕೇಡ್ ಅಳವಡಿಸಿ, ಹೆಚ್ಚಿನ ಸಿಬ್ಬಂದಿಗಳನ್ನು ಭದ್ರತೆಗೆ ನಿಯೋಜಿಸಲಾಗಿತ್ತು. ಡಿಸಿಪಿ ಎಸ್.ಜಾಹ್ನವಿ ಅವರು ಪ್ರತಿಭಟನಾ ಸ್ಥಳಕ್ಕೆ ಭೇಟಿ ನೀಡಿ, ಭದ್ರತೆ ಪರಿಶೀಲಿಸಿದರು. ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ, ಪಕ್ಷದ ರಾಜ್ಯ ಉಪಾಧ್ಯಕ್ಷ ಎಂ.ರಾಜೇಂದ್ರ, ಮೈಸೂರು ನಗರ ಬಿಜೆಪಿ ಅಧ್ಯಕ್ಷ ಎಲ್.ನಾಗೇಂದ್ರ, ಗ್ರಾಮಾಂತರ ಅಧ್ಯಕ್ಷ ಎಲ್.ಆರ್. ಮಹದೇವಸ್ವಾಮಿ, ಶಾಸಕ ಶ್ರೀವತ್ಸ, ರಾಜ್ಯ ಬಿಜೆಪಿ ಹಿಂದುಳಿದ ವರ್ಗಗಳ ಮೋರ್ಚಾ ಅಧ್ಯಕ್ಷ ರಘು ಆರ್.ಕೌಟಿಲ್ಯ, ಮಾಜಿ ಮೇಯರ್ ಸಂದೇಶ್ ಸ್ವಾಮಿ, ಜಯಪ್ರಕಾಶ್(ಜೆಪಿ), ನವೀನ್ ಕುಮಾರ್, ಮಿರ್ಲೆ ಶ್ರೀನಿವಾಸ್ ಗೌಡ, ಜಗದೀಶ್, ರಾಕೇಶ್ ಗೌಡ, ದಿನೇಶ್, ಬಿ.ಎಂ. ಸಂತೋಷ್ ಕುಮಾರ್, ರೇಣುಕ, ಹೇಮಾ ನಂದೀಶ್, ದೇವರಾಜ್, ಡಾ.ಅನಿಲ್ ಥಾಮಸ್, ಶೈಲೇಂದ್ರ, ಮತ್ತು ಎಲ್ಲಾ ಹಂತದ ಬಿಜೆಪಿಯ ಪದಾಧಿಕಾರಿಗಳು ಹಾಗೂ ಕಾರ್ಯಕರ್ತರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು. ನಂತರ ಪ್ರಚಾರ ವಾಹನದ ಮೇಲೆ ನಿಂತು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಮಾತನಾಡಿ, ರಾಜ್ಯಾದ್ಯಂತ ಕಾಂಗ್ರೆಸ್ ಸರ್ಕಾರದ ವಿರುದ್ಧ ಹೋರಾಟಕ್ಕೆ ಕರೆ ನೀಡಿದ್ದೇವೆ. ಕಾಂಗ್ರೆಸ್ ಅಧಿಕಾರಕ್ಕೆ ● 9ನೇ ಪುಟಕ್ಕೆ



ಮೈಸೂರಲ್ಲಿ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ನೇತೃತ್ವದಲ್ಲಿ ಹುಬ್ಬಳ್ಳಿಯ ವಿದ್ಯಾರ್ಥಿನಿ ನೇಹಾ ಹಿರೇಮಠ ಹತ್ಯೆ ಖಂಡಿಸಿ ಬಿಜೆಪಿ ಸೋಮವಾರ ಭಾರಿ ಪ್ರತಿಭಟನೆ ನಡೆಸಿತು.

ನಕ್ಕರೆ ಅದೇ ಸ್ವರ್ಗ

ಎಲ್‌ಕೆಜಿ ಹುಡುಗ ಪರೀಕ್ಷೆ ಬರೆಯುವಾಗ
ಪೇಪರ್ ಮೇಲೆ ಸೂಸು ಮಾಡಿದ.
ಟೀಚರ್ : ಯಾಕೋ ಪೇಪರ್ ಮೇಲೆ ಸೂಸು ಮಾಡ್ದೆ ಕತ್ತೆ?
ಹುಡುಗ : ಅಮ್ಮ ಹೇಳಿದ್ದು... ಪೇಪರ್ ಕೊಟ್ಟ ಮೇಲೆ ಮೊದಲು
ಯಾವುದು ಬರುತ್ತೋ ಅದನ್ನು ಮಾಡು ಅಂತಾ!

ಮೈಸೂರು ಮಿತ್ರ

ಮಂಗಳವಾರ, 23 ಏಪ್ರಿಲ್ 2024

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ.........

ಸಾಧಿಸುವ ಮುನ್ನ ಅಸಹ್ಯವಾಗಿ ನೋಡುತ್ತಾರೆ. ಸಾಧಿಸಿದ ನಂತರ ವಿಶೇಷವಾಗಿ ನೋಡುತ್ತಾರೆ. – ಚಾಣಕ್ಯ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಆಸೆಯಿಲ್ಲದವನು ದೇಶಕ್ಕೆ ಶ್ರೀಮಂತ

ನಿಮ್ಮ ಪತ್ರಗಳು

■ ಲಕ್ಷ್ಮಣ ಗೆಲುವು ಪ್ರಜಾಪ್ರಭುತ್ವದ ಗೆಲುವಾಗುತ್ತದೆ

ಮಾನ್ಯರೆ,

ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಲಕ್ಷ್ಮಣ ಅವರು ಚುನಾವಣೆಯಲ್ಲಿ ಗೆದ್ದರೆ ಅದು ಪ್ರಜಾಪ್ರಭುತ್ವದ ಗೆಲುವಾಗುತ್ತದೆ. ತಮ್ಮ ರಾಜಕೀಯ ಜೀವನದುದ್ದಕ್ಕೂ ಅನೇಕ ಏಳು–ಬೀಳುಗಳನ್ನು ಕಂಡಿರುವ ಲಕ್ಷ್ಮಣ ಅವರು ರಾಜಕೀಯ ಕ್ಷೇತ್ರದಲ್ಲಿ ಅಪಾರಜ್ಞಾನವನ್ನು, ಅನುಭವವನ್ನು ಹೊಂದಿದ್ದಾರೆ.



ರಾಜಕೀಯ ಇಚ್ಛಾಶಕ್ತಿಯೊಂದಿಗೆ ಸಾಮಾಜಿಕಬದ್ಧತೆಯನ್ನೂ ಹೊಂದಿರುವ ಲಕ್ಷ್ಮಣ ಅವರು ಸದಾಜನರ ಪರ ಧ್ವನಿ ಎತ್ತುವ ನಮ್ಮ ನಡುವಿನ ಓರ್ವನೈಜ ಹೋರಾಟಗಾರರಾಗಿದ್ದಾರೆ.

ಇಷ್ಟೆಲ್ಲಾ ಅರ್ಹತೆಗಳನ್ನು ಹೊಂದಿರುವ ಲಕ್ಷ್ಮಣ ಅವರು ಈ ಚುನಾವಣೆಯಲ್ಲಿ ಸೋತರೆ ಅದು ನಿಜವಾಗಿಯೂ ಪ್ರಜಾಪ್ರಭುತ್ವದ ಸೋಲಾಗುತ್ತದೆ.

ಹಾಗಾಗಿ ಲೋಕಸಭೆಯನ್ನು ಪ್ರವೇಶಿಸಲು ಅತ್ಯಂತ ಸೂಕ್ತ ಅಭ್ಯರ್ಥಿಯಾದ ಲಕ್ಷ್ಮಣ ಅವರನ್ನು ಬೆಂಬಲಿಸುವ ಮೂಲಕ ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಮತದಾರರು ತಮ್ಮ ಪ್ರಬುದ್ಧತೆಯನ್ನು ಮೆರೆಯಬೇಕಾಗಿದೆ.

– ಭರತ್ ರಾಮಸ್ವಾಮಿ,
ವಿ.ಶ್ರೀನಿವಾಸಪ್ರಸಾದ್ ಅವರ ಬೆಂಬಲಿಗ ಹಾಗೂ ಕಾಂಗ್ರೆಸ್ ಯುವಮುಖಂಡ

■ ಪ್ರತಿಯೊಬ್ಬರು ಮತದಾನ ಮಾಡಲೇಬೇಕು

ಮಾನ್ಯರೇ,

ಸದೃಢ ಪ್ರಜಾಪ್ರಭುತ್ವಕ್ಕೆ ಪ್ರತಿಯೊಬ್ಬರು ಮತದಾನ ಮಾಡಲೇಬೇಕು. ಪ್ರಜಾಪ್ರಭುತ್ವವೆಂದರೆ ಪ್ರಜೆಗಳಿಂದ, ಪ್ರಜೆಗಳಿಗಾಗಿ ಮತ್ತು ಪ್ರಜೆಗಳಿಗೋಸ್ಕರ ಎಂಬ ಮೂಲಮಂತ್ರ. ಈ ಸಿದ್ಧಾಂತದ ಅವಿಚ್ಛಿನ್ನ ಭಾಗ ಎಂದರೆ ಮತದಾನ.

ನಾಗರಿಕರು ತಮ್ಮ ನೆಚ್ಚಿನ ಅಭ್ಯರ್ಥಿಗಳಿಗೆ ಮತ ಚಲಾಯಿಸುವ ಮೂಲಕ ಪ್ರಜಾಪ್ರಭುತ್ವದಲ್ಲಿನ ತಮ್ಮ ಹಕ್ಕನ್ನು ಸಾಧಿಸಬಹುದು.

ಜಾತ್ಯತೀತ, ಧರ್ಮಾತೀತವಾಗಿ ತಮ್ಮ ಪ್ರತಿನಿಧಿಯಾಗಿ ಸರ್ಕಾರದ ಆಡಳಿತ ವ್ಯವಸ್ಥೆಯ ಒಂದು ಭಾಗವಾಗಿ ಕೆಲಸ ನಿರ್ವಹಿಸುವ ಜವಾಬ್ದಾರಿಯನ್ನು ಅಭ್ಯರ್ಥಿಗೆ ನಾವು ಮತ ಚಲಾಯಿಸುವ ಮೂಲಕ ನೀಡಿರುತ್ತೇನೆ. ಅತ್ಯಧಿಕ ಸ್ಥಾನಗಳನ್ನು ಪಡೆದ ರಾಜಕೀಯ ಪಕ್ಷವು ಸರ್ಕಾರದ ರಚನೆ ಮಾಡುತ್ತದೆಯಾದರೂ, ನಾವು ಮತ ಚಲಾಯಿಸಿದ ಅಭ್ಯರ್ಥಿ ನಮ್ಮ ಕ್ಷೇತ್ರದ ಒಳಿತಿಗೆ ಶ್ರಮಿಸಲು ಸಹಕಾರಿಯಾಗುವಂತೆ ಮಾಡಬೇಕು.

ಒಂದು ಸದೃಢ ದೇಶವಾಗಿ ಭಾರತ ಬಲಿಷ್ಠವಾಗಲು ನಾನು ಚಲಾಯಿಸುವ ಒಂದು ಮತ ಕಾರಣವಾಗಬಲ್ಲುದು. ಈ ಗಹನತೆಯನ್ನು ಗಮನಿಸಿ ಮತದಾನದ ದಿನ ಅತ್ಯಂತ ಜವಾಬ್ದಾರಿಯಿಂದ ಸ್ವ ವಿವೇಚನೆಯಿಂದ ಅರ್ಹ ಅಭ್ಯರ್ಥಿಗೆ ಮತದಾನ ಮಾಡುವುದು ನಮ್ಮ ಆದ್ಯ ಕರ್ತವ್ಯವಾಗಿರುತ್ತದೆ.

ಯಾವುದೇ ರಾಗ ದ್ವೇಷಗಳಿಲ್ಲದೇ, ದೇಶದ ಅಖಂಡತೆಗಾಗಿ, ಸರ್ವತೋಮುಖ ಬೆಳವಣಿಗೆಗೆ ಶ್ರಮಿಸುವ ಪಕ್ಷ ಮತ್ತು ಅಭ್ಯರ್ಥಿಯನ್ನು ಆಯ್ಕೆ ಮಾಡಿಕೊಂಡು ಮತದಾನ ಮಾಡುವುದರಿಂದ ಸೂಕ್ತವಾದ ಸರ್ಕಾರ ನೆಲೆನಿಂತು ದೇಶದ ಏಳಿಗೆಯು ಸಾಧ್ಯವಾಗುತ್ತದೆ. **–ಪುಷ್ಪಲತಾ ಫಣಿರಾಜ್, ಅಗ್ರಹಾರ ಮೈಸೂರು**

■ ರಾಜಕೀಯ ಭಾಷಣಗಳು ಬೈಯ್ಯುವ ವೇದಿಕೆಯಾಗದಿರಲಿ!

ಮಾನ್ಯರೆ,

ನಮ್ಮ ರಾಜ್ಯದಲ್ಲಿ ಲೋಕಸಭಾ ಚುನಾವಣೆಯ ಕಾವು ಏರುತ್ತಿದ್ದಂತೆ ಸಭೆ ಸಮಾರಂಭಗಳಲ್ಲಿ ರಾಜಕಾರಣಿಗಳು ತಮ್ಮ ಭಾಷಣಗಳಲ್ಲಿ ಮಾತನಾಡುವ ಭಾಷೆಯ ಎಲ್ಲೆ ಕೂಡ ಮಿತಿ ಮೀರುತ್ತಿದೆ. ವೈಚಾರಿಕ ಟೀಕೆಗಳನ್ನು ಮೀರಿ ಕೆಲ ರಾಜಕಾರಣಿಗಳು ವೈಯಕ್ತಿಕ ಟೀಕೆಗಳನ್ನು ಮಾಡುವುದು, ಅನ್ಯ ಪಕ್ಷದ ಜನನಾಯಕರನ್ನು ಏಕವಚನ ಪದ ಪ್ರಯೋಗದಿಂದ ಸಂಬೋಧಿಸುವುದು, ಜಾತಿನಿಂದನೆ, ಅವರ ಸಾಂಸಾರಿಕ ಗುಟ್ಟು ಹಾಗೂ ಅನೈತಿಕ ಸಂಬಂಧಗಳ ಚರ್ಚೆಗೆ ರಾಜಕಾರಣಿಗಳ ಚುನಾವಣಾ ಭಾಷಣ ಸೀಮಿತವಾದಂತಿದೆ.

ರಾಜಕಾರಣಿಗಳು ಎಂದಿಗೂ ಜನನಾಯಕರೇ ಹೊರತು ಸಿನಿಮಾ ನಾಯಕರಲ್ಲ. ಕೇವಲ ಶಿಳ್ಳೆ ಚಪ್ಪಾಳೆಗಳ ವ್ಯಾಮೋಹಕ್ಕೆ ಮಾತನಾಡಿ ಜನರೆದುರು ಚಿಕ್ಕವರಾಗ ಬೇಡಿ. ನಿಮ್ಮ ಭಾಷಣದ ಭರಾಟೆಯಲ್ಲಿ ಇತರ ಪಕ್ಷದ ರಾಜಕೀಯ ನಾಯಕರನ್ನು ಟೀಕಿಸುವಾಗ ಅದರಲ್ಲೂ ಏಕವಚನದಲ್ಲಿ ಪ್ರಶ್ನಿಸಿದಾಗ ನಿಮ್ಮನ್ನು ಮತ್ತಷ್ಟು ಹುರಿದುಂಬಿಸುವ ಮಂದಿ ನಿಮ್ಮನ್ನು ಹಳ್ಳಕ್ಕೆ ತಳ್ಳುತ್ತಿರುವವರು ಎಂದು ನಿಮಗೆ ತಿಳಿದಿರಲಿ! ಟೀಕಿಸುವ ಸಾಮರ್ಥ್ಯ ನಿಮಗೆ ಮಾತ್ರ ಎಂಬ ಹಸಿ ಹಸಿ ಸುಳ್ಳನ್ನು ಹೇಳಿ ನಿಮ್ಮನ್ನು ಉಬ್ಬಿಸಿ ಭಾಷಣದಲ್ಲಿ ಬೈಯ್ಯಿಸುವ ಮಂದಿ ನಂತರದ ತಮಾಷೆಗಳನ್ನು ನೋಡಿ ವಿಕೃತ ಆನಂದ ಪಡೆಯುವ ಪ್ರೇಕ್ಷಕರು ನಿಮ್ಮ ಮಧ್ಯೆ ಸಾಕಷ್ಟಿದ್ದಾರೆ ಎಂಬ ಸತ್ಯ ನಿಮ್ಮ ನೆನಪಿನಲ್ಲಿರಲಿ.

ಒಬ್ಬ ಸಾಮಾನ್ಯ ಪ್ರಜೆಗೆ ಅಥವಾ ನಿಮ್ಮದೇ ಪಕ್ಷದ ಕಟ್ಟ ಕಡೆಯ ಕಾರ್ಯಕರ್ತನಿಗೆ ನೀವು ಚರ್ಚಿಸಿದ, ಹರಿಬಿಟ್ಟ ವಿಷಯಗಳು ಉಪಯೋಗವಿದೆಯೇ ಎಂಬುದನ್ನು ಒಮ್ಮೆ ವಿಮರ್ಶಿಸಿ. ಈ ಬೈಯ್ಯುವ ವಿಚಾರಗಳಿಂದ ಜನರಿಗೆ ಏನೂ ಉಪಯೋಗವಿಲ್ಲ. ಉತ್ತಮ ಸಿದ್ಧಾಂತ, ಒಳ್ಳೆಯ ಕೆಲಸ ಕಾರ್ಯಗಳು, ನಿಮ್ಮ ಯೋಜನೆಗಳು, ನಿಮ್ಮ ಭವಿಷ್ಯದ ಯೋಚನೆಗಳು ಜನರಿಗೆ ತಲುಪಬೇಕೇ ಹೊರತು, ವೇದಿಕೆಯ ಮೇಲೆ ವೈಯಕ್ತಿಕ ಟೀಕೆ, ಜಾತಿ ನಿಂದನೆ, ಏಕವಚನ ಪದ ಪ್ರಯೋಗಗಳಿಂದ ಹೊರಬಂದು ಜನರಿಗೆ ಉಪಯುಕ್ತವಾದ ಮಾಹಿತಿ ನೀಡಿ. ಜನನಾಯಕನ ಮಾತು, ಸಂಸ್ಕಾರ, ಸಂಸಾರ ಮತ್ತು ನಡವಳಿಕೆ ಉನ್ನತವಾಗಿರಬೇಕು ಎಂಬುದನ್ನು ನಾಡಿನ ಜನರೆದುರು ಸಾಬೀತುಪಡಿಸಿ. ಇದೇ ಉತ್ತಮ ರಾಜಕಾರಣಿಯ ಶ್ರೇಷ್ಠ ಗುಣ. ಈ ಸತ್ಯ ಪ್ರತಿಯೊಬ್ಬ ರಾಜಕಾರಣಿಗೆ ತಿಳಿಯುವುದೊಳಿತು!

–ಹರಳಹಳ್ಳಿ ಪುಟ್ಟರಾಜು, ಪಾಂಡವಪುರ

■ ಒತ್ತುವ ಮೊದಲು ಯೋಚಿಸಬಾರದೆ?

ಮತೋತ್ಸವವು ಬಲುಮಜಾವಾಗಿದೆ ಸಾಮೀರಾ..,
ಕೂತಲ್ಲೇ ಕೂಲಿಕಂಬಳ ಹುಡುಕುವ ಗೋಜಿಲ್ಲ,
ನಿತ್ಯೋತ್ಸವ ಆಗಬಾರದೇಕೆ ಚುನಾವಣೆಗಳು?,
ಒತ್ತುವುದು ಒಂದೇ ಒಂದು ನೀಲಿ ಗುಂಡಿಯಾದರು
ಮನಸಾರೆ ನೀಡುವರು ಬಾರಿ ಹಣ–ಹೆಂಡ–ಬಾಡು,
ಹೆಂಡತಿಗೂ ಕೊಡುತ್ತಾರೆ ಸೀರೆ–ಕುಂಕುಮ–ಕುಕ್ಕರ್,
ಕುಡಿದ ಅಮಲಿನಲ್ಲಿ ಬಿದ್ದು.. ಎದ್ದು.. ಮತಗಟ್ಟೆಗೆ,
ಮಂಪರಿನಲಿ ಅಮೂಲ್ಯ ಮತ ಯಾರಿಗೆಂದು ತಿಳಿಯದು
ಆದರೂ ನಮಗೇ ಅಲ್ಲವೆ ಗ್ಯಾರಂಟಿ ಉಚಿತ ಸ್ಕೀಂಗಳು?,
ಹೋಳಿಗೆ ಯುಗಾದಿಯಂತೆ ವರುಷ ವರುಷವೂ
ತಿರುತಿರುಗಿ ಬರಬಾರದೆ ಚುನಾವಣೆಗಳು ಹಬ್ಬದಂತೆ!,
ಅಯ್ಯೋ ತಿಳಿಯದಾಯ್ತೆ ಮತ ಮಾರಿಕೊಳ್ಳುವ ಭಂಡನಿಗೆ;
ಆಮಿಷದಿಂದ ಒತ್ತುವುದು ನೀಲಿಗುಂಡಿ ಅಲ್ಲವದು, ಗುಂಡಿ
ತೋಡಿಕೊಂಡು ತಾನೇ ಮಣ್ಣೆಳೆದು ಗೋರಿ ಕಟ್ಟಿಕೊಳ್ಳುವುದೆಂದು!.

–ಮಿರ್ಲೆಚಂದ್ರಶೇಖರ, ಲೇಖಕರು, ಮೈಸೂರು.



ಗುಬ್ಬಿಗೂಡು ರಮೇಶ್
ಮೊ: 97429–34512

ದೀಪ ಸಾಲು

ಕ್ಷಮಿಸಿ, ನಾ ಹೇಳೋದೆಲ್ಲಾ ತಮಾಷೆಗಾಗಿ!

ಕ್ಷಮಿಸಿ ನಾನು ಹೇಳೋದೆಲ್ಲಾ ತಮಾಷೆಗಾಗಿ, ಅದೇನೂ ಬೂಟಾಟಿಕೆಯೋ! ಅಥವಾ ನಾವು ಬದುಕುತ್ತಿರುವ ಈ ಯುಗವೇ ಲೀಲಾಯುಗವೋ! ಗೊತ್ತಿಲ್ಲ! ಆದರೆ ನಮ್ಮ ಜೀವನ ವಿಧಾನ ಬದಲಾದಂತೆಲ್ಲಾ ನಮಗೆ ಗೊತ್ತಿದ್ದೂ! ಗೊತ್ತಿದ್ದೂ! ನಮ್ಮೊಳಗೊಂದು ಬೂಟಾಟಿಕೆಯ ವರ್ತನೆ ಮತ್ತು ಪ್ರವೃತ್ತಿಗಳು ಹುಟ್ಟುತ್ತವೆ. ನಮಗೆ ಮಾತ್ರವೇ ನಾವು ಕಾಣಿಸುವ ತಮಾಷೆ ಸತ್ಯವೊಂದು ನಮ್ಮನ್ನು ಆವರಿಸಿಕೊಂಡಿದೆ. ನಾವು ಜಗತ್ತನ್ನೇ ಆಳಲು ಹೊರಟರೆ, ಒಳಗಡೆಯಿಂದ ಅದು ನಮ್ಮನ್ನೇ ಆಳುತ್ತದೆ. ಮನಃಶಾಸ್ತ್ರದ ಪರಿಭಾಷೆಯಲ್ಲಿ ಅದನ್ನೇನಂತ ಕರೀತಾರೋ ಗೊತ್ತಿಲ್ಲ! ಇಲ್ಲದ ಸಿರಿವಂತಿಕೆಯನ್ನ ಇರುವ ಹಾಗೆ ತೋರಿಸಿಕೊಳ್ಳುವ ಈ ಬೂಟಾಟಿಕೆ ಸಂಸ್ಕೃತಿ ನಮಗೆ ಗೊತ್ತಿಲ್ಲದಂತೆಯೇ ನಮ್ಮನ್ನು ಆಳುತ್ತಿರುತ್ತದೆ. ಇದು ಎಲ್ಲಾ ಕಾಲದಲ್ಲೂ ಇತ್ತು, ಆದರೆ ನಮ್ಮ ಕಾಲದಲ್ಲಿ ಸ್ವಲ್ಪ ಜಾಸ್ತಿ. ಇದು ಎಲ್ಲರನ್ನೂ ಬಾಧಿಸದೇ ಇರಬಹುದು, ಕೆಲವರನ್ನಂತೂ ಆವಾಹಿಸಿಕೊಳ್ಳುವುದಂತೂ ಸತ್ಯ. ಅದಕ್ಕೆ ವಯಸ್ಸಿನ ಅಂತರವಿಲ್ಲ. ಯಾರನ್ನು ಬೇಕಾದರೂ ಈ ತೋರಿಕೆಯ ಸಿರಿತನ, ತೋರಿಕೆಯ ಗಾಂಭೀರ್ಯ, ತೋರಿಕೆಯ ಮಾತು, ತೋರಿಕೆಯ ಔದಾರ್ಯ, ತೋರಿಕೆಯ ಶೃಂಗಾರ, ತೋರಿಕೆಯ ಮಮಕಾರ, ತೋರಿಕೆಯ ಸಹಕಾರ, ತೋರಿಕೆಯ ಸಂಸ್ಕಾರ, ತೋರಿಕೆಯ ಆಚಾರಗಳು ಆಕರ್ಷಿಸಬಹುದು. ಹೊಟ್ಟೆಗೆ ಹಿಟ್ಟಿಲ್ಲ ಜುಟ್ಟಿಗೆ ಮಲ್ಲಿಗೆ, ಅಜ್ಜಿಗೆ ಅರಿವೆ ಚಿಂತೆ, ಮೊಮ್ಮಗಳಿಗೆ ಇನ್ನೇನೋ ಚಿಂತೆ ಎನ್ನುವಂಥಾ ಗಾದೆ ಮಾತುಗಳು ಹುಟ್ಟಿದ್ದೂ ಈ ಹಿನ್ನೆಲೆಯಲ್ಲಿಯೇ. ಇದೇನು ಬಹಳ ದೊಡ್ಡ ವಿಷಯವೇನಲ್ಲ; ಹರಟೆ ಕೊಚ್ಚುವಂಥ ತಮಾಷೆಯ ವಿಷಯ. ನಾವಲ್ಲದ ನಮ್ಮನ್ನ ನಾವು ಹೇಗೆ ಗೆಳೆಯರ ಎದುರು, ಬಂಧುಗಳ ಮುಂದೆ, ಪರಿಚಯಸ್ಥರ ಹತ್ತಿರ ಪ್ರೊಜೆಕ್ಟ್ ಮಾಡಿಕೊಳ್ಳಲು ಹೆಣಗುತ್ತಿರುತ್ತೇವೆಂಬ ತಮಾಷೆಯ ಸ್ಯೂಡೋ ಕಲ್ಚರಿನ ಮುಖದ ಅನಾವರಣ ಇದು. ಬಹಳ ಹಿಂದಿನ ತಮಾಷೆಯ ಪ್ರಸಂಗವೊಂದನ್ನು ಆರಂಭದಲ್ಲೇ ಹೇಳಿಬಿಡುತ್ತೇನೆ. ಹೇಳಿ ಕೇಳಿ ಇದು ಹರಟೆ, ಗಂಭೀರವಾದ ವಿಷಯವೇನಲ್ಲ! ಎಂದು ಮೊದಲೇ ಹೇಳಿಬಿಟ್ಟಿದ್ದೇನೆ. ಇದು ಕೇವಲ ತಮಾಷೆಗಾಗಿ.

ಒಮ್ಮೆ ಬಸ್‌ಸ್ಟ್ಯಾಂಡಿನಲ್ಲಿ ಬಸ್ಸಿಗಾಗಿ ಕಾಯುತ್ತಾ ನಿಂತಿದ್ದೆ. ಅಲ್ಲಿನ ಕಾಲೇಜೊಂದರಲ್ಲಿ ಆಗ ನಾನು ಮೇಷ್ಟ್ರಾಗಿದ್ದೆ. ಆಗಷ್ಟೇ ಕಾಲೇಜು ಮುಗಿದಿತ್ತು, ಅಕ್ಕಪಕ್ಕದ ಹಳ್ಳಿಯಿಂದ ಬಂದ ಹುಡುಗ ಹುಡುಗಿಯರೆಲ್ಲಾ ತಮ್ಮ ತಮ್ಮ ಊರುಗಳಿಗೆ ಹೋಗಲು ಬಸ್‌ಸ್ಟ್ಯಾಂಡಿನಲ್ಲಿ ಬಸ್ಸಿಗಾಗಿ ಕಾಯುತ್ತಾ ನಿಂತಿದ್ದರು. ಹಾಗೆ ನಿಂತವರ ನಡುವೆ ಹುಡುಗಿಯರದೊಂದು ದೊಡ್ಡ ಗುಂಪು ಅಲ್ಲೇ ಮಾತಾಡುತ್ತಾ ನಿಂತಿತ್ತು. ಅವರೆಲ್ಲಾ ನನ್ನ ವಿದ್ಯಾರ್ಥಿನಿಯರೆ, ಆ ಹುಡುಗಿಯರ ಗುಂಪಿನ ಜೊತೆ ಒಬ್ಬನೇ ಒಬ್ಬ ಹುಡುಗ ಹರಟೆ ಕೊಚ್ಚುತ್ತಾ ನಿಂತಿದ್ದ, ಸ್ವಲ್ಪ ಶೋಕಿಲಾಲ, ಹೀರೋಯಿಸಂ ವ್ಯಕ್ತಿತ್ವ ಇರುವ ಹುಡುಗ, ಅವನೂ ನನ್ನ ವಿದ್ಯಾರ್ಥಿಯೇ! ಅಲ್ಲೇ ಪೆಟ್ಟಿಗೆ ಅಂಗಡಿ ಮುಂದೆ ನಿಂತಿದ್ದ ನಾನು ಸಹಜವಾಗಿ ಅವರನ್ನು ಗಮನಿಸುತ್ತಿದ್ದೆ. ಸುತ್ತಮುತ್ತಲಿನ ಪ್ರಸಂಗಗಳನ್ನು ಹಾಗೇ ಕುತೂಹಲಕ್ಕೆ ಗಮನಿಸೋದು ನನಗಿರುವ ದೊಡ್ಡ ಖಾಯಿಲೆ! ಆ ಹುಡುಗ ತಮಾಷೆ ಮಾಡಿ ಆ ಹುಡುಗಿಯರ ಗುಂಪನ್ನು ನಕ್ಕು ನಗಿಸುತ್ತಿದ್ದ. ಆ ಸಮಯಕ್ಕೆ ಸರಿಯಾಗಿ ಒಬ್ಬ ಭಿಕ್ಷುಕಿ ಆ ಗುಂಪಿನ ಮುಂದೆ ಬಂದಳು. ಅಲ್ಲಿದ್ದ ಹುಡುಗಿಯರಾರೂ ಆಕೆಗೆ ಹಣ ಕೊಡಲಿಲ್ಲ. ಆದರೆ ಭಿಕ್ಷೆ ಬೇಡಲು ಬಂದ ಆಕೆ, ಹುಡುಗಿಯರ ಮುಂದೆ ಹೀರೋ ಥರಾ ಮಾತಾಡುತ್ತಾ ನಿಂತಿದ್ದ ಈ ಹುಡುಗನನ್ನು ದುಡ್ಡಿಗಾಗಿ ಪೀಡಿಸತೊಡಗಿದಳು. ಹುಡುಗ ಚಿಲ್ಲರೆ ಕಾಸಿಗಾಗಿ ಜೇಬೆಲ್ಲಾ ತಡಕಾಡಿದ, ಜೇಬಿನಲ್ಲಿ ಚಿಲ್ಲರೆ ಸಿಗಲಿಲ್ಲ, ಬದಲಾಗಿ 20 ರೂಪಾಯಿಯ ನೋಟು ಸಿಕ್ಕಿತು. ಜೇಬಿಂದ ಅದನ್ನು ತೆಗೆದವನೇ ಸಾಫ್ ಸೀದ ಆ ಮುದುಕಿಯ ಕೈಗಿತ್ತು ಹೀರೋ ಥರ ಮತ್ತೆ ಮಾತಿಗೆ ನಿಂತುಕೊಂಡ. ಅಷ್ಟರಲ್ಲಿ ಬಸ್ಸೂ ಬಂತು ಎಲ್ಲರೂ ಹತ್ತಿಕೊಂಡರು. ಅಲ್ಲಿದ್ದ ಹುಡುಗಿಯರೆಲ್ಲರಿಗೂ ಕಾಣುವ ಹಾಗೆ ಮುಂದಿನ ಬಾಗಿಲಲ್ಲಿ ಬಸ್ಸು ಹತ್ತಿದ್ದ ಆತ ಹಿಂದಿನ ಬಾಗಿಲಲ್ಲಿ ಇಳಿದುಬಿಟ್ಟ, ನಾನು ಪರ್ವಾಗಿಲ್ಲ ಹುಡುಗನಿಗೆ ಭಿಕ್ಷುಕರನ್ನು ಕಂಡರೆ ತುಂಬಾ ಔದಾರ್ಯವಿದೆ ಅಂತ ಅಂದುಕೊಂಡೆ. ಬಸ್ಸು ಹೊರಟು ಹೋಯ್ತು. ಬಹಳ ಹೊತ್ತಾದರೂ ಆತ ಅಲ್ಲೇ ನಿಂತಿದ್ದ ಆ ಹುಡುಗ ಆ ನಂತರ ಕಣ್ಮರೆಯಾಗಿಬಿಟ್ಟ, ಅದಾದ ಸ್ವಲ್ಪ ಹೊತ್ತಿನಲ್ಲೇ ಬಸ್ಸಿನಲ್ಲಿ ನಾನು ಹೊರಟೆ. ಬಸ್ಸು ಸುಮಾರು ಐದಾರು ಕಿ.ಮೀ ದಾಟಿರಬೇಕು. ಮತ್ತೆ ಆ ಹುಡುಗ ಕಾಣಿಸಿಕೊಂಡ. ತನ್ನ ಪಾಡಿಗೆ ತಾನು ಒಬ್ಬನೇ ಹಾಡು ಹೇಳಿಕೊಂಡು ತನ್ನ ಊರಿಗೆ ನಡೆದುಕೊಂಡು ಹೋಗುತ್ತಿದ್ದ. ಮಾರನೆಯ ದಿನ ಕುತೂಹಲ ತಾಳಲಾರದೆ ಆ ಹುಡುಗನನ್ನು ಕರೆದು ವಿಚಾರಿಸಿದೆ. ನಿನ್ನೆ ಯಾಕೋ ನಡಕೊಂಡ್ ಹೋಗ್ತಿದೆ ಅಂತ? ಆ ಹುಡುಗನ ಬಾಯಲ್ಲಿ ಥಟ್ಟಂತ ಬಂದ ಉತ್ತರ ಏನು ಗೊತ್ತ? ಬಸ್ ಚಾರ್ಜ್‌ಗೆ ಅಂತ ಮನೇಲಿ ಕೊಟ್ಟಿದ್ದ ದುಡ್ಡು ಎಲ್ಲೋ ಬಿದ್ದೋಗಿತ್ತು ಸಾರ್, ಅಂದ! ಯಾರನ್ನಾದ್ರೂ ಕೇಳೋಣ ಅಂದ್ರೆ ಸ್ನೇಹಿತ್ರೆಲ್ಲಾ ಹೊರಟೋಗಿದ್ರು, ನಮ್ಮೂರು ತುಂಬಾ ಹತ್ತಿರ ಸಾರ್, ಅದಕ್ಕೆ ನಡಕೊಂಡೇ ಹೋಗ್ಬಿಟ್ಟೆ ಅಂದ. ಹುಡುಗಿಯರ ಮುಂದೆ ಫೋಸು ಕೊಡೋದಿಕ್ಕೆ ಇವನು ಆ ಭಿಕ್ಷುಕಿಗೆ ಇಪ್ಪತ್ತು ರೂಪಾಯಿ ಕೊಟ್ಟಿದ್ದನ್ನು, ನಾನು ಗಮನಿಸಿರುವ ವಿಷಯ ಅವನಿಗೆ ಗೊತ್ತಿರಲಿಲ್ಲ! ಬೆಕ್ಕು ಕಣ್ಣು ಮುಚ್ಚಿಕೊಂಡು ಹಾಲು ಕುಡಿದಿದೆ! ಪಾಪದ ಹುಡುಗ, ನಾನೂ ಆ ಕ್ಷಣಕ್ಕೆ ಏನೂ ಮಾತಾಡಲಿಲ್ಲ. ಮೊದಲೇ ಸ್ವಾಭಿಮಾನಿ ಹುಡುಗ ಸ್ವಲ್ಪ ಶೋಕಿಲಾಲ, ನಾನು ಕಂಡ ಸತ್ಯವನ್ನು ಅವನ ಜೊತೆ ಹಂಚಿಕೊಂಡರೆ ಅವನನ್ನು ಅಪಹಾಸ್ಯ ಮಾಡಿದಂತಾಗಿಬಿಡುತ್ತದೆ. ಹಾಗಂತ ಹೇಳಿ ಆ ಕ್ಷಣಕ್ಕೆ ಅದನ್ನು ಅಲ್ಲಿ ಬಿಟ್ಟೆ ನಂತರ ಮುಂದೊಂದು ದಿನ ಅವನಿಗೆ ಬೇರೆ ಥರಾ ಅದರ ಮನವರಿಕೆ ಮಾಡಿ ನಮ್ಮ ವರ್ತನೆಗಳು ಜೀವನದಲ್ಲಿ ಹೇಗೆ ನೈಜವಾಗಿರಬೇಕು ಅನ್ನೋದನ್ನು ಹೇಳಿದೆ. ಎಷ್ಟರಮಟ್ಟಿಗೆ ಅದನ್ನು ಅವನು ಪಾಲಿಸಿದನೋ ಏನೋ ಗೊತ್ತಿಲ್ಲ! ಆದರೆ ಆ ಪ್ರಸಂಗ ನೋಡಿದ ಮೇಲೆ ನನಗೆ ಒಂದಂತೂ ಸ್ಪಷ್ಟವಾಗಿ ಗೊತ್ತಾಗಿ ಹೋಗಿತ್ತು. ತೋರಿಕೆಯ ಸಿರಿತನಗಳು ಹೇಗೆ ನಮ್ಮನ್ನು ಆಳುತ್ತವೆ! ಅಂತ. ನಾವೂ ಕೂಡ ಹೇಗೆ ಅದನ್ನು ಎಂಜಾಯ್ ಮಾಡ್ತೇವೆ ಅಂತ, ಅದೊಂದು ಸೈಕಲಾಜಿಕಲ್ ಮೇನಿಯಾ.

ಅದು ಹೇಗೆ ನಮ್ಮನ್ನು ಆಳುತ್ತದೆ ಎಂದರೆ ನಮ್ಮ ಸ್ಟೇಟಸ್ಸು

> **"** ಬಹಳಷ್ಟು ಜನ ತಮ್ಮ ಇಮೇಜು ಕುಸಿದ ಕೂಡಲೇ ಮಾನಸಿಕ ಖಿನ್ನತೆಗೆ ಒಳಗಾದವರಿದ್ದಾರೆ. ಆತ್ಮಹತ್ಯೆ ಮಾಡಿಕೊಂಡು ಜೀವ ಬಿಟ್ಟವರಿದ್ದಾರೆ. 30 ರೂ. ಆಸ್ತಿಯ ಮೇಲೆ 300 ರೂ. ಸಾಲ ಮಾಡಿ 600ರಷ್ಟು ಬಡ್ಡಿ ಕಟ್ಟಿ ಹೈರಾಣಾದವರಿದ್ದಾರೆ. ಇಷ್ಟೆಲ್ಲಾ ಮುಚ್ಚುಮರೆಯ ಹಿಂದೆ ಕಾಣುವ ಸತ್ಯ ಒಂದೇ ಅದು ತೋರಿಕೆಯ ಪ್ರತಿಷ್ಠೆ. ಸಾಮಾಜಿಕ ಅಂತಸ್ತನ್ನು ಉಳಿಸಿಕೊಳ್ಳಲು ಹೆಣಗುವ ಪರಿ. ಮತ್ತೆ ಕೆಲವರ ಸ್ಯೂಡೋ ತಾಪತ್ರಯಗಳು ಬೇರೇ ಥರ. ನಾನು ಮುಂದೆ ಏನೆಲ್ಲಾ ಆಗ್ತೀನಿ, ಏನೆಲ್ಲಾ ಮಾಡಬೇಕೆಂದಿದ್ದೇನೆ ಅನ್ನೋದನ್ನು ಇವತ್ತೇ ಹೇಳಿಕೊಂಡು ಮರ್ಯಾದೆ ನಿರೀಕ್ಷಿಸುವ ತೋರಿಕೆಯ ಪ್ರತಿಷ್ಠೆ ನಮ್ಮ ಕಾಲದ ಅಲಂಕರಣ. ಅಸಲಿ ಚಿನ್ನವನ್ನೇ ಹೋಲುವ ನಕಲಿ ಬಂಗಾರದ ಒಡವೆಗಳಿಗೀಗ ಎಲ್ಲಿಲ್ಲದ ಬೆಲೆ. ಕಾರಣ ಈ ಸ್ಯೂಡೋ ಸ್ಟೇಟಸ್ಸು.



ಹೆಚ್ಚಿಸಿಕೊಂಡರಷ್ಟೇ ನಮಗೆ ತೃಪ್ತಿ ಎನ್ನುವಂಥಾ ಭಾವನೆಯೊಂದು ಮನಸ್ಸಿಗೆ ಬಂದು ಬಿಡುತ್ತದೆ. ಯಾವಾಗಲೂ ಅನುಕೂಲಸ್ಥರ ಜೊತೆಗೇ ಸ್ನೇಹ, ಒಡನಾಟ, ಅದಕ್ಕಾಗಿ ಅವರು ಧರಿಸುವಂತೆಯೇ ದುಬಾರಿ ಬೆಲೆಯ ಬಟ್ಟೆ, ವಾಚು, ಪರ್ಫ್ಯೂಮು, ಎಲ್ಲದಕ್ಕಾಗಿ ಹಪಹಪಿಸುವ ಮನಸ್ಸು, ಅವರ ಜೊತೆ ಬಿಟ್ಟು ಮನೆಗೆ ಬರುತ್ತಿದ್ದಂತೆ ಅದು ಮಾಮೂಲಿ ಮನುಷ್ಯನಂತೆ ವರ್ತಿಸುತ್ತದೆ. ಶ್ರೀಮಂತರ ಜೊತೆ ಒಡನಾಟ ಇಟ್ಟುಕೊಂಡಿರುವ ಮನುಷ್ಯ ಎಂಬ ಈ ಒಂದೇ ಒಂದು ಐಡೆಂಟಿಟಿ ಇದೆಯಲ್ಲ ಆ ಭ್ರಾಮಕ ಸ್ಥಿತಿ ಅವನಿಗೆ ಖುಷಿಕೊಡುತ್ತಿರುತ್ತದೆ. ಅದನ್ನವನು ಎಂಜಾಯ್ ಮಾಡುತ್ತಾನೆ. ಹಾಗೆ ಮಾಡುತ್ತಲೇ ಅಂಥದೊಂದು ಭ್ರಮಾಲೋಕ ಸೃಷ್ಟಿಸಿಕೊಂಡು ತನ್ನೊಳಗೇ ತಾನು ಜೇಡರಬಲೆ ಕಟ್ಟಿಕೊಳ್ಳುತ್ತಾನೆ. ಅದರಿಂದ ಆಚೆ ಬರೋದು ಅಷ್ಟು ಸುಲಭದ ಮಾತಲ್ಲ. ಒಂದಕ್ಕೊಂದು, ಮತ್ತೊಂದು, ಮಗದೊಂದು ಅಂತ ತಾನೇ ಸೃಷ್ಟಿಸಿಕೊಂಡ ಇಮೇಜನ್ನು ಪೋಷಿಸಿಕೊಂಡು ತನ್ನ ಕೈಯ್ಯಲ್ಲಾಗುವಷ್ಟೂ ದಿನ ಹೆಣಗುತ್ತಿರುತ್ತಾನೆ. ಅದೇನೂ ಅವನಿಗೆ ಅನಿವಾರ್ಯವೂ ಅಲ್ಲ; ಅವಶ್ಯಕತೆಯೂ ಅಲ್ಲ ಆದರೆ ಇಲ್ಲದ ದೊಡ್ಡಸ್ತಿಕೆಯನ್ನು ಇರುವಂತೆ ತೋರಿಸಿಕೊಂಡು ಓಡಾಡುವ ಖಯಾಲಿ ಅದು. ಕಾರಣ ಇಷ್ಟೆ; ಎಕನಾಮಿಕ್ ಸ್ಟೇಟಸ್ಸಿನ ಸೌಂಡು ಮತ್ತು ಸ್ಟೇಟಸ್ಸು ಮಧ್ಯಮ ವರ್ಗದ ಬದುಕಿನ ಮೇಲೆ ಜಾಗತೀಕರಣದ ಈ ವಿಪ್ಲವ ಕಾಲದಲ್ಲಿ ಸಿಕ್ಕಾಪಟ್ಟೆ ಪ್ರಭಾವ ಬೀರುತ್ತಿದೆ. ಅವರಂತೆ ನಾವಿರಬೇಕು! ಅಥವಾ ನಾವೂ ಅವರ ಥರಾನೇ ಇರುವಂತೆ ತೋರಿಸಿಕೊಳ್ಳಬೇಕು. ಹಾಗೆ ತೋರಿಸಿಕೊಳ್ಳಬೇಕೆಂದರೆ ಅದಕ್ಕೊಂದು ಅಪಿಯರೆನ್ಸ್ ಬೇಕು! ಅಪ್ರೋಚ್ ಬೇಕು! ಅದಕ್ಕಾಗಿ ಅವಶ್ಯಕತೆ ಇರಲಿ ಬಿಡಲಿ ತೋರಿಸಿಕೊಳ್ಳಲಿಕ್ಕಾದರೂ ಕೆಲವು ಐಷಾರಾಮಿ ಅಗತ್ಯಗಳನ್ನು ನಾವು ಪೂರೈಸಿಕೊಂಡು ಬಿಡಬೇಕು ಎಂಬ ಧಾವಂತ ಸೃಷ್ಟಿಯಾಗಿದೆ. ಅದಕ್ಕೆ ಸರಿಯಾಗಿ ಜಗತ್ತಿನಲ್ಲಿ ಲೋನ್ ಮೇಳಗಳು ಹುಟ್ಟಿಕೊಂಡಿವೆ. ಈ ತೋರಿಕೆಯ ದೊಡ್ಡಸ್ತಿಕೆಯೆಂಬ ಮಹಾಮಾಯೆಯ ತೃಪ್ತಿಗಾಗಿ ಈ ಖಯ್ಯಾಲಿಯ ಮೇಲೆಯೇ ಡಾ. ರಾಜ್ ಅವರ ಶಬ್ದವೇಧಿ ಸಿನಿಮಾದ ಹಾಡೊಂದಿದೆ. ನಟಿ ಜಯಪ್ರದ ಹಾಡುವ ಹಾಡದು!

ಸುಮ್ಮನಿರ್ರಿ ಸುಮ್ಮನಿರ್ರಿ ನಾವು ಯಾರ್ಗು ಕಮ್ಮೀ ಇಲ್ಲಾ
ನಮ್ಮೆಜಮಾನ್ರಂದ್ರೆ ಸುಮ್ನೇ ಅಲ್ಲಾ. . . . .

ಟಿ.ವಿ. ಫ್ರಿಡ್ಜು, ವಾಷಿಂಗ್‌ಮೆಷಿನ್ ತಗೊಳ್ಳೋ ವಿಷಯ ಚಿತ್ರಗೀತೆಯಾಗುತ್ತೆ ಅಂದ್ರೆ ಈ ತೋರಿಕೆಯ ದೊಡ್ಡಸ್ತಿಕೆ ಇನ್ನೆಷ್ಟು ಸೌಂಡ್ ಮಾಡುತ್ತಿರುತ್ತದೆ ಗಮನಿಸಿ!

ತಿಂಗಳಿಗೆ ಹತ್ತು ಸಾವಿರ ದುಡಿಯುವ ನೌಕರನ ಮನೆಯ ಪಕ್ಕದಲ್ಲಿ ತಿಂಗಳಿಗೆ ಅರವತ್ತು ಸಾವಿರ ಸಂಪಾದಿಸುವ ಆಸಾಮಿಯ ಸಂಸಾರ ಇದ್ದುಬಿಟ್ಟರೆ ಅಲ್ಲಿಗೆ ಮುಗೀತು, ದುಡಿಯುವವರ ದುಡಿಮೆಗಿಂತ; ಅವರ ಅವಲಂಬಿತರ ಬೇಗುದಿಯೆ ಹೆಚ್ಚಾಗಿ ಬಿಡುತ್ತೆ. ಅರವತ್ತು ಸಾವಿರದವರ ಸೌಂಡು, ಸ್ಟೇಟಸ್ಸು ದುಡ್ಡಿನ ಕಾರಣಕ್ಕೆ ಜಾಸ್ತಿಯಾದರೆ, ಅವರಿಗೆ ತಮ್ಮನ್ನು ಹೋಲಿಸಿಕೊಂಡು ಅನಗತ್ಯ ಖುಷಿಗಾಗಿ, ಒತ್ತಡದ ಅಗತ್ಯಗಳನ್ನು ಪೂರೈಸಿಕೊಳ್ಳಲಾರದೆ ಪಕ್ಕದವರ ಮನೆಯಲ್ಲಿ ಅಶಾಂತಿ ಕಾಡುತ್ತದೆ. ತೋರಿಕೆಯ ಪ್ರತಿಷ್ಠೆಗಳು ಮನಸ್ಸಿನ ಸಮಾಧಾನವನ್ನು ಕೊಲ್ಲುತ್ತವೆ. ಇದೇನು ಮಧ್ಯಮ ವರ್ಗದವರನ್ನು ಮಾತ್ರ ಕಾಡುವ ಸಾಮಾಜಿಕ ಅಂತಸ್ತಿನ ಸಮಸ್ಯೆ ಅಲ್ಲ, ಶ್ರೀಮಂತರನ್ನೂ ಸೆಲೆಬ್ರಿಟಿಗಳನ್ನೂ, ಕಾಡುವ ಮಾಯೆ. ಶ್ರೀಮಂತರೂ ಕೂಡ ತಮಗಿಂತ ಒಂದು ಕೈ ಮೇಲಿರುವವರಿಗೆ ತಮ್ಮನ್ನು ತಾವು ಹೋಲಿಸಿಕೊಳ್ಳುತ್ತಿರುತ್ತಾರೆ.

ನಿಜವಾದ ಅಗತ್ಯಗಳನ್ನು ಪಕ್ಕಕ್ಕಿಟ್ಟು ಮಿತಿಮೀರಿದ ಸ್ಟೈಲು ಮತ್ತು ಸ್ಟೇಟಸ್ಸಿನ ತೋರಿಕೆಯಿಂದಲೇ ತಮ್ಮ ಐಡೆಂಟಿಟಿಯನ್ನು ಗುರುತಿಸಿಕೊಳ್ಳುವಂತೆ ಮಾಡುವ ಈ ಸಾಮಾಜಿಕ ತೆವಲಿಗೆ ಕಾರಣ ಆರ್ಥಿಕ ಅಸಮಾನತೆ. ಕೆಲವರಂತೂ 'ಏಕ್ ದಿನ್ ಕ ಸುಲ್ತಾನ್'ಆದರೂ ಪರ್ವಾಗಿಲ್ಲ ದುಬಾರಿ ಬದುಕು ಬದುಕಿಬಿಡಬೇಕೆಂಬ ಹಠಕ್ಕೆ ಬೀಳುವಂತೆ ಮಾಡಿಬಿಡುವ ಈ ಆಂತರ್ಯದ ಹುನ್ನಾರಕ್ಕೆ ಏನೆನ್ನುತ್ತೀರಿ! ಚೆನ್ನಾಗಿ ಬಾಳಿ ಬದುಕಿದವರು ಅಪ್ಪಿತಪ್ಪಿ ಗರೀಬರಾಗಿ ಬಿಟ್ಟರೆ ತಮ್ಮ ಹಳೆಯ ಸ್ಟೇಟಸ್ಸನ್ನು ತೋರಿಸಿಕೊಳ್ಳಲು ಇದ್ದ ಬದ್ದ ಆಸ್ತಿಯನ್ನೆಲ್ಲಾ ಮಾರಿಕೊಂಡು ಅದೇ ಹಳೆ ಶ್ರೀಮಂತಿಕೆಯ ಗತ್ತು ಗಮ್ಮತ್ತುಗಳ ಜರೂರತ್ತಿನಲ್ಲಿಯೇ ಕಾಣಿಸಿಕೊಳ್ಳಲು ಪರದಾಡುತ್ತಿರುತ್ತಾರೆ. ಎಷ್ಟೇ ಕಷ್ಟವಿದ್ದರೂ ಸರಿ; ನಾನು ಕೆಳಗೆ ಬಿದ್ದೇ ಇಲ್ಲ; ನನ್ನ ಮೀಸೆ ಮಣ್ಣೇ ಆಗಿಲ್ಲ ಎಂಬುದನ್ನು ಪ್ರೂವ್ ಮಾಡಿಕೊಳ್ಳಲು ಹೆಣಗುವ ಪರಿ ಇದೆಯಲ್ಲಾ! ಅದು ಯಾರನ್ನೂ ಬಿಟ್ಟಿಲ್ಲ. ಅಸಲಿಗೆ ಅದು ಅವರ ಸ್ವಂತ ಇಮೇಜೇ ಅಲ್ಲ; ಅದು ಅವರ ಮುಖವಾಡ, ಆ ಮುಖವಾಡ ಕಳಚಿದರೆ ಅವರ ಅಸಲೀಯತ್ತು ಅವರಿಗೆ ಚೆನ್ನಾಗಿ ಗೊತ್ತು. ಆದರೆ ಅಸಲೀಯತ್ತಿನಲ್ಲಿ ಬದುಕುವ ಸುಖಕ್ಕಿಂತ ಈ ಸ್ಯೂಡೋ ಪರ್ಸನಾಲಿಟಿ ತಂದುಕೊಡುವ ಸಾರ್ವಜನಿಕ ಸುಖ ನಶೆ ಏರಿಸುವುದರಿಂದ, ಅಸಲಿಗಿಂತ ನಕಲಿಯೇ ಇಲ್ಲಿ ವಿಜೃಂಭಿಸುತ್ತದೆ. ಸೆಲೆಬ್ರಿಟಿಗಳಿಗೆ, ದೊಡ್ಡಸ್ತಿಕೆಯಲ್ಲಿ ಮೆರೆದವರಿಗೆ, ಎಷ್ಟೋ ಬಾರಿ ಈ ದುಬಾರಿ ಜೀವನಶೈಲಿಯ ಹೊರೆಗಿಂತ ಸರಳ ಜೀವನದ ಅನಿವಾರ್ಯ ಅರ್ಥವಾಗಿರುತ್ತದೆ, ಆದರೆ ಉತ್ತುಂಗಕ್ಕೇರಿದ ಅವರ ವ್ಯಕ್ತಿಚಿತ್ರಗಳು ಕಷ್ಟಗಳ ಸುಳಿಗಾಳಿಗೆ ಸಿಕ್ಕಿ ಕೆಳಗಿಳಿಯುವುದು ಅವರಿಗೆ ಸುತಾರಾಂ ಇಷ್ಟವಿರುವುದಿಲ್ಲ. ಅದಕ್ಕಾಗಿ ಎಂಥ ತ್ಯಾಗಕ್ಕಾದರೂ ಅವರು ಸಿದ್ಧರಾಗಿಬಿಡುತ್ತಾರೆ. ಬಹಳಷ್ಟು ಜನ ತಮ್ಮ ಇಮೇಜು ಕುಸಿದ ಕೂಡಲೇ ಮಾನಸಿಕ ಖಿನ್ನತೆಗೆ ಒಳಗಾದವರಿದ್ದಾರೆ. ಆತ್ಮಹತ್ಯೆ ಮಾಡಿಕೊಂಡು ಜೀವ ಬಿಟ್ಟವರಿದ್ದಾರೆ. 30 ರೂಪಾಯಿಯ ಆಸ್ತಿಯ ಮೇಲೆ 300 ರೂಪಾಯಿ ಸಾಲ ಮಾಡಿ 600ರಷ್ಟು ಬಡ್ಡಿ ಕಟ್ಟಿ ಹೈರಾಣಾದವರಿದ್ದಾರೆ. ಇಷ್ಟೆಲ್ಲಾ ಮುಚ್ಚುಮರೆಯ ಹಿಂದೆ ಕಾಣುವ ಸತ್ಯ ಒಂದೇ ಅದು ತೋರಿಕೆಯ ಪ್ರತಿಷ್ಠೆ. ಸಾಮಾಜಿಕ ಅಂತಸ್ತನ್ನು ಉಳಿಸಿಕೊಳ್ಳಲು ಹೆಣಗುವ ಪರಿ. ಮತ್ತೆ ಕೆಲವರ ಸ್ಯೂಡೋ ತಾಪತ್ರಯಗಳು ಬೇರೇ ಥರ. ನಾನು ಮುಂದೆ ಏನೆಲ್ಲಾ ಆಗ್ತೀನಿ, ಏನೆಲ್ಲಾ ಮಾಡಬೇಕೆಂದಿದ್ದೇನೆ ಅನ್ನೋದನ್ನು ಇವತ್ತೇ ಹೇಳಿಕೊಂಡು ಮರ್ಯಾದೆ ನಿರೀಕ್ಷಿಸುವ ತೋರಿಕೆಯ ಪ್ರತಿಷ್ಠೆ ನಮ್ಮ ಕಾಲದ ಅಲಂಕರಣ. ಅಸಲಿ ಚಿನ್ನವನ್ನೇ ಹೋಲುವ ನಕಲಿ ಬಂಗಾರದ ಒಡವೆಗಳಿಗೀಗ ಎಲ್ಲಿಲ್ಲದ ಬೆಲೆ. ಕಾರಣ ಈ ಸ್ಯೂಡೋ ಸ್ಟೇಟಸ್ಸು.

ಈ ಸ್ಯೂಡೋ ಸ್ಟೇಟಸ್ಸು ಮದುವೆ ಮನೆಯಲ್ಲಿ ಹೇಗೆಲ್ಲಾ ಕಾಲಮಾನವನ್ನು ಬದಲಾಯಿಸಿಬಿಟ್ಟಿದೆಯೆಂದರೆ ಮದುವೆಯ ಮುಖ್ಯ ಭಾಗವೇ ತಾಳಿಕಟ್ಟುವ ಶುಭವೇಳೆ! ಆದರೆ ತಾಳಿ ಕಟ್ಟುವ ಶುಭವೇಳೆ ಕೇವಲ ವಧುವರರ ಬಂಧುಬಾಂಧವರು ಮಾತ್ರ ಇರುತ್ತಾರೆಯೇ ವಿನಃ ಉಳಿದವರೆಲ್ಲರೂ ಆರತಕ್ಷತೆಗೇ ಬಂದು ಹೋಗಿರುತ್ತಾರೆ. ಸ್ಯೂಡೋ ಸ್ಟೇಟಸ್ಸುಗಳ ತೋರಿಕೆಗೆ ಆರತಕ್ಷತೆಯಲ್ಲಿ ಅವಕಾಶವಿದ್ದಷ್ಟು ಧಾರಾ ಮುಹೂರ್ತದಲ್ಲಿ ಇರುವುದಿಲ್ಲ. ನಮ್ಮ ಬಳಿ ಎಲ್ಲವೂ ಇದೆ ನಾವು ಯಾರಿಗೂ ಏನೂ ಕಮ್ಮಿ ಇಲ್ಲ ಎನ್ನುವ ಈ ಈಗೋಸೆಂಟ್ರಿಕ್ ಅಹಂಕಾರಗಳೇ ಇಂದಿನ ನಮ್ಮ ಅಲಂಕಾರಗಳಾಗುತ್ತಿವೆ. ಸಮಾಜದಲ್ಲಿ ನಮಗೆ ಗೌರವ ಸ್ಥಾನಗಳು ದಕ್ಕುವುದೇ ಈ ಒಣಪ್ರತಿಷ್ಠೆಯ ತೋರಿಕೆಯಿಂದ ಎಂಬ ಭ್ರಮಾಲೋಕ ಎಲ್ಲ ವಯಸ್ಸಿನವರನ್ನೂ ಆಕರ್ಷಿಸುತ್ತಿದೆ. ಸೊಫೆಸ್ಟಿಕೇಟೆಡ್ ನಾರ್ಸಿಸಮ್' ಎನ್ನುವ ಈ ನಾನೇ ನಾನೇ ನಾನೇ ಎಂದು ನಂಬಿಸುವ ನೇಚರ್ರೇ ಇವತ್ತು, ಬದುಕುವ ನಮ್ಮ ಕಲ್ಚರ್ ಆಗಿ ರೂಪುಗೊಳ್ಳುತ್ತಿದೆ. ಇದು ತೀರಾ ಅಪಾಯ. ತೀರಾ ವೈಯಕ್ತಿಕ ಮಟ್ಟದಲ್ಲಿ ಹೀಗೆ ವ್ಯಕ್ತಿತ್ವದ ಬದಲಾವಣೆಗಳಾದರೆ ಹತ್ತರಲ್ಲಿ ಹನ್ನೊಂದಾಗಿ ಅದು ನಶಿಸಿಹೋಗಬಹುದು. ಆದರೆ ಇಡೀ ಸಮಾಜದ ಬಹುತ್ವವೇ ಗೊತ್ತಿದ್ದೂ ಗೊತ್ತಿದ್ದೂ, ಈ ಸ್ಯೂಡೋ ಸ್ಟೇಟಸ್ಸಿನ ಆಕರ್ಷಣೆಗೆ ಒಳಗಾಗಿಬಿಟ್ಟರೆ ಆಂತರ್ಯದ ಅಸ್ತಿತ್ವ ಮಾಯವಾಗಿ ಅದರ ಜಾಗದಲ್ಲಿ ತೋರಿಕೆಯ ದೊಡ್ಡಸ್ತಿಕೆಗಳೇ ಮಿಂಚಿಬಿಡುತ್ತವೆ. ಅದರಲ್ಲೂ ಯುವ ಜನಾಂಗವನ್ನು ಇದು ಹೇಗೆ ಆಕರ್ಷಿಸಿದೆಯೆಂದರೆ ಇಂದಿನ ಯುವಸಮೂಹಕ್ಕೆ ಬಡತನವನ್ನು ಪ್ರೊಜೆಕ್ಟ್ ಮಾಡಿಕೊಳ್ಳುವ ಪ್ರವೃತ್ತಿಯೇ ಬಹುಪಾಲು ಮಾಯವಾಗಿ ಹೋಗುತ್ತಿದೆ. ಬಡತನವನ್ನು ಹೇಳಿಕೊಳ್ಳೋದೆ ಒಂದು ಅಪಮಾನ. ಹಾಗೆ ಹೇಳಿಕೊಂಡರೆ ನಮ್ಮನ್ನು ಕೀಳಾಗಿ ಕಂಡುಬಿಡುವ ಅಪಾಯದಿಂದ ಪಾರಾಗಲು, ಯುವಜನತೆ ಕೈಯಲ್ಲೊಂದು ಐಫೋನು, ಬಣ್ಣಬಣ್ಣದ ಪೋಷಾಕು, ಬ್ರಾಂಡೆಡ್ ಕಂಪನಿಗಳ ಬಟ್ಟೆಬರೆಗಳಿಂದ ಮೈಮುಚ್ಚಿಕೊಂಡು ಬಡತನವನ್ನು ಮರೆ ಮಾಚಿ, ನಾವು ಯಾರ್ಗೂ ಏನೂ ಕಮ್ಮಿ ಇಲ್ಲಾ ಎನ್ನುವ ಬಿಲ್ಡಪ್ ಕೊಡುವ ತೋರಿಕೆಯ ಪ್ರತಿಷ್ಠೆಗೆ ಬಿದ್ದು ಬಿಟ್ಟಿದ್ದಾರೆ. ಬಡವ ಬಲ್ಲಿದನಾದ ಕತೆಗಳು, ಕೇವಲ ಭಾಷಣಕ್ಕೆ, ಲೇಖನಕ್ಕೆ, ಪಠ್ಯಪುಸ್ತಕಕ್ಕೆ ಸೀಮಿತವಾಗಿಬಿಟ್ಟಿವೆ. ನೋಡಲು ಸುಂದರವಾಗಿ ಕಾಣಬೇಕು, ಹೈಫೈ ಸೊಸೈಟಿಯಲ್ಲಿ ತಾವು ಗುರುತಿಸಿಕೊಳ್ಳಬೇಕು, ಈಗಾಗಲೇ ಹೆಸರು ಮಾಡಿದವರ ಜೊತೆ, ದುಡ್ಡು ಮಾಡಿದವರ ಜೊತೆ, ಅಧಿಕಾರವಿದ್ದವರ ಜೊತೆ ಗೆಳೆತನ ಸಂಪಾದಿಸಬೇಕು, ಅದಕ್ಕಾಗಿ ಎಂಥ ತ್ಯಾಗವೇ ಆದರೂ ಸರಿ! ನನ್ನಲ್ಲಿಲ್ಲದ ಕೊರತೆಗಳನ್ನು ತುಂಬಿಕೊಳ್ಳಬೇಕು, ಹೊಂದಿಸಿಕೊಳ್ಳಬೇಕು ಒಟ್ಟಾರೆ ನಮ್ಮ ಚೌಕಟ್ಟನ್ನು ಮೀರಿ ಭ್ರಮೆಯ ಬದುಕಿನ ಹಿಂದೆ ಓಡಬೇಕು. ಇದು ನಮ್ಮ ಕಾಲಕ್ಕೆ ಸ್ಯೂಡೋ ಸಂಸ್ಕೃತಿ ಕೊಟ್ಟ ಉಡುಗೊರೆ. ಇದಕ್ಕೆ ಕಾರಣ ಜಾಗತೀಕರಣದ. ಅತ್ಯಾಕರ್ಷಕ ಮಾರುಕಟ್ಟೆ ಸಂಸ್ಕೃತಿ, ಈ ತೋರಿಕೆಯ ಸಿರಿತನವೆಂಬ, ಬೆಡಗಿನ ಹಾಹಾಕಾರ, ನಮ್ಮನ್ನೂ ಆವರಿಸಿಕೊಳ್ಳುತ್ತಿದೆ. ಎಲ್ಲರನ್ನೂ ಅಲ್ಲದಿದ್ದರೂ ಹಲವರನ್ನಾದರೂ ಈ ಇಲ್ಲದ ದೊಡ್ಡಸ್ತಿಕೆ ಆಕರ್ಷಿಸಿದೆ. ಅಪಾಯವೆಂದರೆ ನಮ್ಮಲ್ಲಿ ಇಲ್ಲದ ದೊಡ್ಡಸ್ತಿಕೆಯನ್ನು ಇರುವಂತೆ ತೋರಿಸಿಕೊಳ್ಳುತ್ತಾ ಬದುಕುವ ಈ ಸ್ಯೂಡೋ ಕಲ್ಚರ್ರು ಪ್ರತಿದಿನ ತನ್ನ ಮುಖವಾಡಕ್ಕೆ ಬಣ್ಣ ಕೇಳುತ್ತದೆ! ನಮ್ಮ ಅಗತ್ಯಗಳಿಗಷ್ಟೇ ಹೊಂದಿಕೊಂಡು ಸರಳವಾಗಿ ಬದುಕುವ ಬದುಕು ನೈಜವೂ, ಸುಂದರವೂ ಆಗಿರುತ್ತದೆಂಬುದೇ ಸತ್ಯ. ಮೈತುಂಬ ಚಿನ್ನಾಭರಣಗಳನ್ನು ಧರಿಸದೇ ಓಡಾಡುವ ಇನ್ಫೋಸಿಸ್‌ನ ಶ್ರೀಮತಿ ಸುಧಾಮೂರ್ತಿಯವರ ಸರಳತೆಯೇ ಸುದ್ದಿಯಾಗುವುದಾದರೆ ನಾವು ಸುದ್ದಿಯಾಗದಿದ್ದರೂ ಚಿಂತೆಯಿಲ್ಲ; ಸದ್ದಿಲ್ಲದೇ ನೆಮ್ಮದಿಯ ಬದುಕು ನಡೆಸಲಿಕ್ಕೆ ಬೇಕಾಗಿರುವುದು ತೋರಿಕೆಯ ಪ್ರತಿಷ್ಠೆಗಿಂತ, ನೋಡಿ ಸ್ವಾಮಿ ನಾವಿರೋದೆ ಹೀಗೆ ಅಂತ ಬೋಲ್ಡಾಗಿ ಬದುಕಿಬಿಡುವ ಸರಳಸಜ್ಜನಿಕೆಗಳು ನಿಜಕ್ಕೂ ನಮಗಿರುವ ದೊಡ್ಡ ಶ್ರೀಮಂತಿಕೆಗಳು. ಅದಕ್ಕೇ ದ.ರಾ.ಬೇಂದ್ರೆ ಹೇಳಿದ್ದು.

ನಾನು ಬಡವಿ ಆತ ಬಡವ
ಒಲವೇ ನಮ್ಮ ಬದುಕು–ಅಂತ. ಏನಂತೀರಿ?

ಚಾಮರಾಜ ಕ್ಷೇತ್ರದಲ್ಲಿ ಬಿಜೆಪಿ ಅಭ್ಯರ್ಥಿ ಯದುವೀರ್ ಮತಯಾಚನೆ

ಮೈಸೂರು, ಏ.22(ಎಂಕೆ): ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಚಾಮರಾಜ ವಿಧಾನಸಭಾ ಕ್ಷೇತ್ರದ ವಿವಿಧೆಡೆ ಸೋಮವಾರ ರೋಡ್ ಶೋ ನಡೆಸುವ ಮೂಲಕ ಮತ ಬೇಟೆ ನಡೆಸಿದರು.

ಮೈಸೂರು ನಗರದ ರೈಲ್ವೆ ನಿಲ್ದಾಣದಿಂದ ಚುನಾವಣಾ ಪ್ರಚಾರ ಕಾರ್ಯ ಆರಂಭಿಸಿದ ಯದುವೀರ್ ಅವರು, ಆಟೋ ನಿಲ್ದಾಣದಲ್ಲಿ ರಿಕ್ಷಾ ಚಾಲಕರು, ಪ್ರಯಾಣಿಕರಲ್ಲಿ ಮತ ಯಾಚನೆ ಮಾಡಿದರು. ಬಳಿಕ ಕೆಆರ್‌ಎಸ್ ಮುಖ್ಯ ರಸ್ತೆಯ ಹೆಬ್ಬಾಳಿನ ಆರ್ಚ್ ಗೇಟ್ (ಹೆಬ್ಬಾಳಿನ ಹೆಬ್ಬಾಗಿಲು), ಹೆಬ್ಬಾಳಿನ ಸೂರ್ಯ ಬೇಕರಿ ವೃತ್ತ, ಕುಂಬಾರ ಕೊಪ್ಪಲು, ಮಹದೇಶ್ವರ ಬಡಾವಣೆ, ಗೋಕುಲಂ ಮೂರನೇ ಹಂತ, ಮಂಚೇಗೌಡನ ಕೊಪ್ಪಲು, ಲಕ್ಷ್ಮೀಕಾಂತನಗರ ಹಾಗೂ ಸುಬ್ರಹ್ಮಣ್ಯ ನಗರ ಸೇರಿದಂತೆ ಸುತ್ತಲಿನ ಬಡಾವಣೆ ವ್ಯಾಪ್ತಿಯಲ್ಲಿ ಭರ್ಜರಿ ರೋಡ್ ಶೋ ನಡೆಸುವ ಮೂಲಕ ಮತ ಬೇಟೆ ನಡೆಸಿದರು.

ಈ ವೇಳೆ ಮಾತನಾಡಿದ ಅವರು, ಕಮಲ ಗುರುತಿಗೆ ಮತ ನೀಡಿ ಗೆಲ್ಲಿಸುವುದರಿಂದ ಕೇಂದ್ರದಲ್ಲಿ ಪ್ರಧಾನಿ ಮೋದಿ ನೇತೃತ್ವದ ಸರ್ಕಾರ ಮತ್ತೇ ಆಡಳಿತ ನಡೆಸಲಿದೆ. ವಿಕಸಿತ ಭಾರತದ ಅಭಿವೃದ್ಧಿಗೆ ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಕೊಡುಗೆಯೂ ಇರಲಿದೆ ನಿಮ್ಮೊಂದಿಗಿದ್ದು ಅಭಿವೃದ್ಧಿ ಪರ ಕೆಲಸ ಮಾಡಲು, ಮೈಸೂರು–ಕೊಡಗು ಕ್ಷೇತ್ರವನ್ನು ಆರೋಗ್ಯ ಮತ್ತು ಶಿಕ್ಷಣ ಕ್ಷೇತ್ರವಾಗಿ ನಿರ್ಮಾಣ ಮಾಡಲು ಅವಕಾಶ ಮಾಡಿಕೊಡಿ ಎಂದು ಮನವಿ ಮಾಡಿದರು.

ಬಿಜೆಪಿ ನಗರಾಧ್ಯಕ್ಷ ಎಲ್.ನಾಗೇಂದ್ರ, ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರದ ಮಾಜಿ ಅಧ್ಯಕ್ಷ ಹಾಗೂ ಅಭ್ಯರ್ಥಿ ಪ್ರಚಾರ ಪ್ರಮುಖ್ ಹೇಮಂತ್ ಕುಮಾರ್‌ಗೌಡ, ಮೈಸೂರು ನಗರ ಬಿಜೆಪಿ ಪ್ರಧಾನ ಕಾರ್ಯದರ್ಶಿ ಬಿ.ಎಂ.ರಘು, ಪಾಲಿಕೆ ಮಾಜಿ ಸದಸ್ಯ ಕೆ.ವಿ.ಶ್ರೀಧರ್, ಮೈಸೂರು ನಗರ ಬಿಜೆಪಿ ಪ್ರಧಾನ ಕಾರ್ಯದರ್ಶಿ ಬಿ.ಎಂ.ರಘು, ಮುಖಂಡರಾದ ಕವೀಶ್‌ಗೌಡ, ಕಿರಣ್‌ಗೌಡ ಇತರರು ಸಾಥ್ ನೀಡಿದರು.



ಚಾಮರಾಜ ವಿಧಾನಸಭಾ ಕ್ಷೇತ್ರದ ವಿವಿಧೆಡೆ ಬಿಜೆಪಿ ಅಭ್ಯರ್ಥಿ ಯದುವೀರ್ ರೋಡ್ ಶೋ ಮೂಲಕ ಮತಯಾಚಿಸಿದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy News papers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ಮೈಸೂರು ಮಿತ್ರ

ಸಾವಯವ ಆಧಾರಿತ ಅಭಿವೃದ್ಧಿ ಮೂಲಕ


ಮೈಸೂರು–ಕೊಡಗು ಸಹಜ ಸೌಂದರ್ಯ ಕಾಪಾಡಿಕೊಳ್ಳಲೇಬೇಕಿದೆ...

–ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್

ಮೈಸೂರು–ಕೊಡಗು ಎನ್‌ಡಿಎ ಲೋಕಸಭಾ ಅಭ್ಯರ್ಥಿ



ಲೋಕಸಭಾ ಸಾರ್ವತ್ರಿಕ ಚುನಾವಣೆಯ ಪ್ರತಿಷ್ಠಿತ ಕಣಗಳಲ್ಲಿ ಹಳೇ ಮೈಸೂರು ಭಾಗದ ಪ್ರಮುಖ ಮೈಸೂರು–ಕೊಡಗು ಕ್ಷೇತ್ರವೂ ಒಂದು. ಯದುವಂಶದ ಉತ್ತರಾಧಿಕಾರಿ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಬಿಜೆಪಿ ಹಾಗೂ ಜೆಡಿಎಸ್ (ಎನ್‌ಡಿಎ) ಮೈತ್ರಿ ಅಭ್ಯರ್ಥಿಯಾಗಿ ಬಿಜೆಪಿ ಚಿಹ್ನೆಯಡಿ ಸ್ಪರ್ಧಿಸಿದ್ದಾರೆ. ಇವರ ಸ್ಪರ್ಧೆ ದೇಶದ ಗಮನ ಸೆಳೆದಿದೆ. ಇದಕ್ಕೆ ಜಗದ್ವಿಖ್ಯಾತ ಮೈಸೂರು ಹಾಗೂ ಇದನ್ನು ಆಳಿದಂತಹ ವಂಶದ ಉತ್ತರಾಧಿಕಾರಿ ಯದುವೀರ್ ಸ್ಪರ್ಧೆ ಕಾರಣ. ಅವಿಶ್ರಾಂತ ಪ್ರಚಾರದ ನಡುವೆಯೂ 'ಮೈಸೂರು ಮಿತ್ರ'ನೊಂದಿಗೆ ಹಲವು ವಿಚಾರಗಳನ್ನು ಯದುವೀರ್ ಅವರು ಹಂಚಿಕೊಂಡಿದ್ದಾರೆ.





ಮೈಸೂರು ಮಿತ್ರ: *ಮೈಸೂರು–ಕೊಡಗು ಜಿಲ್ಲೆಗಳ ಹಲವೆಡೆ ಪ್ರಚಾರ ನಡೆಸಿದ್ದೀರಿ, ಜನರ ಪ್ರತಿಕ್ರಿಯೆ ಹೇಗಿದೆ?.*

ಯದುವೀರ್: ಜನರ ಪ್ರತಿಕ್ರಿಯೆ ಖುಷಿ ತಂದಿದೆ. ತುಂಬಾ ಉತ್ಸಾಹದಿಂದ ಎಲ್ಲರೂ ಭಾಗವಹಿಸುತ್ತಿದ್ದಾರೆ. ನರೇಂದ್ರ ಮೋದಿ ಅವರು ಮತ್ತೊಮ್ಮೆ ಪ್ರಧಾನಿ ಆಗಬೇಕೆಂಬ ಏಕೈಕ ಗುರಿಯೊಂದಿಗೆ ಎಲ್ಲಾ ಮುಖಂಡರು, ಕಾರ್ಯಕರ್ತರು, ಜನಸಾಮಾನ್ಯರು ಕೆಲಸ ಮಾಡುತ್ತಿದ್ದಾರೆ. ಜೊತೆಗೆ ನಮ್ಮ ಮಹಾರಾಜರುಗಳು ಮಾಡಿರುವ ಕೆಲಸವನ್ನು ಸ್ಮರಿಸಿಕೊಳ್ಳುತ್ತಿದ್ದಾರೆ. ರಾಜಮನೆತನದೊಂದಿಗೆ ಜನರಿಗೆ ಭಾವನಾತ್ಮಕ ಸಂಬಂಧವಿದೆ. ನಾನು ಇದುವರೆಗೆ ಹೋದಲ್ಲೆಲ್ಲಾ ಉತ್ತಮ ವಾತಾವರಣವಿದೆ.

ಮಿತ್ರ: *ಲೋಕಸಭಾ ಚುನಾವಣೆಯ ಬಿಜೆಪಿ ಅಭ್ಯರ್ಥಿಗಳ ಪಟ್ಟಿಯಲ್ಲಿ ನಿಮ್ಮ ಹೆಸರು ಪ್ರಕಟವಾದ ಕ್ಷಣ ಹೇಗನ್ನಿಸಿತು? ಟಿಕೆಟ್ ಸಿಗುವ ನಿರೀಕ್ಷೆ ಇತ್ತೇ ಇಲ್ಲ ಅದು ಅನಿರೀಕ್ಷಿತವೇ?.*

ಯದುವೀರ್: ಸಾಕಷ್ಟು ಜನ ಆಕಾಂಕ್ಷಿಗಳಿದ್ದರು. ಆ ಪಟ್ಟಿಯಲ್ಲಿ ನನ್ನ ಹೆಸರೂ ಇದೆ ಎನ್ನುವುದು ತಿಳಿದಿತ್ತು. ನನ್ನ ಪರವಾಗಿ ನಿರ್ಧಾರ ಆಗಬಹುದು ಎಂದು ಸಹಜವಾಗಿ ಅನ್ನಿಸಿತ್ತು. ಹಾಗಾಗಿ ಮಾನಸಿಕವಾಗಿ ಸಿದ್ಧನಿದ್ದೆ.

ಮಿತ್ರ: *ರಾಜಕೀಯದ ಬಗ್ಗೆ ನಿಮಗೆ ಆಸಕ್ತಿ ಮೂಡಿದ್ದು ಯಾವಾಗ?.*

ಯದುವೀರ್: ರಾಜಕೀಯಕ್ಕೆ ಪ್ರವೇಶಿಸುವ ವಿಚಾರದಲ್ಲಿ ನನಗೆ ಆಸಕ್ತಿ ಹುಟ್ಟಿದ್ದೇ ದತ್ತು ಸ್ವೀಕಾರವಾದ ನಂತರದಲ್ಲಿ. ಆದರೆ, ನಾನು ಅದನ್ನು ಗಂಭೀರವಾಗಿ ಪರಿಗಣಿಸಿರಲಿಲ್ಲ. ಈಗ್ಗೆ ಒಂದು ವರ್ಷದಿಂದ ಇದರ ಬಗ್ಗೆ ಗಂಭೀರವಾಗಿ ಚಿಂತನೆ ಮಾಡಿದ್ದೆ. ದೊಡ್ಡ ಮಟ್ಟದಲ್ಲಿ ಸಮಾಜ ಸೇವೆ ಮಾಡಬೇಕಾದರೆ, ನೀತಿ–ನಿಯಮಾವಳಿಗಳ ಮೂಲಕ ಪರಿಣಾಮಕಾರಿ ಬದಲಾವಣೆ ತರಬೇಕಾದರೆ ಅಧಿಕಾರ ಇರಬೇಕು. ಅದಕ್ಕೆ ಜನಪ್ರತಿನಿಧಿಯಾಗಿ ಆಯ್ಕೆಯಾಗಬೇಕು ಅನ್ನಿಸಿತು. ಈ ಕಾರಣದಿಂದ ರಾಜಕೀಯ ಪ್ರವೇಶಿಸಿದ್ದೇನೆ.

ಮಿತ್ರ: *ನಿಮ್ಮ ಪೂರ್ವಿಕರಾದ ಶ್ರೀಕಂಠದತ್ತ ನರಸಿಂಹ ರಾಜ ಒಡೆಯರ್ ಅವರು ಕಾಂಗ್ರೆಸ್‌ನಿಂದ ನಾಲ್ಕು ಬಾರಿ ಸಂಸದರಾಗಿ ಆಯ್ಕೆಯಾಗಿದ್ದರು. ಆ ನಿಟ್ಟಿನಲ್ಲಿ ನಿಮಗೇನಾದರೂ ಕಾಂಗ್ರೆಸ್‌ನಿಂದ ಆಹ್ವಾನವಿತ್ತೇ?.*

ಯದುವೀರ್: ಅರಮನೆಗೆ ಸಂಬಂಧಿಸಿದ ವಿಷಯಗಳಿಗೆ ಸಂಬಂಧಪಟ್ಟಂತೆ ಎಲ್ಲಾ ರಾಜಕೀಯ ಪಕ್ಷಗಳು ಹಾಗೂ ನಾಯಕರೊಂದಿಗೆ ಸಂಪರ್ಕದಲ್ಲಿದ್ದೆವು. ಕೆಲವು ಕಾಂಗ್ರೆಸ್ ನಾಯಕರು ವೈಯಕ್ತಿಕವಾಗಿ ನನ್ನನ್ನು ಆಹ್ವಾನಿಸಿದ್ದರು, ಆದರೆ ಆ ಬಗ್ಗೆ ಹೆಚ್ಚು ವಿಚಾರವನ್ನು ಹಂಚಿಕೊಳ್ಳಲು ಇಷ್ಟಪಡೋದಿಲ್ಲ.

ಮಿತ್ರ: *ಬೆಂಗಳೂರು ಹಾಗೂ ವಿದೇಶದಲ್ಲಿ ವಿದ್ಯಾಭ್ಯಾಸ ಮಾಡಿದ್ದರೂ ಮೈಸೂರಿನೊಂದಿಗೆ ಬಾಲ್ಯದಿಂದಲೂ ಒಡನಾಟ ಇದೆ ಎಂದಿದ್ದೀರಿ. ಆಗಿನ ಸಂದರ್ಭಕ್ಕೆ ಮೈಸೂರಿನ ಬಗ್ಗೆ ನಿಮ್ಮ ಚಿಂತನೆ ಏನಿತ್ತು?.*

ಯದುವೀರ್: ಮೈಸೂರಿನ ಪರಂಪರೆಯನ್ನು ಶಾಶ್ವತವಾಗಿ ಉಳಿಸುವ ನಿಟ್ಟಿನಲ್ಲಿ ಏನಾದರೂ ಕೆಲಸ ಮಾಡಬೇಕು ಎಂಬ ಆಸೆ ಇದ್ದೇ ಇತ್ತು. ಆ ನಿಟ್ಟಿನಲ್ಲಿ ದೊಡ್ಡ ಮಟ್ಟದಲ್ಲಿ ಕೆಲಸ ಮಾಡಬಹುದಾದ ಅವಕಾಶ ಬಂದಿದೆ. ಮೈಸೂರು, ಬಾದಾಮಿ ಹಾಗೂ ಹಂಪಿ ಪ್ರವಾಸಿ ತಾಣಗಳು ಹೆರಿಟೇಜ್ ಕಾರಿಡಾರ್ ಆಗುತ್ತವೆ ಎಂದು ಪ್ರಧಾನ ಮಂತ್ರಿಯವರು ಈಗಾಗಲೇ ಘೋಷಿಸಿದ್ದಾರೆ. ಪ್ರಧಾನ ಮಂತ್ರಿಯವರ ದೂರದೃಷ್ಟಿ ಯೋಜನೆ ಅನುಷ್ಠಾನಕ್ಕೆ ನಾವು ಸೇತುವೆಯಾಗಿ ಕೆಲಸ ಮಾಡುವ ಅವಕಾಶ ಎದುರಿಗಿದೆ.

ಮಿತ್ರ: *ಅಭ್ಯರ್ಥಿಗಳ ಪಟ್ಟಿ ಪ್ರಕಟವಾಗೋ ಕ್ಷಣದವರೆಗೂ ತಮ್ಮನ್ನು ಸುಲಭವಾಗಿ ಭೇಟಿಯಾಗುವ ಸಂದರ್ಭಗಳು ಕಡಿಮೆ ಇತ್ತು. ನಂತರ ಜನರ ನೂಕುನುಗ್ಗಲು, ಸನ್ಮಾನ, ಜೈಕಾರ. ಈ ಬದಲಾವಣೆಗೆ ತಕ್ಷಣಕ್ಕೆ ಏನನ್ನಿಸಿತು?.*

ಯದುವೀರ್: ಅರಮನೆಯಲ್ಲಿರುವವರು ಜನಸಾಮಾನ್ಯರಿಗೆ ಸಿಗುವುದಿಲ್ಲ ಎನ್ನುವುದು ಕೇವಲ ಕೆಲವರ ಆರೋಪವಷ್ಟೇ. ನಾವು ಯಾವಾಗಲೂ ಸುಲಭವಾಗಿ ಸಿಗುತ್ತಿದ್ದೆವು. ಅರಮನೆಯಲ್ಲೂ ನಮ್ಮ ಭೇಟಿಗೆ ಬಂದವರ ಭೇಟಿ ಮಾಡುವುದು ನಮ್ಮ ಆದ್ಯತೆಯಾಗಿತ್ತು. ಈಗ ಎಲ್ಲರನ್ನೂ ಭೇಟಿಯಾಗುವ ಅವಕಾಶ ಲಭ್ಯವಾಗಿದೆ. ಎಲ್ಲರಲ್ಲಿ ಒಬ್ಬನಾಗಿ ಅವರ ಪ್ರೀತಿ–ವಿಶ್ವಾಸ, ಆತ್ಮೀಯತೆ ಕಂಡು ತುಂಬಾ ಸಂತೋಷವಾಗುತ್ತಿದೆ.

ಮಿತ್ರ: *ಮೈಸೂರು ಇಷ್ಟೊಂದು ಸುಂದರ ಹಾಗೂ ಅಭಿವೃದ್ಧಿ ನಗರವಾಗಿರಲು ಮೈಸೂರು ಮಹಾರಾಜರ ದೂರದೃಷ್ಟಿತ್ವದ ಯೋಜನೆಗಳೇ ಕಾರಣ. ತಾವು ಸಂಸದರಾದರೆ ಭವಿಷ್ಯದ ಮೈಸೂರಿನ ನಿಮ್ಮ ಪರಿಕಲ್ಪನೆ ಹೇಗಿರುತ್ತೆ?*

ಯದುವೀರ್: ಪರಂಪರೆ ಉಳಿಸುವುದು ನಮ್ಮ ಕರ್ತವ್ಯವೇ ಆಗಿದೆ. ಮೈಸೂರು ಹಾಗೂ ಕೊಡಗಿನ ಮೂಲ ಪರಂಪರೆ, ಸಂಸ್ಕೃತಿ ಶಾಶ್ವತವಾಗಿ ಉಳಿಯಬೇಕು ಎನ್ನುವುದು ಜನರ ಆಕಾಂಕ್ಷೆ. ಆ ನಿಟ್ಟಿನಲ್ಲಿ ಕೆಲಸ ಮಾಡುವುದು ನಮ್ಮ ಕರ್ತವ್ಯ. ಸ್ಮಾರಕಗಳು ಹಾಗೂ ಅಮೂರ್ತ ಪರಂಪರೆ ಸಂರಕ್ಷಣೆ ಬಹಳ ಮುಖ್ಯ. ಇದು ಪ್ರಧಾನಮಂತ್ರಿಗಳ ದೃಷ್ಟಿಯಲ್ಲಿ ಕೂಡ ಬಹಳ ಸ್ಪಷ್ಟವಾಗಿದೆ. ಪ್ರಧಾನಿ ಅವರು ಪ್ರಸ್ತಾಪಿಸಿರುವ ಬಹುತೇಕ ವಿಚಾರ ನಮ್ಮ ಮನದಾಳದಲ್ಲಿನ ಸಂಗತಿಗಳೇ ಆಗಿವೆ. ಆ ನಿಟ್ಟಿನಲ್ಲಿ ನಮ್ಮ ಪ್ರಯತ್ನ ಇದ್ದೇ ಇರುತ್ತದೆ.

ಮಿತ್ರ: *ಅರಮನೆಗೂ ಚಾಮುಂಡಿಬೆಟ್ಟಕ್ಕೂ ಐತಿಹಾಸಿಕ ನಂಟಿದೆ. ಆದರೆ ಬೆಟ್ಟದ ಸುತ್ತ ಕಾಂಕ್ರೀಟ್ ಕಾಡು ನಿರ್ಮಾಣವಾಗುತ್ತಿದೆ. ಈ ಹಿಂದೆ ಇದಕ್ಕೆ ನಿರ್ಬಂಧವಿತ್ತಾದರೂ ಕಟ್ಟುನಿಟ್ಟಿನ ಅನುಸರಣೆ ಆಗಲಿಲ್ಲ. ಈ ಬಗ್ಗೆ ನಿಮ್ಮ ಅಭಿಪ್ರಾಯ ಹಾಗೂ ನಿಲುವೇನು?.*

ಯದುವೀರ್: ಚಾಮುಂಡಿಬೆಟ್ಟ ಪವಿತ್ರ ಧಾರ್ಮಿಕ ಕ್ಷೇತ್ರ. ಮೊದಲು ಇದನ್ನು ದೃಷ್ಟಿಯಲ್ಲಿಟ್ಟುಕೊಂಡು ಯಾವುದೇ ರೀತಿಯ ಅಭಿವೃದ್ಧಿಯಾಗಬೇಕು. ಧಾರ್ಮಿಕ ಕಾಳಜಿಯೊಂದಿಗೆ ಕೆಲಸಗಳಾಗಬೇಕಿರುವುದು ಬಹಳ ಮುಖ್ಯ. ಪರಿಸರ ಪೂರಕ ಅದರಲ್ಲೂ ಆರೋಗ್ಯದಾಯಕ ಸಾವಯವ(Organic) ಆದ್ದರಿಂದ ಅಭಿವೃದ್ಧಿ ಬಗ್ಗೆ ನಾನು ಸಾಕಷ್ಟು ಬಾರಿ ಹೇಳಿದ್ದೀನಿ. ಇದು ಪರಿಸರ, ಧರ್ಮ, ಪರಂಪರೆಗೆ ಸಂಬಂಧಿಸಿದ್ದು. ಮೊದಲಿಗೆ ಈ ಮೂರು ಅಂಶಗಳ ಮೇಲೆ ಕಾಳಜಿ ಇಟ್ಟುಕೊಂಡು ಕೆಲಸ ಮಾಡಬೇಕಾಗುತ್ತದೆ.

ಮಿತ್ರ: *ಮೈಸೂರು ಮೆಟ್ರೋ ಯೋಜನೆ ಸಂಬಂಧ ಹಾಲಿ ಸಂಸದ ಪ್ರತಾಪ್ ಸಿಂಹ ಅವರು ಈ ಹಿಂದೆಯೇ ಪ್ರಸ್ತಾಪ ಮಾಡಿದ್ದಾರೆ. ಭವಿಷ್ಯದ ದೃಷ್ಟಿಯಿಂದ ಮೆಟ್ರೋ ಯೋಜನೆ, ಪೆರಿಫೆರಲ್ ರಿಂಗ್ ರಸ್ತೆ ಯೋಜನೆ ಅನುಷ್ಠಾನದ ವಿಚಾರದಲ್ಲಿ ತಮ್ಮ ಪ್ರಯತ್ನ ಹೇಗಿರುತ್ತದೆ?.*

ಯದುವೀರ್: ಯಾವುದೇ ಯೋಜನೆಯಾದರೂ ಅದರ ಅವಶ್ಯಕತೆ ಇದೆಯೋ, ಇಲ್ಲವೋ ಎನ್ನುವುದನ್ನು ಪರಾಮರ್ಶಿಸಬೇಕು. ಸದ್ಯಕ್ಕೆ ಮೆಟ್ರೋ ಯೋಜನೆಯ ನೀಲನಕ್ಷೆ ಸಿದ್ಧಪಡಿಸಬೇಕು. ಅದಕ್ಕೆ ಸಾಕಷ್ಟು ಸಮಯಾವಕಾಶ ಬೇಕಾಗುತ್ತದೆ. ದೇವರ ಕೃಪೆ, ಜನರ ಆಶೀರ್ವಾದದಿಂದ ನಾವು ಆಯ್ಕೆಯಾದರೆ ಪ್ರಗತಿಯಲ್ಲಿರುವ ಹಾಗೂ ಆಗಬೇಕಿರುವ ಎಲ್ಲಾ ಯೋಜನೆಗಳನ್ನು ಅವಶ್ಯಕತೆಗೆ ಅನುಗುಣವಾಗಿ ಮುಂದುವರೆಸುತ್ತೇವೆ; ನಿಗದಿತ ಸಮಯಕ್ಕೆ ಪೂರ್ಣಗೊಳಿಸುತ್ತೇವೆ.

ಮಿತ್ರ: *ಮೈಸೂರಲ್ಲಿ ಹಲವು ವರ್ಷಗಳಿಂದ ದೊಡ್ಡ ಮಟ್ಟದ ಕೈಗಾರಿಕಾ ಘಟಕಗಳ ಸ್ಥಾಪನೆ ಆಗಿಲ್ಲ ಎಂಬ ಮಾತಿದೆ. ಈ ಬಗ್ಗೆ ನಿಮ್ಮ ಅಭಿಪ್ರಾಯವೇನು?.*

ಯದುವೀರ್: ಮೈಸೂರಲ್ಲಿ ಕೈಗಾರಿಕಾ ಘಟಕಗಳ ಸ್ಥಾಪನೆ ಮತ್ತಷ್ಟು ಆಗಬೇಕು. ಮೈಸೂರಲ್ಲಿ ಸ್ಥಿರವಾದ ಆರ್ಥಿಕ ಶಕ್ತಿ ಸೃಷ್ಟಿಯಾಗಬೇಕು. ಮಾಹಿತಿ ತಂತ್ರಜ್ಞಾನ, ಕೈಗಾರಿಕೆ ಅಭಿವೃದ್ಧಿಗೆ ಮತ್ತಷ್ಟು ಪ್ರೋತ್ಸಾಹ ಸಿಗಬೇಕು. ಮೈಸೂರು ನಗರ ಬೆಂಗಳೂರಿನ ಸಪೋರ್ಟಿಂಗ್ ಪಿಲ್ಲರ್ ಆಗಬೇಕು. ಜೊತೆಗೆ ಸಾವಯವ ಆಧಾರಿತ ಅಭಿವೃದ್ಧಿ ಬಹಳ ಮುಖ್ಯ. ನಮ್ಮ ಮೈಸೂರಿನ ವಾತಾವರಣ ಬದಲಾವಣೆ ಆಗಬಾರದು. ಇಲ್ಲಿನ ಪರಂಪರೆ, ಸಂಸ್ಕೃತಿಗೆ ಧಕ್ಕೆಯಾಗದ ರೀತಿ ಅಭಿವೃದ್ಧಿಯಾಗಬೇಕು. ನಿಮಗೆ ಗೊತ್ತಿರಲಿ; ದೇಶವಾಸಿಗಳು ಮಾತ್ರವಲ್ಲ ವಿದೇಶಿಗರು ಮೈಸೂರನ್ನು ಇಷ್ಟಪಡುತ್ತಾರೆ. ಕಾರಣ, ಇಲ್ಲಿನ ಪರಿಸರ.

ಮಿತ್ರ: *ಪಾರಂಪರಿಕ ಸ್ಮಾರಕಗಳು ದಿನೇ ದಿನೆ ಹಾಳಾಗುತ್ತಿವೆ. ಸಂರಕ್ಷಣೆ ನಿಟ್ಟಿನಲ್ಲಿ ಯಾವುದೇ ಗಂಭೀರ ಕ್ರಮ ಸಾಧ್ಯವಾಗಿಲ್ಲ. ಇವುಗಳ ಸಂರಕ್ಷಣೆಯ ತ್ವರಿತ ಕ್ರಮಕ್ಕೆ ನಿಮ್ಮದೇ ಆದ ಚಿಂತನೆ ಇದೆಯೇ?.*

ಯದುವೀರ್: ನಾವು ಹಲವು ವರ್ಷಗಳಿಂದ ದೇವರಾಜ ಮಾರುಕಟ್ಟೆ, ಲ್ಯಾನ್ಸ್‌ಡೌನ್ ಬಿಲ್ಡಿಂಗ್ ಸೇರಿದಂತೆ ಎಲ್ಲಾ ಪಾರಂಪರಿಕ ಕಟ್ಟಡಗಳನ್ನು ಉಳಿಸುವಂತಹ ನಿಟ್ಟಿನಲ್ಲಿ ಪ್ರಯತ್ನ ಮಾಡುತ್ತಿದ್ದೇವೆ. ಈ ಸಂಬಂಧ ಪ್ರತಿಭಟನೆ, ಹೋರಾಟದಲ್ಲಿ ಪಾಲ್ಗೊಂಡಿದ್ದೇವೆ. ಈ ವಿಚಾರವಾಗಿ ತಜ್ಞರೊಂದಿಗೆ ಸಮಾಲೋಚನೆ ನಡೆಸಿ, ವಾಸ್ತವ ಸಮಸ್ಯೆಗಳ ಬಗ್ಗೆಯೂ ತಿಳಿದುಕೊಂಡಿದ್ದೇವೆ. ಪಾರಂಪರಿಕ ಸ್ಮಾರಕಗಳ ಸಂರಕ್ಷಣೆಯ ಗಂಭೀರ ಪ್ರಯತ್ನ ಮುಂದುವರೆಯುತ್ತದೆ. ಅವುಗಳ ಪಾವಿತ್ರ್ಯತೆ ಬಗ್ಗೆ ಜನರಲ್ಲಿ ಅರಿವು ಮೂಡಿಸಬೇಕಿದೆ.

ಸಂದರ್ಶನ: ಎಸ್.ಬಿ.ದೇವರಾಜ

> ಚಾಮುಂಡಿಬೆಟ್ಟ ಪವಿತ್ರ ಧಾರ್ಮಿಕ ಕ್ಷೇತ್ರ. ಮೊದಲು ಇದನ್ನು ದೃಷ್ಟಿಯಲ್ಲಿಟ್ಟುಕೊಂಡು ಯಾವುದೇ ರೀತಿಯ ಅಭಿವೃದ್ಧಿಯಾಗಬೇಕು. ಧಾರ್ಮಿಕ ಕಾಳಜಿಯೊಂದಿಗೆ ಕೆಲಸಗಳಾಗಬೇಕಿರುವುದು ಬಹಳ ಮುಖ್ಯ. ಪರಿಸರ ಪೂರಕ ಅದರಲ್ಲೂ ಆರೋಗ್ಯದಾಯಕ ಸಾವಯವ(Organic) ಆದ್ದರಿಂದ ಅಭಿವೃದ್ಧಿ ಬಗ್ಗೆ ನಾನು ಸಾಕಷ್ಟು ಬಾರಿ ಹೇಳಿದ್ದೀನಿ. ಇದು ಪರಿಸರ, ಧರ್ಮ, ಪರಂಪರೆಗೆ ಸಂಬಂಧಿಸಿದ್ದು. ಮೊದಲಿಗೆ ಈ ಮೂರು ಅಂಶಗಳ ಮೇಲೆ ಕಾಳಜಿ ಇಟ್ಟುಕೊಂಡು ಕೆಲಸ ಮಾಡಬೇಕಾಗುತ್ತದೆ.

ಮಿತ್ರ: *ಶೈಕ್ಷಣಿಕ ಕ್ಷೇತ್ರದಲ್ಲಿ ಈಗಾಗಲೇ ನೀವು ಸಕ್ರಿಯರಾಗಿದ್ದೀರಿ. ಮೈಸೂರಿನಲ್ಲಿ ಐಐಟಿ, ಐಎಎಂ, ತಂತ್ರಜ್ಞಾನ, ವೈದ್ಯಕೀಯ ಉನ್ನತ ಸಂಸ್ಥೆ ಸ್ಥಾಪನೆ ಅವಶ್ಯಕತೆ ಬಗ್ಗೆ ನಿಮ್ಮ ಅಭಿಪ್ರಾಯವೇನು?.*

ಯದುವೀರ್: ನಾನು ಆಗಲೇ ಹೇಳಿದಂತೆ ಅವಶ್ಯಕತೆ ಇದೆಯೋ, ಇಲ್ಲವೋ ಎಂದು ಪರಾಮರ್ಶೆ ಮಾಡಿ ಮುಂದುವರೆಯಬೇಕಾಗುತ್ತದೆ. ದಾಖಲೆ ದೃಷ್ಟಿಯಲ್ಲಿ ಅಭಿವೃದ್ಧಿ ಮಾಡುವುದಕ್ಕಿಂತ ಅದರಲ್ಲಿ ಅವಶ್ಯಕತೆ ಪ್ರಮುಖ ಅಂಶವಾಗಿರಬೇಕು. ನಮ್ಮ ಈ ಭಾಗದ ಜನರ ಹಿತಾಸಕ್ತಿ ಕಾಪಾಡಲು ಅಗತ್ಯವಿರುವುದನ್ನೆಲ್ಲಾ ಮಾಡಬೇಕಾಗುತ್ತದೆ.

ಮಿತ್ರ: *ಯುವ ಶಕ್ತಿಯನ್ನು ದೇಶದ ಆಸ್ತಿಯನ್ನಾಗಿಸುವ ನಿಟ್ಟಿನಲ್ಲಿ ನಿಮ್ಮ ಕಾರ್ಯಯೋಜನೆ ಹೇಗಿರಬಹುದು?.*

ಯದುವೀರ್: ನಾವು ಕೇವಲ ಉದ್ಯೋಗದ ಆಕಾಂಕ್ಷಿಗಳಾಗಬಾರದು, ಉದ್ಯೋಗದ ಸೃಷ್ಟಿಕರ್ತರಾಗಬೇಕು ಎನ್ನುವುದು ನಮ್ಮ ಆಶಯ. ಈ ನಿಟ್ಟಿನಲ್ಲಿ ಪ್ರತಿಭೆಯನ್ನು ಪ್ರೋತ್ಸಾಹಿಸುವುದರ ಜೊತೆಗೆ ಪ್ರತಿಭಾನ್ವಿತರನ್ನು ಇಲ್ಲಿಯೇ ಹಿಡಿದಿಟ್ಟುಕೊಳ್ಳುವ ಕೆಲಸ ಪರಿಣಾಮಕಾರಿಯಾಗಿ ಆಗಬೇಕು. ಬೆಂಗಳೂರು, ಚೆನ್ನೈನಂತಹ ಮೆಟ್ರೋ ಸಿಟಿಗಳು, ಇತ್ತ ಮಂಗಳೂರು ಸೇರಿದಂತೆ ಇನ್ನಿತರ ವಾಣಿಜ್ಯ ನಗರಗಳ ಕಡೆಗೆ ಯುವ ಪ್ರತಿಭಾನ್ವಿತರು ಹೋಗುತ್ತಿದ್ದಾರೆ. ಅಂತಹವರನ್ನು ಮೈಸೂರಿನಲ್ಲೇ ಉಳಿಸಿಕೊಳ್ಳುವ ದೃಷ್ಟಿಯಲ್ಲಿ ಕೈಗಾರಿಕೆ, ಐಟಿ ಅಭಿವೃದ್ಧಿ ಇನ್ನಿತರ ಪ್ರಯತ್ನಗಳು ಆಗಬೇಕು.

ಮಿತ್ರ: *ನಿಮ್ಮ ಮೇಲೆ ಪ್ರಭಾವ ಬೀರಿದ ರಾಜಕಾರಣಿ ಯಾರು? ಅವರ ಯಾವ ಗುಣವನ್ನು ರೂಢಿಸಿಕೊಳ್ಳಲು ನೀವು ಇಷ್ಟಪಡುತ್ತೀರಾ?.*

ಯದುವೀರ್: ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ನಾಯಕತ್ವ, ಅವಿಶ್ರಾಂತ ಕಾರ್ಯನಿರ್ವಹಣೆ ಅನುಕರಣೀಯ. ಹಾಗೆಯೇ ಮಾಜಿ ಮುಖ್ಯಮಂತ್ರಿ ಎಸ್.ಎಂ.ಕೃಷ್ಣ ಅವರು ಯಾವುದೇ ರೀತಿಯ ಟೀಕೆಗಳು ಬಂದರೂ ಅವುಗಳಿಗೆ ಪ್ರತಿಕ್ರಿಯೆ ನೀಡದೆ ಅತ್ಯಂತ ಸಹನೆಯಿಂದ ಕೆಲಸ ಮಾಡಿದ್ದನ್ನು ತಿಳಿದಿದ್ದೇನೆ. ಅಲ್ಲದೆ ಯಾವುದೇ ರೀತಿಯ ದ್ವೇಷ–ಅಸೂಯೆ ಭಾವನೆ ಇಲ್ಲದೆ ಜನಸೇವೆಯಲ್ಲಿ ತೊಡಗಿಸಿಕೊಂಡಿದ್ದಾರೆ. ಹೀಗೆ ಹಲವು ನಾಯಕರ ಕಾರ್ಯವೈಖರಿ, ಗುಣಗಳನ್ನು ರೂಢಿಸಿಕೊಳ್ಳುವುದರಿಂದ ನಮಗೂ ಸ್ಫೂರ್ತಿ ಬರುತ್ತದೆ.

ಮಿತ್ರ: *ಅರಮನೆ ಹಾಗೂ ಸರ್ಕಾರದ ನಡುವಿನ ವ್ಯಾಜ್ಯಗಳು ಕಾನೂನಾತ್ಮಕ ವಿಚಾರಗಳಾಗಿವೆ ಎಂದು ಈಗಾಗಲೇ ಸ್ಪಷ್ಟಪಡಿಸಿದ್ದೀರಿ. ಇದರ ಹೊರತಾಗಿ ಅರಮನೆ ಹಾಗೂ ಜನರ ನಡುವಿನ ಬಾಂಧವ್ಯದ ಮೇಲೆ ಈ ಚುನಾವಣೆ ಯಾವ ರೀತಿ ಪ್ರಭಾವ ಬೀರಬಹುದು?.*

ಯದುವೀರ್: ಜನ ಮತ್ತು ಅರಮನೆ ನಡುವಿನ ಬಾಂಧವ್ಯ ಶಾಶ್ವತವಾದುದು. ಅದು ಎಂದೆಂದಿಗೂ ಮುಂದುವರೆಯುತ್ತದೆ. ಜನಮಾನಸದಲ್ಲಿ ಮೈಸೂರು ರಾಜಮನೆತನ ಬೆರೆತು ಹೋಗಿದೆ. ಮೇಲಾಗಿ ನಮ್ಮ ಸಂಪ್ರದಾಯ, ಪರಂಪರೆಯನ್ನು ಯಾರೂ ಬದಲಾಯಿಸಲು ಸಾಧ್ಯವಿಲ್ಲ. ಸಂಸದನಾದರೆ ಇದೇ ಚೌಕಟ್ಟಿನಲ್ಲಿ ಜನರ ಕೆಲಸ ಮಾಡುತ್ತೇನೆ. ಇದರಿಂದ ಯಾವುದೇ ವ್ಯತ್ಯಯವಾಗುವುದಿಲ್ಲ. ಇನ್ನು ವ್ಯಾಜ್ಯಗಳಿಗೆ ಸಂಬಂಧಪಟ್ಟಂತೆ ನ್ಯಾಯಾಲಯ ಏನು ತೀರ್ಮಾನ ಮಾಡುವುದೋ ಅದು ಜಾರಿಯಾಗುತ್ತದೆ ಅಷ್ಟೇ.

ಮಿತ್ರ: *ಶತಮಾನಗಳ ಪರಂಪರೆಯುಳ್ಳ ರಾಜಮನೆತನದ ವಿಚಾರವಾಗಿ ಜನರಿಗೆ ಭಾವನಾತ್ಮಕ ಸಂಬಂಧ ಇದ್ದೇ ಇದೆ. ಇದಕ್ಕೆ ಮಿಗಿಲಾಗಿ ಯದುವೀರ್ ಅವರನ್ನು ಜನ ಏಕೆ ಬೆಂಬಲಿಸಬೇಕು?.*

ಯದುವೀರ್: ರಾಜಮನೆತನ ಹಾಗೂ ಜನರ ನಡುವಿನ ಗಟ್ಟಿಯಾದ ಬಾಂಧವ್ಯ ಒಳ್ಳೆಯದು. ಅದರಿಂದ ಮತ್ತಷ್ಟು ಒಳ್ಳೆಯ ಕಾರ್ಯಗಳಾಗಬೇಕು ಎನ್ನುವುದು ನಮ್ಮ ಆಶಯ. ಸಮಾಜಕ್ಕೆ ಉಪಯೋಗವಾಗುತ್ತದೆ ಎನ್ನುವಾಗ ಈ ರೀತಿಯ ಅವಕಾಶವನ್ನು ಸ್ವೀಕರಿಸಲೇಬೇಕು. ಈ ಕಾರಣದಿಂದಲೇ ನಾನು ಜನರ ಬೆಂಬಲ ಕೋರುತ್ತಿದ್ದೇನೆ.

ಮಿತ್ರ: *ಪ್ರಧಾನಿ ಮೋದಿ ಅವರ ಆಡಳಿತದ ಜೊತೆಗೆ ಹಾಲಿ ಸಂಸದ ಪ್ರತಾಪ್ ಸಿಂಹ ಅವರ ಹತ್ತು ವರ್ಷದ ಕಾರ್ಯಗಳು ಈ ಚುನಾವಣೆಗೆ ಸಹಕಾರಿಯಾಗಬಹುದೇ?.*

ಯದುವೀರ್: ಪ್ರಧಾನಮಂತ್ರಿ ಮೋದಿಯವರು ವಿಕಸಿತ ಭಾರತಕ್ಕಾಗಿ ಅವಿರತವಾಗಿ ಶ್ರಮಿಸುತ್ತಿದ್ದಾರೆ. ಈ ನಿಟ್ಟಿನಲ್ಲಿ ಮೈಸೂರಿನ ಹಾಲಿ ಸಂಸದರ ಸಹಕಾರ ಕೂಡ ಇದೆ. ಜೊತೆಗೆ ಎಷ್ಟೋ ನಾಯಕರು ಕೆಲಸ ಮಾಡಿದ್ದಾರೆ. ಬಿಜೆಪಿ ಹಾಗೂ ಜೆಡಿಎಸ್ ಪಕ್ಷದ ಶಾಸಕರು, ಮಾಜಿ ಶಾಸಕರ ಕೊಡುಗೆಯೂ ಇದೆ. ಮಹಾರಾಜರ ಕಾಲದಿಂದಲೂ ಸ್ವಾತಂತ್ರ್ಯ ನಂತರವೂ ಹಲವು ನಾಯಕರು ಮೈಸೂರಿನ ಅಭಿವೃದ್ಧಿಗಾಗಿ ಶ್ರಮಿಸಿದ್ದಾರೆ. ಎಲ್ಲರ ಕೊಡುಗೆ ಶಾಶ್ವತವಾಗಿರುತ್ತದೆ ಹಾಗೂ ಅದು ಈ ಚುನಾವಣೆಗೂ ಸಹಕಾರಿಯಾಗುತ್ತದೆ.

ಮಿತ್ರ: *ಹಾಗಾದರೆ ಮೈಸೂರು–ಕೊಡಗು ಕ್ಷೇತ್ರದಲ್ಲಿ ಬಿಜೆಪಿ ಹ್ಯಾಟ್ರಿಕ್ ಗೆಲುವಿನ ವಿಶ್ವಾಸವಿದೆಯೇ?.*

ಯದುವೀರ್: ಫಲಿತಾಂಶ ನಮ್ಮ ಪರವಾಗಿ ಬರಲಿದೆ ಎಂಬ ವಿಶ್ವಾಸವಿದೆ. ಪರಿಮಾಣಾತ್ಮಕವಾಗಿ ತಿಳಿಯಬೇಕಾದರೆ ನೀವೇ ಸಮೀಕ್ಷೆ ನಡೆಸಬೇಕಾಗುತ್ತದೆ.



> ಈ ರೀತಿಯ ಘಟನೆಗಳು ನಡೆದಾಗ ಸಾತ್ವಿಕ ಸಿಟ್ಟು, ಆಕ್ರೋಶ ಇದ್ದೇ ಇರುತ್ತದೆ. ಜನರ ಪ್ರತಿಭಟನೆ, ಹೋರಾಟಗಳೂ ನ್ಯಾಯಯುತವಾಗಿವೆ. ಶಾಂತಿಯುತವಾಗಿ ನಾವು ನ್ಯಾಯಕ್ಕಾಗಿ ಆಗ್ರಹಿಸುತ್ತೇವೆ. ನಮ್ಮ ದೇಶದ ಕಾನೂನು ಮತ್ತು ನ್ಯಾಯಾಂಗ ವ್ಯವಸ್ಥೆ ಮೇಲೆ ನಮಗೆ ಸಂಪೂರ್ಣ ವಿಶ್ವಾಸವಿದೆ. ಹೌದು, ಚುನಾವಣೆ ಸಂದರ್ಭದಲ್ಲಿ ಈ ರೀತಿಯ ಘಟನೆಗಳು ರಾಜಕೀಯ ತಿರುವು ಪಡೆಯುವುದು ಸಹಜ. ಆದರೆ ಆದಷ್ಟು ಬೇಗ ಸಂತ್ರಸ್ತರಿಗೆ ನ್ಯಾಯ ಸಿಗಬೇಕು ಎನ್ನುವುದಷ್ಟೇ ನಮ್ಮ ಆಗ್ರಹ.

ಮಿತ್ರ: *ಕಾಂಗ್ರೆಸ್ ಅಭ್ಯರ್ಥಿಯಿಂದ ಯಾವ ರೀತಿ ಪೈಪೋಟಿ ಎದುರಾಗಬಹುದು ಎಂಬ ಲೆಕ್ಕಾಚಾರ ಏನಾದರೂ ಇದೆಯೇ?.*

ಯದುವೀರ್: ಪ್ರತಿಸ್ಪರ್ಧಿ ಆದವರು ಅವರದೇ ಆದ ತಂತ್ರಗಾರಿಕೆಯಲ್ಲಿ ತೊಡಗುವುದು ಸಹಜ. ಆದರೆ ನಮಗೆ ನಮ್ಮ ಕೆಲಸದ ಮೇಲೆ ಮಾತ್ರ ಗಮನವಿದೆ. ಅದೇ ರೀತಿ ನಾವು ಮುಂದುವರೆಯುತ್ತೇವೆ. ಜನರ ಬೆಂಬಲ, ಆಶೀರ್ವಾದ ಕೋರುತ್ತೇವೆ.

ಮಿತ್ರ: *ಯಾವುದೇ ವಿಚಾರವಾದರೂ ನೀವು ತಾಳ್ಮೆ, ಸಹನೆಯಿಂದ ಪ್ರತಿಕ್ರಿಯಿಸುತ್ತಿದ್ದೀರಿ. ಇದರ ಹಿಂದಿನ ಗುಟ್ಟೇನು?.*

ಯದುವೀರ್: ಇದರಲ್ಲಿ ಗುಟ್ಟೇನು ಇಲ್ಲ. ಇವು ನಮ್ಮ ಹಿರಿಯರು, ಮೈಸೂರಿಗರು, ಕನ್ನಡಿಗರಿಂದ ಬಂದಿರುವ ಬಳುವಳಿ. ಅದನ್ನು ನಾನು ಮಾತ್ರವಲ್ಲ, ಎಲ್ಲರೂ ಮೈಗೂಡಿಸಿಕೊಳ್ಳಬೇಕಿದೆ.

ಮಿತ್ರ: *ಬಿಜೆಪಿ ಚಿಹ್ನೆಯಡಿ ಸ್ಪರ್ಧಿಸಿರುವ ಬಿಜೆಪಿ–ಜೆಡಿಎಸ್ ಮೈತ್ರಿ ಅಭ್ಯರ್ಥಿಯಾದ ನಿಮಗೆ ಜೆಡಿಎಸ್ ನಾಯಕರು, ಮುಖಂಡರು, ಕಾರ್ಯಕರ್ತರ ಬೆಂಬಲ ತೃಪ್ತಿಕರ ಎನಿಸಿದೆಯೇ?.*

ಯದುವೀರ್: ಬಿಜೆಪಿ ಹಾಗೂ ಜೆಡಿಎಸ್ ನಡುವೆ ಸಂಪೂರ್ಣವಾದ ಹೊಂದಾಣಿಕೆ ಇದೆ. ಬಿಜೆಪಿಯವರಂತೆ ಜೆಡಿಎಸ್ ನಾಯಕರು, ಮುಖಂಡರು, ಕಾರ್ಯಕರ್ತರು ಎಲ್ಲರೂ ಸಂಪೂರ್ಣ ಸೌಹಾರ್ದ ರೀತಿ, ಸಹಕಾರದಿಂದ ಸಮನ್ವಯತೆಯೊಂದಿಗೆ ಅತ್ಯುತ್ತಮವಾಗಿ ಕೆಲಸ ಮಾಡುತ್ತಿದ್ದಾರೆ. ಈ ವಿಚಾರದಲ್ಲಿ ನನಗೆ ಸಂಪೂರ್ಣ ತೃಪ್ತಿ ಇದೆ.

ಮಿತ್ರ: *ಮೈಸೂರಿನ ಪರಿಸರ, ಇಲ್ಲಿನ ಕೆರೆಗಳ ಸಂರಕ್ಷಣೆ ಹಾಗೂ ಸೌಂದರ್ಯೀಕರಣದ ಬಗ್ಗೆ ನಿಮ್ಮ ಚಿಂತನೆ ಏನು?.*

ಯದುವೀರ್: ನಮ್ಮ ವೈಯಕ್ತಿಕ ಜೀವನದಲ್ಲೇ ಈ ನಿಟ್ಟಿನಲ್ಲಿ ಏನೆಲ್ಲಾ ಕೆಲಸ ಮಾಡಿದ್ದೀವಿ ಎಂದು ಎಲ್ಲರೂ ಗಮನಿಸಿದ್ದಾರೆ. ಪ್ರಕೃತಿ ಹಾಗೂ ಪರಂಪರೆ ಕಾಳಜಿ ಇಟ್ಟುಕೊಂಡೇ ನಾವು ಎಲ್ಲಾ ಕೆಲಸ ಮಾಡುತ್ತಿದ್ದೇವೆ. ದೊಡ್ಡ ಮಟ್ಟದಲ್ಲಿ ಅವಕಾಶ ಸಿಕ್ಕರೆ ಮತ್ತಷ್ಟು ಪರಿಣಾಮಕಾರಿಯಾಗಿ ಪ್ರಯತ್ನ ಮುಂದುವರೆಸುತ್ತೇವೆ.

ಮಿತ್ರ: *ರಾಜ್ಯದಲ್ಲಿ ಕಾಂಗ್ರೆಸ್ ಗ್ಯಾರಂಟಿಗಳಿಗೆ ಪರ್ಯಾಯವಾದ ನಿಮ್ಮ 'ಸಂಕಲ್ಪ ಪತ್ರ' ಹೇಗೆ ಪರಿಣಾಮಕಾರಿಯಾಗಬಲ್ಲದು?*

ಯದುವೀರ್: ದೇಶದ ವಿಚಾರದಲ್ಲಿ ಜನರು ಬಹಳ ಜಾಗೃತರಾಗಿದ್ದಾರೆ. ದೇಶದ ರಕ್ಷಣೆ, ಪರಂಪರೆ, ಸಂಸ್ಕೃತಿ ರಕ್ಷಣೆ ಬಗ್ಗೆ ಗಂಭೀರವಾಗಿ ಚಿಂತನೆ ಮಾಡುತ್ತಾರೆ. ಎಲ್ಲರೂ ಭಾರತೀಯರಾಗಿ ಭಾರತಕ್ಕೋಸ್ಕರ ತಮ್ಮ ಅಮೂಲ್ಯವಾದ ಮತವನ್ನು ನೀಡುತ್ತಾರೆ ಎಂಬ ವಿಶ್ವಾಸ ಗಟ್ಟಿಯಾಗಿದೆ.

ಮಿತ್ರ: *ನಿಮ್ಮ ಪ್ರಕಾರ ರಾಜ್ಯದಲ್ಲಿ ಎನ್‌ಡಿಎ ಎಷ್ಟು ಸ್ಥಾನ ಗೆಲ್ಲಬಹುದು?.*

ಯದುವೀರ್: ರಾಜ್ಯದ 28 ಕ್ಷೇತ್ರಗಳಲ್ಲೂ ನಾವು ಗೆಲ್ಲುವ ವಿಶ್ವಾಸ ಇದೆ.

ಮಿತ್ರ: *ಇತ್ತೀಚಿನ ಕೆಲವು ಅಹಿತಕರ ಘಟನೆಗಳು ರಾಜಕೀಯ ತಿರುವು ಪಡೆಯುತ್ತಿವೆ. ಈ ಬಗ್ಗೆ ನಿಮ್ಮ ಅಭಿಪ್ರಾಯವೇನು?.*

ಯದುವೀರ್: ಈ ರೀತಿಯ ಘಟನೆಗಳು ನಡೆದಾಗ ಸಾತ್ವಿಕ ಸಿಟ್ಟು, ಆಕ್ರೋಶ ಇದ್ದೇ ಇರುತ್ತದೆ. ಜನರ ಪ್ರತಿಭಟನೆ, ಹೋರಾಟಗಳೂ ನ್ಯಾಯಯುತವಾಗಿವೆ. ಶಾಂತಿಯುತವಾಗಿ ನಾವು ನ್ಯಾಯಕ್ಕಾಗಿ ಆಗ್ರಹಿಸುತ್ತೇವೆ. ನಮ್ಮ ದೇಶದ ಕಾನೂನು ಮತ್ತು ನ್ಯಾಯಾಂಗ ವ್ಯವಸ್ಥೆ ಮೇಲೆ ನಮಗೆ ಸಂಪೂರ್ಣ ವಿಶ್ವಾಸವಿದೆ. ಹೌದು, ಚುನಾವಣೆ ಸಂದರ್ಭದಲ್ಲಿ ಈ ರೀತಿಯ ಘಟನೆಗಳು ರಾಜಕೀಯ ತಿರುವು ಪಡೆಯುವುದು ಸಹಜ. ಆದರೆ ಆದಷ್ಟು ಬೇಗ ಸಂತ್ರಸ್ತರಿಗೆ ನ್ಯಾಯ ಸಿಗಬೇಕು ಎನ್ನುವುದಷ್ಟೇ ನಮ್ಮ ಆಗ್ರಹ.

ಮಿತ್ರ: *ನಿಮ್ಮ ಪ್ರಕಾರ ಜನಪ್ರತಿನಿಧಿ ಹೇಗಿರಬೇಕು?.*


ಯದುವೀರ್: ಜನಪ್ರತಿನಿಧಿಗೆ ಪ್ರಮುಖವಾಗಿ ಬಹಳ ತಾಳ್ಮೆ–ಸಹನೆ ಇರಬೇಕು. ಅವರು ಪ್ರಾಮಾಣಿಕವಾಗಿ ಜನರ ಆಶೋತ್ತರ, ಆಕಾಂಕ್ಷೆಗಳನ್ನು ಮೀರಿ ಕೆಲಸ ಮಾಡಬೇಕು.

ಮೈಸೂರು ಮಿತ್ರ

ಮಂಗಳವಾರ 23 ಏಪ್ರಿಲ್ 2024

Promotional feature

139 ವರ್ಷಗಳ ಐತಿಹಾಸಿಕ ಹಿನ್ನೆಲೆಯ ಕಾಂಗ್ರೆಸ್



ಭಾರತ ಸ್ವಾತಂತ್ರ್ಯ ಹೋರಾಟದ ಮುಂಚೂಣಿಯಲ್ಲಿ ನಿಂತ ಏಕೈಕ ಸಂಘಟನೆ ಕಾಂಗ್ರೆಸ್, ತ್ಯಾಗ ಬಲಿದಾನಗಳ ಪರಂಪರೆಯೇ ಇಲ್ಲಿದೆ. 139 ವರ್ಷಗಳಷ್ಟು ದೀರ್ಘಕಾಲ ಅಸ್ತಿತ್ವ ಉಳಿಸಿ ಕೊಂಡು ಪ್ರಗತಿಪಥದಲ್ಲಿ ಮುನ್ನಡೆ ದಿರುವ ಏಕೈಕ ಪಕ್ಷ, ಕಾಂಗ್ರೆಸ್ ಪಕ್ಷ, ಸರ್ವಶ್ರೇಷ್ಠ ಸಂವಿಧಾನ ವನ್ನು ರಾಷ್ಟ್ರಕ್ಕೆ ಸಮರ್ಪಿಸಿದ್ದು ಕಾಂಗ್ರೆಸ್.

ರಾಷ್ಟ್ರಪಿತ ಮಹಾತ್ಮಾ ಗಾಂಧೀಜಿ: ಗಾಂಧಿ ಅಹಿಂಸೆ ಮತ್ತು ಶಾಂತಿ ಎಂಬ ಸಾಮಾಜಿಕ ಅಸ್ತ್ರದಿಂದ ಭಾರತಕ್ಕೆ ಸ್ವಾತಂತ್ರ್ಯ ತಂದುಕೊಡುವಲ್ಲಿ ಮುಂಚೂಣಿಯಲ್ಲಿ ನಿಂತು ಹೋರಾಡಿದ ರಾಷ್ಟ್ರಪಿತ ಮಹಾತ್ಮ ಗಾಂಧೀಜಿ

ಸಂವಿಧಾನ ಪಿತಾಮಹ ಭಾರತರತ್ನ **ಡಾ.ಬಿ.ಆರ್.ಅಂಬೇಡ್ಕರ್**





Dr. Anandkumar
Secretary KPCC
Former Chairman KCDC
Mob: 9591999699

ಸರಳ ವಿರಳ ಪ್ರಧಾನಿ



1964 ರಲ್ಲಿ ನೆಹರು ನಿಧನದ ನಂತರ ಪ್ರಧಾನಿಯಾದ ಲಾಲ್ ಬಹಾದ್ದೂರ್‌ಶಾಸ್ತ್ರಿ ರಾಷ್ಟ್ರಭಕ್ತ, ದೇಶನಿಷ್ಠ, ಸರಳ ನಿಸ್ವಾರ್ಥರೆನಿಸಿದ್ದು ಭಾರತದ ಹೆಮ್ಮೆ.



ಮರೆಯಲಾಗದ ಮಹಾತಾಯಿ




- 1966ರಲ್ಲಿ ಶಾಸ್ತ್ರಿಯವರ ನಿಧನದ ನಂತರ ಪ್ರಧಾನಿಯಾದ ಇಂದಿರಾಜಿ ಭಾರತದ ಪ್ರಥಮ ಮಹಿಳಾ ಪ್ರಧಾನಿ, ಇಂದಿರಾ ಪಾಕಿಸ್ತಾನವನ್ನು ಇಬ್ಭಾಗ ಮಾಡಿದ್ದರು. ಪಾಕಿ ಸ್ತಾನದ ಒಂದು ಲಕ್ಷ ಸೈನಿಕರು, ಕಮಾಂಡರ್‌ಗಳು ಭಾರತಕ್ಕೆ ಶರಣಾಗಿದ್ದರು.
- ಇಂದಿರಾಜಿ ಬ್ಯಾಂಕ್‌ಗಳ ರಾಷ್ಟ್ರೀಕರಣ ಮಾಡಿದರು, ಸಿಕ್ಕಿಂ ಅನ್ನು ಭಾರತದೊಂದಿಗೆ ವಿಲೀನಗೊಳಿಸಿದ್ದರು.
- 20 ಅಂಶಗಳು ಕಾರ್ಯಕ್ರಮ, ಖಾಸಗಿ ಲೇವಾದೇವಿಗೆ ಕಡಿವಾಣ, ರಾಜಕುಟುಂಬಗಳಿಗೆ ಕಾಣಿಕೆ ರದ್ದು ದಿಟ್ಟ ನಿರ್ಧಾರಗಳು.
- 1972 ಗರೀಬಿ ಹಟಾವೋ ಘೋಷಣೆ ಬಡತನದ ವಿರುದ್ಧ ಕ್ರಾಂತಿ
- ಭಾರತೀಯರನ್ನು ರೋಮಾಂಚನಗೊಳಿಸಿದ ಬಾಂಗ್ಲಾಯುದ್ಧ ಜಮೀನ್ದಾರಿ ಪದ್ಧತಿ ನಿರ್ಮೂಲನೆ.
- ಬಾಂಬೆಯ ಇಂಪೀರಿಯಲ್ ಬ್ಯಾಂಕ್ ರಿಸರ್ವ್ ಬ್ಯಾಂಕ್ ಆಗಿ ಪರಿವರ್ತನೆ. ವಿಶೇಷ ಹಣಕಾಸು ಯೋಜನೆ
- 1973 ರಾಷ್ಟ್ರ ಕೈಗಾರಿಕಾ ವಲಯದ ಅಶಾಂತಿ ಹತ್ತಿಕ್ಕಲು ತುರ್ತು ಪರಿಸ್ಥಿತಿ ಘೋಷಣೆ. ಶಿಸ್ತು ಸಂಸ್ಥಾಪನೆ
- 1980 ಇಂದಿರಾರಿಂದ ಕಾಂಗ್ರೆಸ್ ಪುನರುತ್ಥಾನ
- ವಿಜ್ಞಾನ ತಂತ್ರಜ್ಞಾನ ಪ್ರಗತಿಯತ್ತ ದಾಪುಗಾಲು
- ದಕ್ಷಿಣ ಏಷ್ಯಾದ ಹಿಂದುಳಿದ ರಾಷ್ಟ್ರಗಳ ಅಭಿವೃದ್ಧಿಗಾಗಿ ಸಾರ್ಕ್ ಒಕ್ಕೂಟ ಸ್ಥಾಪನೆ
- ಇಂದಿರಾ ಅವಾಜ್ ಪ್ರಧಾನಿ ರೋಜ್ ಗಾರ್ ಯೋಜನೆಗಳು
- ಸಾಲಮೇಳ – ಕಡುಬಡವರಿಗೆ ಸಹಾಯ
- ಜೀತ ವಿಮೋಚನೆ
- ಭೂ ಸುಧಾರಣೆ ಕಾಯ್ದೆ
- ದೇಶ ವಿಭಜಕ ಶಕ್ತಿಗಳಿಂದ ಧಾರ್ಮಿಕ–ಮತೀಯ ಭಾವನೆ ಪ್ರಚೋದನೆಗಳ ಹತ್ತಿಕ್ಕುವಿಕೆ.
- 1984 ಅಕ್ಟೋಬರ್ 31. ಬ್ರಿಟೀಷ್ ನಟ ಉಸ್ತಿನ್ ಓನ್ ಇಂದಿರಾ ಗಾಂಧಿಯವರನ್ನು ಸಂದರ್ಶಿಸಲು ಬಂದಿದ್ದ. ಇಂದಿರಾ ಬಗ್ಗೆ ಸಾಕ್ಷ್ಯಚಿತ್ರ ನಿರ್ಮಿಸುವುದು ಆತನ ಉದ್ದೇಶವಾಗಿತ್ತು.



ಆತನೊಂದಿಗೆ ಸಂದರ್ಶನ ಮುಗಿಸಿ ಇಂದಿರಾಗಾಂಧಿ ಸಪ್ತರ್‌ಜಂಗ್ ರಸ್ತೆಯ ತಮ್ಮ ನಿವಾಸದ ಗಾರ್ಡನ್ ಮೂಲಕ ಮನೆಯೊಳಕ್ಕೆ ನಡೆದು ಹೋಗುತ್ತಿದ್ದರು. ಗೇಟಿನ ಕಾವಲಿಗೆ ನಿಂತಿದ್ದ ಸತ್ವಂತ್‌ಸಿಂಗ್, ಬಿಯಾಂತ್‌ಸಿಂಗ್ ಇಬ್ಬರೂ ಇಂದಿರಾ ಮೇಲೆ ಗುಂಡಿನ ಮಳೆಗರೆದರು. ಇಂದಿರಾ ಅಲ್ಲೇ ಕುಸಿದುಬಿದ್ದರು.

ಭಾರತರತ್ನ ರಾಜೀವ್ ಗಾಂಧಿ



ಪ್ರಧಾನಿ ಜವಾಹರ್ ಲಾಲ್ ನೆಹರೂ ರವರ ಮೊಮ್ಮಗ ಪ್ರಧಾನಿ ಇಂದಿರಾಗಾಂಧಿಯವರ ಮಗ ಭಾರತ ರತ್ನ ರಾಜೀವ್‌ಗಾಂಧಿ ದೇಶದ ಪ್ರಧಾನಿಯಾಗಿ ಅದರ್ಶ ಮೆರೆದವರು.

ತಮ್ಮ ಅಧಿಕಾರಾವಧಿಯಲ್ಲಿ ಕೇವಲ ವಿಜ್ಞಾನ ತಂತ್ರಜ್ಞಾನಗಳಿಗೆ ಸೀಮಿತವಾಗಿದೆ.

ದೇಶದ ಅಂತರಂಗದಲ್ಲಿ ಹುದುಗಿಹೋಗಿದ್ದ ಪಂಜಾಬ್ ಸಮಸ್ಯೆ, ಮಿಜೋರಂ ಸಮಸ್ಯೆ, ಮತ್ತು ಅಸ್ಸಾಂ ಸಮಸ್ಯೆಗಳನ್ನು ಪರಿಹರಿಸಲು ಶ್ರಮಿಸಿ ಜಯಶೀಲರಾದರು. ವಿಶ್ವದ ಶಾಂತಿ ಸಹಬಾಳ್ವೆಗಾಗಿ 1986 ರಲ್ಲಿ ಸಾರ್ಕ್ ಸಮ್ಮೇಳನ ನಡೆಸಿದರು.

- ಹಲವಾರು ರೋಗಗ್ರಸ್ಥ ಖಾಸಗಿ ಉದ್ದಿಮೆಗಳನ್ನು ಸರ್ಕಾರ ನೇರವಾಗಿ ವಹಿಸಿಕೊಳ್ಳುವಂತೆ ಮಾಡಿದರು.
- ಕೃಷಿ–ಶಿಕ್ಷಣಕ್ಕೆ ಮಹತ್ವದ ಗಮನಕೊಟ್ಟರು
- ಮಹಿಳಾ ಕಲ್ಯಾಣ, ಸಾಂಸ್ಕೃತಿಕ ರಕ್ಷಣೆಗೆ ಪ್ರಥಮ ಆದ್ಯತೆ ನೀಡಿದರು.
- ಕಪ್ಪುಹಣ ನಿಗ್ರಹಣೆ, ಕಾಳಸಂತೆಕೋರರ ವಿರುದ್ಧ ಧಾಳಿ
- ಸಾರ್ವಜನಿಕ ಕ್ಷೇತ್ರದಲ್ಲಿ ಶೇ.60 ಯುವಕರು ಶೇ.20 ಮಹಿಳೆಯರು ಪಾಲುದಾರರಾಗಿರುವ ಆದೇಶ.
- 18 ವರ್ಷ ತುಂಬಿದ ಯುವಕ ಯುವತಿಯರಿಗೆ ಮತದಾನದ ಹಕ್ಕು ನೀಡಿದರು. ನೆಹರೂ ರೋಜಗಾರ್ ಯೋಜನೆಯ ಮೂಲಕ ನಿರುದ್ಯೋಗಿ ಯುವಜನತೆಗೆ ಸ್ವಯಂ ಉದ್ಯೋಗದ ಸ್ವಾವಲಂಬನೆ ಕಲ್ಪಿಸಿಕೊಟ್ಟರು. ಪರಿಶಿಷ್ಟರ ಮೇಲಿನ ದೌರ್ಜನ್ಯತಡೆ, ಅಸ್ಪೃಶ್ಯತೆ ಆಚರಣೆ ವಿರುದ್ಧ ಪಿಸಿಆರ್ ಆಕ್ಟ್ ಜಾರಿಗೆ ತಂದರು.
- ರಾಷ್ಟ್ರಕ್ಕೆ ನೂತನ ಶಿಕ್ಷಣ ನೀತಿ ರಾಜೀವ್ ಕೊಡುಗೆ
- ಪ್ರತಿ ಸಂಸದರಿಗೆ ಕ್ಷೇತ್ರಾಭಿವೃದ್ಧಿಗಾಗಿ ಕೋಟಿ ರೂ. ವಿಶೇಷ ಅನುದಾನ ನೀಡಿದರು.

ಇಂದಿರಾರವರ ಪ್ರತಿರೂಪ



ಅಜ್ಜಿ ಮತ್ತು ತಂದೆಯ ಚಿತ್ರವನ್ನು ಕಣ್ಣಿನಲ್ಲಿಟ್ಟುಕೊಂಡು ತಾಯಿ ಹಾಗೂ ಅಣ್ಣನ ಪ್ರೀತಿಯಲ್ಲಿ ಬೆಳೆದ ಪ್ರಿಯಾಂಕಾಗಾಂಧಿ ಸೂಕ್ತ ಕಾಲದಲ್ಲಿ ಸಂಸಾರದ ನೊಗಹೊತ್ತು ಸಂಸಾರ ನಿರ್ವಹಣೆ ಮಾಡಿ ಮಕ್ಕಳು ದೊಡ್ಡವರಾಗುತ್ತಿದ್ದಂತೆಯೇ ಬದುಕಿನ ದಿನಗಳನ್ನು ತಾಯಿ ಹಾಗೂ ಅಣ್ಣನ ರಾಜಕಾರಣಕ್ಕೆ ಒತ್ತುಕೊಟ್ಟು ಪಕ್ಷಕ್ಕೆ ಬೆನ್ನೆಲುಬಾಗಿ ನಿಂತು ಹೋರಾಡುತ್ತಿರುವ ಜೂನಿಯರ್ ಇಂದಿರಾಗಾಂಧಿ.

ಇಂದಿರಾಗಾಂಧಿಯವರ 20 ಅಂಶದ ಕಾರ್ಯಕ್ರಮಗಳು

1966 ಜನವರಿ 29 ರಂದು ಇಂದಿರಾಗಾಂಧಿಯವರು ಪ್ರಧಾನಿ ಪದವಿಗೇರಿದಾಗ ಪಕ್ಷದಲ್ಲಿ ಹೊಸಶಕ್ತಿ ಸಂಚಲನವಾಯಿತು. 1969 ರಲ್ಲಿ ಕಾಂಗ್ರೆಸ್ ಸಿಂಡಿಕೇಟ್ ಉದ್ಭವವಾಗಿ ರಾಷ್ಟ್ರಪತಿ ಚುನಾವಣೆ ಯಲ್ಲಿ ತಮ್ಮ ವರಾದ ವಿವಿಗಿರಿಯನ್ನು ಗೆಲ್ಲಿಸುವುದರ ಮೂಲಕ ಇಂದಿರಾಗಾಂಧಿಯವರು ಇಡೀ ದೇಶದಲ್ಲೇ ಪ್ರಭಾವಿ ವ್ಯಕ್ತಿಯೆನಿಸಿದರು. ನಂತರ ಪಕ್ಷ ಇಬ್ಭಾಗವಾದಾಗ ಇಂದಿರಾ ಕಾಂಗ್ರೆಸ್ ನಿಜವಾದ ಕಾಂಗ್ರೆಸ್ ಎಂಬ ಸುಪ್ರೀಂ ಕೋರ್ಟ್ ತೀರ್ಪಿನಿಂದ ಹೊಸ ರಾಜಕೀಯ ಸಂಚಲನ ಉಂಟಾಯಿತು.


ಸುಮಾರು 16 ವರ್ಷಗಳ ಕಾಲ ಆಡಳಿತ ನಡೆಸಿದ ಇಂದಿರಾಗಾಂಧಿ 1976 ರಲ್ಲಿ ಜೀತ ಪದ್ಧತಿಯ ರದ್ಧತಿಯ ಬಗ್ಗೆ ಶಾಸನವನ್ನು ಜಾರಿಗೆ ತರಲಾಯಿತು. ಕಪ್ಪು ವ್ಯವಹಾರ ನಡೆಸುತ್ತಿದ್ದವರ ಆಸ್ತಿಗಳನ್ನು ಮುಟ್ಟುಗೋಲು ಹಾಕಿಕೊಳ್ಳಲು ಕ್ರಮ. ಮಧ್ಯಮ ಕೆಳವರ್ಗದವರಿಗೆ ಆದಾಯ ತೆರಿಗೆಯಿಂದ ವಿನಾಯಿತಿ. ರಸ್ತೆ ಸಾರಿಗೆ ರಾಷ್ಟ್ರೀಯ ಪರವಾನಗಿ ಯೋಜನೆ. 50 ಲಕ್ಷ ಹೆಕ್ಟೇರ್ ಭೂಮಿಗೆ ನೀರೊದಗಿಸುವ ಯೋಜನೆ.. ಭೂ ಜಲದ ಬಳಕೆಯಲ್ಲಿ ರಾಷ್ಟ್ರೀಯ ಯೋಜನೆ ಭಾರೀ ಥರ್ಮಲ್ ವಿದ್ಯುದುತ್ಪಾದನಾ ಕಾರ್ಯಗಾರ ಸ್ಥಾಪನೆ – ಇತ್ಯಾದಿ ಮಹತ್ವದ ಹೆಜ್ಜೆಗಳನ್ನಿಟ್ಟರು. 1982 ಜನವರಿ 14 ರಂದು ಇಂದಿರಾಗಾಂಧಿ ಯವರು ಪ್ರಕಟಿಸಿದ 20 ಅಂಶಗಳ ಕಾರ್ಯಕ್ರಮವನ್ನು ರಾಷ್ಟ್ರ ಮರೆಯುವಂತೆಯೇ ಇಲ್ಲ.

20 ಅಂಶಗಳು

1. ನೀರಾವರಿ ಸಾಮರ್ಥ್ಯವನ್ನು ಹೆಚ್ಚಿಸುವುದು, ಒಣ ಜಮೀನಿನ ಕೃಷಿಗೆ ತಾಂತ್ರಿಕ ಜ್ಞಾನವನ್ನೂ, ಲಾಗೋಡುಗಳನ್ನೂ ಅಭಿವೃದ್ಧಿಪಡಿಸಿ ಜನರಿಗೆ ಅವುಗಳನ್ನು ಮುಟ್ಟಿಸುವುದು.
2. ಬೇಳೆ ಕಾಳುಗಳು ಮತ್ತು ಖಾದ್ಯ ಎಣ್ಣೆ ಬೀಜಗಳ ಉತ್ಪಾದನೆಯನ್ನು ಅಧಿಕಗೊಳಿಸಲು ವಿಶೇಷ ಪ್ರಯತ್ನಗಳನ್ನು ಮಾಡುವುದು.
3. ಸಮಗ್ರ ಗ್ರಾಮೀಣ ಅಭಿವೃದ್ಧಿ ಮತ್ತು ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಕಾರ್ಯಕ್ರಮಗಳನ್ನು ಬಲಪಡಿಸಿ ಅವುಗಳ ವ್ಯಾಪ್ತಿಯನ್ನು ವಿಸ್ತರಿಸುವುದು.
4. ಎಲ್ಲ ಆಡಳಿತಾತ್ಮಕ ಹಾಗೂ ಕಾನೂನಿನ ಸಂಬಂಧದ ಅಡಚಣೆ ಗಳನ್ನು ನಿವಾರಿಸಿ ಕೃಷಿ ಭೂಮಿತಿಗಳನ್ನು ಜಾರಿಗೆ ತರುವುದು. ಹೆಚ್ಚುವರಿ ಜಮೀನನ್ನು ಹಂಚುವುದು ಹಾಗೂ ಜಮೀನಿನ ದಾಖಲೆಗಳ ಸಂಗ್ರಹಣೆಯನ್ನು ಪೂರ್ತಿ ಮಾಡುವುದು.
5. ಕೃಷಿ ಕಾರ್ಮಿಕರ ಕನಿಷ್ಠ ಕೂಲಿಯನ್ನು ಪುನರ್ ಪರಿಶೀಲಿಸಿ ಅದನ್ನು ಪರಿಣಾಮಕಾರಿಯಾಗಿ ಜಾರಿಗೆ ತರುವುದು.
6. ಜೀತಮುಕ್ತರಾದ ಕಾರ್ಮಿಕರನ್ನು ಪುನರ್ವ್ಯವಸ್ಥೆ ಗೊಳಿಸುವುದು.
7. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳಿಗೆ ಸೇರಿದ ಜನರ ಅಭಿವೃದ್ಧಿಗಾಗಿರುವ ಕಾರ್ಯಕ್ರಮಗಳನ್ನು ಚುರುಕು ಗೊಳಿಸುವುದು.
8. ಕುಡಿಯುವ ನೀರಿನ ಸಮಸ್ಯೆ ಇರುವ ಎಲ್ಲ ಹಳ್ಳಿಗಳಿಗೆ ಕುಡಿಯುವ ನೀರಿನ ಸರಬರಾಜಿಗೆ ವ್ಯವಸ್ಥೆ.
9. ನಿವೇಶನಗಳಲಿಲ್ಲದ ಗ್ರಾಮೀಣ ಕುಟುಂಬಗಳಿಗೆ ಮನೆ ಕಟ್ಟಲು ನಿವೇಶನಗಳನ್ನೊದಗಿಸುವುದು ಹಾಗೂ ಮನೆಕಟ್ಟಲು ಅವರಿಗೆ ನೆರವು ನೀಡುವ ಕಾರ್ಯಕ್ರಮಗಳನ್ನು ವಿಸ್ತರಿಸುವುದು.
10. ಕೊಳಚೆ ಪ್ರದೇಶಗಳ ವಾತಾವರಣದ ಸುಧಾರಣೆ, ಆರ್ಥಿಕವಾಗಿ ದುರ್ಬಲವಾಗಿರುವ ವರ್ಗಗಳಿಗೆ ಮನೆಕಟ್ಟುವಕಾರ್ಯ ಕ್ರಮಗಳನ್ನು ಜಾರಿಗೆ ತರುವುದು ಹಾಗೂ ಗೊತ್ತುಗುರಿ ಯಿಲ್ಲದೆ ಭೂಮಿಯ ಬೆಲೆಗಳು ಏರುವುದನ್ನು ತಡೆಗಟ್ಟಲು ಕ್ರಮಗಳನ್ನು ಕೈಗೊಳ್ಳುವುದು.
11. ವಿದ್ಯುದುತ್ಪಾದನೆಯನ್ನು ಗರಿಷ್ಠ ಪ್ರಮಾಣದಲ್ಲಿ ಅಧಿಕಗೊಳಿ ಸುವುದು, ವಿದ್ಯುಚ್ಛಕ್ತಿ ಮಂಡಳಿಗಳ ಕಾರ್ಯ ನಿರ್ವಹಣೆ ಯನ್ನು ಸುಧಾರಿಸುವುದು ಹಾಗೂ ಎಲ್ಲ ಗ್ರಾಮಗಳ ವಿದ್ಯುದೀಕರಣ
12. ಅರಣ್ಯವರ್ಧನೆ, ಸಾಮಾಜಿಕ ಮತ್ತು ಹೊಲಗದ್ದೆಗಳ ಸಸ್ಯವರ್ಧನೆಯ ಕಾರ್ಯಕ್ರಮಗಳನ್ನು ಹುರುಪಿನಿಂದ ಮುಂದುವರೆಸುವುದು ಹಾಗೂ ಗೊಬ್ಬರ ಇಂಧನ ಮತ್ತು ಇತರ ಬದಲಿ ಶಕ್ತಿ ಮೂಲಗಳನ್ನು ಅಭಿವೃದ್ಧಿಪಡಿಸುವುದು.
13. ಕುಟುಂಬ ಯೋಜನೆಯನ್ನು ಸ್ವ–ಇಚ್ಛೆಯಿಂದ ಅನುಸರಿಸುವ ಜನತಾ ಚಳುವಳಿಯನ್ನಾಗಿ ಮಾಡುವುದು.
14. ಸಾರ್ವತ್ರಿಕ ಪ್ರಾಥಮಿಕ ಆರೋಗ್ಯ ಸೇವಾ ಸೌಲಭ್ಯಗಳನ್ನು ಸಾಕಷ್ಟು ಪರಮಾಣದಲ್ಲಿ ಅಧಿಕಗೊಳಿಸುವುದು, ಕುಷ್ಟ ರೋಗ, ಕ್ಷಯ ಮತ್ತು ಅಂಧತ್ವದ ನಿಯಂತ್ರಣ ಕಾರ್ಯಕ್ರಮಗಳನ್ನು ಬಲಪಡಿಸುವುದು.
15. ಹೆಂಗಸರು ಮತ್ತು ಮಕ್ಕಳ ಕ್ಷೇಮಾಭ್ಯುದಯದ ಹಾಗೂ ಗರ್ಭಿಣಿಯರಿಗೆ, ಬಾಣಂತಿಯರಿಗೆ ಮತ್ತು ಮಕ್ಕಳಿಗೆ ಪೌಷ್ಟಿಕ ಆಹಾರ ಒದಗಿಸುವ ಕಾರ್ಯಕ್ರಮಗಳನ್ನು, ಅದರಲ್ಲೂ ಗುಡ್ಡಗಾಡು ಮತ್ತು ಹಿಂದುಳಿದ ಪ್ರದೇಶಗಳಲ್ಲಿನ ಈ ಕಾರ್ಯಕ್ರಮಗಳನ್ನು ತ್ವರಿತವಾಗಿ ಮುನ್ನಡೆಸುವುದು.
16. 6–14 ರ ವಯೋಗುಂಪಿನಲ್ಲಿರುವ ಮಕ್ಕಳಿಗೆ ಅದರಲ್ಲೂ ವಿಶೇಷವಾಗಿ ಹೆಣ್ಣು ಮಕ್ಕಳಿಗೆ ಸಾರ್ವತ್ರಿಕ ಪ್ರಾಥಮಿಕ ಶಿಕ್ಷಣವನ್ನು ಒದಗಿಸುವುದು ಹಾಗು ವಯಸ್ಕರಲ್ಲಿ ಅನಕ್ಷರತೆಯನ್ನು ಹೋಗಲಾಡಿಸುವ ಕಾರ್ಯಕ್ರಮಗಳಲ್ಲಿ ವಿದ್ಯಾರ್ಥಿಗಳು ಮತ್ತು ಸ್ವಯಂ ಸೇವಕ ಸಂಸ್ಥೆಗಳು ಭಾಗಿಯಾಘುವಂತೆ ಮಾಡುವುದು.
17. ದುರ್ಗಮ ಪ್ರದೇಶಗಳಲ್ಲಿ ಅಂಚಾರಿ ಅಂಗಡಿಗಳೂ ಸೇರಿದಂತೆ ಇನ್ನೂ ಹೆಚ್ಚಿನ ನ್ಯಾಯಬೆಲೆ ಅಂಗಡಿಗಳನ್ನು, ಹಾಗೂ ಕೈಗಾರಿಕಾ ಕಾರ್ಮಿಕರಿಗೆ, ವಿದ್ಯಾರ್ಥಿಗಳ ಕಾಸ್ಟೆಲ್‌ಗಳಿಗೆ ಅಂಗಡಿಗಳನ್ನು ಹೊಂದುವ ಮೂಲಕ ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನು ವಿಸ್ತರಿಸುವುದು ; ಆದ್ಯತೆಯ ಆಧಾರದ ಮೇಲೆ ಪಠ್ಯ ಪುಸ್ತಕಗಳು ಮತ್ತು ಎಕ್ಸರ್‌ಸೈಸ್ ಪುಸ್ತಕಗಳನ್ನು ವಿದ್ಯಾರ್ಥಿಗಳಿಗೆ ಒದಗಿಸುವುದು ಹಾಗೂ ಸಬಲ ಗ್ರಾಹಕ ರಕ್ಷಣಾ ಚಳವಳಿಗೆ ಉತ್ತೇಜನ ನೀಡುವುದು.
18. ಬಂಡವಾಳ ಹೂಡಿಕೆಯ ಕಾರ್ಯ ವಿಧಾನಗಳನ್ನು ಸಡಿಲ ಗೊಳಿಸುವುದು ಹಾಗೂ ಯೋಜನೆಗಳು ಸಕಾಲಕ್ಕೆ ಮುಗಿಯುವುದು ಸಾಧ್ಯವಾಗುವಂತೆ ಕೈಗಾರಿಕಾ ಧೋರಣೆಗಳನ್ನು ನೇರಗೊಳಿಸುವುದು. ಕರಕುಶಲ ವಸ್ತುಗಳು, ಕೈಮಗ್ಗಗಳು, ಸಣ್ಣ ಮತ್ತು ಗ್ರಾಮೀಣ ಕೈಗಾರಿಕೆಗಳಿಗೆ ಅವು ಬೆಳೆಯಲೂ ತಮ್ಮ ತಾಂತ್ರಿಕ ಜ್ಞಾನವನ್ನು ಆಧುನಿಕಗೊಳಿಸಲು ಎಲ್ಲ ಸೌಲಭ್ಯ ಗಳನ್ನು ನೀಡುವುದು.
19. ಕಳ್ಳ ಸಾಗಾಟಗಾರರು, ಕಳ್ಳ ದಾಸ್ತಾನುಗಾರರು ಮತ್ತು ತೆರಿಗೆ ಕೊಡದೆ ತಪ್ಪಿಸಿಕೊಳ್ಳುವವರ ವಿರುದ್ಧ ಕಟ್ಟುನಿಟ್ಟಿನ ಕ್ರಮಗಳನ್ನು ಮುಂದುವರೆಸುವುದು ಹಾಗೂ ಕಪ್ಪು ಹಣದ ಪ್ರಭಾವವನ್ನು ತಡೆಯುವುದು.
20. ದಕ್ಷತೆಯ ಸುಧಾರಣೆ, ಸಾಮರ್ಥ್ಯ ಬಳಕೆ ಮತ್ತು ಆಂತರಿಕ ಸಂಪನ್ಮೂಲಗಳನ್ನು ಉಂಟು ಮಾಡುವ ಮೂಲಕ ಸರ್ಕಾರಿ ಉದ್ಯಮಗಳ ಕಾರ್ಯನಿರ್ವಹಣೆಯನ್ನು ಸುಧಾರಿಸುವುದು.




ಆರ್ಥಿಕ ತಜ್ಞ ಪಿ.ವಿ. ನರಸಿಂಹರಾವ್



ರಾಜೀವ್ ಗಾಂಧಿಯವರ ಹತ್ಯೆಯ ನಂತರ 1991ರಲ್ಲಿ ಪ್ರಧಾನಿಯಾದ ಪಿ.ವಿ. ನರಸಿಂಹರಾವ್ ಸಿಟಿ ಆಕ್ಟ್ ಆಫ್ 1992 ಜಾರಿಗೆ ತಂದರು. 1994ರಲ್ಲಿ ನ್ಯಾಷನಲ್ ಸ್ಟಾಕ್ ಎಕ್ಸ್‌ಚೇಂಜ್ ಕೈಗಾರಿಕಾ ನೀತಿಯ ಸುಧಾರಣೆ, ಪ್ರೋಕ್ರಾನ್ ನ್ಯೂಕ್ಲಿಯರ್ ಟೆಸ್ಟ್‌ಗೆ ಒತ್ತುಕೊಟ್ಟ ರಾವ್ Father of Indian nuclear procron ಎನಿಸಿದರು. ಬಾಬರಿ ಮಸೀದಿ ಬೀಳಿಸಿದ ಅಪಖ್ಯಾತಿಯನ್ನು ಅವರು ಹೊರಬೇಕಾಯಿತು.

ಸ್ವತಂತ್ರ ಭಾರತದ ಪ್ರಥಮ ಪ್ರಧಾನಿ

I am the First Servant of India



ಎಂದು ಹೇಳಿದ ಸ್ವತಂತ್ರ ಭಾರತದ ಪ್ರಥಮ ಪ್ರಧಾನಿ ಜವಹರಲಾಲ್ ನೆಹರು ಕಾಲದಲ್ಲಿ ಭಾರತ ಏಷಿಯಾ ಕ್ರೀಡಾಕೂಟಗಳಲ್ಲಿ ತನ್ನ ಛಾಪು ಮೂಡಿಸಲಾರಂಭಿಸಿತ್ತು. ಭಾಕ್ರಾನಂಗಲ್ ರಿಂದ ಅಣೆಕಟ್ಟುಗಳು ನಿರ್ಮಿಸಲ್ಪಟ್ಟಿದ್ದವು ಬಾಬಾ ಪರಮಾಣು ಸಂಶೋಧನಾ ಕೇಂದ್ರವನ್ನು ಆರಂಭಿಸಿತ್ತು. ತಾರಾಪೂರ ಪರಮಾಣು ವಿದ್ಯುಚ್ಛಕ್ತಿ ಕೇಂದ್ರ ಸ್ಥಾಪನೆ ಗೊಂಡಿತ್ತು.

ದೇಶದಲ್ಲಿ ಸಾಕಷ್ಟು ಉನ್ನತ ಶಿಕ್ಷಣ ಸಂಸ್ಥೆಗಳಾದ ಐಐಟಿ ಐಐಎಂಎಸ್ ಹಾಗೂ ಅನೇಕ ಪ್ರತಿಷ್ಠಿತ ವಿಶ್ವವಿದ್ಯಾಲಯಗಳು ಆರಂಭವಾದವು. ನೆಹರು ಆಗಲೇ ನವರತ್ನ ಕಂಪನಿಗಳನ್ನು ಸ್ಥಾಪಿಸಿದ್ದರು. ನೆಹರು ಪೋರ್ಚುಗೀಸರಿಂದ ಗೋವಾ ವಿಮೋಚನೆಗೊಳಿಸಿದ್ದರು. ಭಾರತವು ಪಾಕಿಸ್ತಾನದೊಡನೆ ಒಂದು ಯುದ್ಧವನ್ನು ಗೆದ್ದುಕೊಂಡಿತ್ತು. ಅಂದೇ ನೆಹರು ಇಸ್ರೋ ಸ್ಥಾಪನೆ ಮಾಡಿ ದ್ದರು. ಅಂದೇ ಭಾರತದಲ್ಲಿ ಶ್ವೇತಕ್ರಾಂತಿ ಆರಂಭವಾಗಿತ್ತು. ನೆಹರು ಕಾಲದಲ್ಲೇ ದೇಶದಲ್ಲಿ ಔದ್ಯೋಗಿಕ ಶಕೆ ಪ್ರಾರಂಭಿಸಲಾಗಿತ್ತು. ಸಂಪ್ರದಾಯವಾದಿಗಳ ವಿರೋಧದ ನಡುವೆಯೇ ಹಿಂದೂ ಮಹಿಳೆಯರಿಗೆ ಸಮಾನ ಹಕ್ಕು ಗಳನ್ನು ನೀಡಲು ಶಾಸನದಲ್ಲಿ ತಿದ್ದುಪಡಿ ಮಾಡಿದ ಕೀರ್ತಿ ಅವರದು.

- 1950 ಅನೇಕ ಸಣ್ಣಪುಟ್ಟ ರಾಜ್ಯಗಳನ್ನು ಒಂದುಗೂಡಿಸಿ ಭಾರತ ಒಕ್ಕೂಟ ರಚನೆ.
- 1950 ವಿನೋಬಾಭಾವೆಯವರಿಂದ ಭೂದಾನ ಚಳುವಳಿ
- 1956 ಭಾಷಾವಾರು ಪ್ರಾಂತ್ಯಗಳ ರಚನೆ
- ಸ್ವಾತಂತ್ರ್ಯಾ ನಂತರದ 75 ವರ್ಷಗಳ ಪಯಣವನ್ನು ನೆನೆಯುವುದೇ ಆದರೆ ಈ ಅಭಿವೃದ್ಧಿಯ ಭದ್ರಕೋಟೆಗೆ ಆಧುನಿಕ ಭಾರತದ ಶಿಲ್ಪಿ ನೆಹರೂ ಇಟ್ಟ ಮೊದಲ ಇಟ್ಟಿಗೆಯನ್ನು ಕಡೆಗಣಿಸಲಾಗುವು ದಿಲ್ಲ. ನೆಹರೂ ಯುಗದಲ್ಲಿ ನಿರ್ಮಿಸಿದ ಪ್ರತಿಷ್ಠಿತ ವಿಮಾಸಂಸ್ಥೆ ಭಾರತೀಯ ಜೀವ ವಿಮಾನಿಗಮ.
- ನೆಹರೂ ಸ್ಥಾಪಿಸಿದ ಆಧುನಿಕ ಕೈಗಾರಿಕೆಗಳು, ಸಾಂವಿಧಾನಿಕ ಸಂಸ್ಥೆಗಳು, ಸಾರ್ವಜನಿಕ ಉದ್ದಿಮೆಗಳು, ಯೋಜನೆಗಳು ಭವಿಷ್ಯ ಭಾರತದ ಬುನಾದಿಯಾದವು.
- ಬಿಹೆಚ್‌ಇಎಲ್, ಎಐಐಎಮ್‌ಎಸ್, ಎಲ್‌ಐಸಿ, ಇಂಡಿಯನ್ ಆಯಿಲ್ ಕಾರ್ಪೋರೇಷನ್, ಒಎನ್‌ಜಿಸಿ ಮುಂತಾದ 75 ಸಾರ್ವಜನಿಕ ಸಂಸ್ಥೆಗಳು ಸ್ವಾವಲಂಬಿ ರಾಷ್ಟ್ರ ಮೂಡಿಸಿದವು.
- ಕಬ್ಬಿಣ ಮತ್ತು ಉಕ್ಕು ತಯಾರಿಕೆಯ ಬೃಹತ್ ಘಟಕ ಸ್ಥಾಪನೆ
- ಖಾದಿ ಮತ್ತು ಗ್ರಾಮೋದ್ಯೋಗ ಆಯೋಗ ರಚನೆ
- ಬಿಲಾಯ್, ದುರ್ಗಾಪುರ, ರೂರ್ಕೆಲಾಗಳನ್ನು ಕೈಗಾರಿಕಾ ನಗರಗಳಾಗಿ ನಿರ್ಮಿಸುತ್ತಿದ್ದ ಸಂದರ್ಭದಲ್ಲೇ ಅತ್ಯಾಧುನಿಕ ನಗರವಾಗಿ ಚಂಡೀಗಢ ನಿರ್ಮಾಣ ವಾದದ್ದು.
- ನೆಹರೂ ಆಳ್ವಿಕೆಯಲ್ಲಿ ಸ್ಥಾಪಿಸಲಾದ ಚುನಾವಣಾ ಆಯೋಗ, ಯೋಜನಾ ಆಯೋಗಗಳು ಭಾರತ ಪ್ರಜಾತಂತ್ರದ ಬುನಾದಿಯಾಗಿವೆ.
- ಅಮೂಲ್ ಇಂದಿಗೂ ವಿಶ್ವದ ಅತಿದೊಡ್ಡ ಹಾಲು ಉತ್ಪಾದನೆಯ ಸಂಸ್ಥೆಯಾಗಿರುವುದು ನೆಹರು ಆರ್ಥಿಕತೆಯ ಹೆಮ್ಮೆ
- ಬರಗಾಲಪೀಡಿತ ದೇಶವನ್ನು ಸಮೃದ್ಧ ಕೃಷಿ ಉತ್ಪಾದನೆಯ ಕಣಜವನ್ನಾಗಿ ಪರಿವರ್ತಿಸಿ ಆಹಾರಧ್ಯಾನ್ಯ ಗಳನ್ನು ಹೊರದೇಶಗಳಿಗೆ ರಫ್ತು ಮಾಡುವ ದೇಶವನ್ನಾಗಿ ಮಾಡಲು ನೆಹರು ಹಸಿರು ಕ್ರಾಂತಿ ಮಾಡಿದರು.
- ದೇಶದ ಮೂಲೆ ಮೂಲೆಗೂ ಬ್ಯಾಂಕಿಂಗ್ ಸೇವೆಯನ್ನು ವಿಸ್ತರಿಸಿದರು.

ತ್ಯಾಗಮಹಿ ಸೋನಿಯಾಗಾಂಧಿ



1991 ಮೇ 21 ತಮಿಳುನಾಡಿನ ಪೆರಂಬದೂರಿನ ಸಾರ್ವಜನಿಕ ಸಭೆಯಲ್ಲಿ ಮಾತನಾಡುತ್ತಿದ್ದ ರಾಜೀವ್ ಗಾಂಧಿಯವರನ್ನು ಮಾನವ ಬಾಂಬ್ ಸ್ಫೋಟಿಸಿತ್ತು. ಸ್ಥಳಕ್ಕೆ ಧಾವಿಸಿದ ಸೋನಿಯಾ ಗಾಂಧಿ ಎಲ್ಲಿ ನನ್ನ ಗಂಡನ ದೇಹ ತೋರಿಸಿ ಎಂದಾಗ ಅಂಗರಕ್ಷಕರು ಛಿದ್ರವಾಗಿದ್ದ ರಾಜೀವ್ ದೇಹದ ತುಂಡುಗಳನ್ನು ಚೀಲದಲ್ಲಿ ತಂದು ತೋರಿಸುತ್ತಾರೆ. ಅಚಿದಿನ ಸೋನಿಯಾ ಸ್ಥಿತಿ ಭಾರತದ ಯಾವ ಹೆಣ್ಣಿಗೂ ಬರಬಾರದು. ಆನಂದಸಾಗರದಲ್ಲಿ ತೇಲುತ್ತಿದ್ದ ಬಾಳದೋಣಿ ಬಾಂಬ್ ಸ್ಫೋಟದಿಂದ ಸಿಡಿದು ಹೋದಾಗ ಗಂಡನನ್ನು ಕಳೆದುಕೊಂಡು ದುಃಖಿಸುತ್ತಿದ್ದ ಆಕೆಯ ಕಣ್ಣೀರು ಒರೆಸುವವರು ಯಾರೂ ಇರಲಿಲ್ಲ. ಅಂದು ಮಕ್ಕಳನ್ನು ನೋಡಿ ಆಕೆ ತನ್ನನ್ನು ತಾನು ಸಂತೈಸಿಕೊಂಡರು. 1991 ರಿಂದ 1997 ರವರೆಗೂ ಸೋನಿಯಾ ಮೌನರೋದನೆ ಮಾಡಿದರು ತನ್ನ ವಂಶಪ್ರಾಣಾರ್ಪಣೆಗೊಂಡ ಬಗ್ಗೆ ತಾನು ಹೆಮ್ಮೆ ಪಡಬೇಕು, ದುಃಖಿಸ ಬಾರದು, ಯಾವುದೋ ದೇಶದ ಹೆಣ್ಣುಮಗಳು ಆಕಸ್ಮಿಕವಾಗಿ, ಅನಿರೀಕ್ಷಿತವಾಗಿ ಭಾರತದ ಸೊಸೆಯಾಗಿ ಬಂದೆ ಈಗ ನಾನು ಈ ಮಣ್ಣಿನ ಋಣ ತೀರಿಸಬೇಕು ಸಾವಿಗೆ ಅಂಜಬಾರದು, ಸಾಂಸಾರಿಕ ವ್ಯಾಮೋಹಕ್ಕೆ ಒಳಗಾಗಬಾರದು ಎಂದು ನಿರ್ಧರಿಸಿ 1998 ಏಪ್ರಿಲ್ 5 ರಂದು ಪಕ್ಷಾಧ್ಯಕ್ಷ ರಾದ ಸೋನಿಯಾ 2 ದಶಕಗಳ ಕಾಲ ಪಕ್ಷವನ್ನು ಸಮರ್ಥವಾಗಿ ಮುನ್ನಡೆಸಿದರು. 2004 ರಲ್ಲಿ ಕೇಂದ್ರದಲ್ಲಿ ಕಾಂಗ್ರೆಸ್ ಆಡಳಿತಕ್ಕೆ ಬಂದಾಗ ಸೋನಿಯಾ ಪ್ರಧಾನಿಯಾಗಿ ಬಿಡುತ್ತಾರೆ ಎಂದು ಆತಂಕಗೊಂಡ ಬಿಜೆಪಿಯ ವರು ವಿದೇಶಿ ಎಂದರು ಸೋನಿಯಾ ಅರ್ಹತೆ ಪ್ರಶ್ನಿಸಿ ನ್ಯಾಯಾಲಯಕ್ಕೆ ಹೋದರು.



▲ Rajiv Gandhi, assassinated in one of the major crimes of the century — by the belt-bomb woman.

ಭಾರತೀಯ ಪೌರತ್ವವನ್ನು ಪಡೆದಿರುವ ಯಾವುದೇ ಪ್ರಜೆ ಅತ್ಯುನ್ನತ ಸಂವಿಧಾನಾತ್ಮಕ ಹುದ್ದೆಗಳನ್ನು ಅನುಭವಿಸಲು ಯಾವುದೇ ಅಡೆತಡೆಯಿಲ್ಲ ಎಂದಿತು ಸುಪ್ರೀಂಕೋರ್ಟ್ ಆದರೂ ಕುರ್ಚಿಯನ್ನು ತ್ಯಾಗಮಾಡಿದ್ದು ಸೋನಿಯಾರ ಉದಾರಗುಣಕ್ಕೊಂದು ಉದಾಹರಣೆ.


Promotional feature

139 ವರ್ಷಗಳ ಐತಿಹಾಸಿಕ ಹಿನ್ನೆಲೆಯ ಕಾಂಗ್ರೆಸ್



ಪಕ್ಷನಿಷ್ಠ ರಾಷ್ಟ್ರನಾಯಕ

ಎಐಸಿಸಿ ಅಧ್ಯಕ್ಷರಾಗಿರುವ ಮಲ್ಲಿಕಾರ್ಜುನ ಖರ್ಗೆ ದೊಡ್ಡ ವ್ಯಕ್ತಿ, ದೊಡ್ಡತನ, ದೊಡ್ಡಸ್ಥಾನ ಖರ್ಗೆಯವರು ಎಐಸಿಸಿ ಅಧ್ಯಕ್ಷರಂತಹ ಉನ್ನತ ಸ್ಥಾನಕ್ಕೆ ಹೇಳಿಮಾಡಿಸಿದ ವ್ಯಕ್ತಿ. 82 ವರ್ಷದ ನಾಯಕ ಖರ್ಗೆಯವರಿಂದಾಗಿ ಅಧ್ಯಕ್ಷ ಸಾನದ ಗೌರವ, ಕೀರ್ತಿ, ಪ್ರತಿಷ್ಠೆಗಳು ಇಮ್ಮಡಿಯಾಗಿವೆ.



ಪರಿಪಕ್ವ ಅನುಭವದ ಪರಿಶುದ್ಧ ರಾಜಕಾರಣಿ ಖರ್ಗೆಯವರು ಐಸಿಯುನಲ್ಲಿದ್ದ ಕಾಂಗ್ರೆಸ್‌ಗೆ ಚೈತನ್ಯ ತುಂಬಿ ಲೋಕಸಭಾ ಚುನಾವಣೆಗೆ ಸಜ್ಜುಗೊಳಿಸಿದ್ದಾರೆ. ಈಗ ನಡೆಯಲಿರುವ 5 ರಾಜ್ಯಗಳ ವಿಧಾನಸಭಾ ಚುನಾವಣೆಯಲ್ಲಿ 2–3 ರಾಜ್ಯ ಗಳಲ್ಲಿ ಕಾಂಗ್ರೆಸ್ ಗೆದ್ದರೆ ಅದರ ಕೀರ್ತಿ, ಖರ್ಗೆಯವರ ಕೀರ್ತಿ ಎರಡೂ ಇಮ್ಮಡಿಗೊಳ್ಳುತ್ತವೆ, ಲೋಕಸಭಾ ಚುನಾವಣೆಯ ಗೆಲುವಿನ ನಿರೀಕ್ಷೆ ಮತ್ತಷ್ಟು ಹೆಚ್ಚಾಗುತ್ತದೆ. ಬೀದರ್ ಜಿಲ್ಲೆಯ ವರ ವಟ್ಟಿ ಗ್ರಾಮದಲ್ಲಿ ಹುಟ್ಟಿದ ಖರ್ಗೆಯವರು, ಬ್ರಿಟಿಷ್ ರೆಜಿಮೆಂಟಿನವರು ತಮ್ಮ ತಾಯಿಯನ್ನು ತಮ್ಮ ಕಣ್ಣೆದುರೇ ಸುಟ್ಟಿದ್ದನ್ನು ಕಂಡು ತಂದೆಯೊಡನೆ ಗುಲ್ಬರ್ಗಾಕ್ಕೆ ಬಂದು ನೆಲೆಸಿದರು. ಕಾರ್ಮಿಕನ ಮಗನಾದ ಇವರು ಕಾನೂನು ಪದವೀಧರನಾಗಿ ರಾಜಕೀಯಕ್ಕೆ ಬಂದು ಸತತ 9 ಬಾರಿ ವಿಧಾನಸಭೆಗೆ ಆಯ್ಕೆಯಾಗಿ ಶಿಕ್ಷಣ, ಗ್ರಾಮೀಣಾಭಿವೃದ್ಧಿ, ಕಂದಾಯ, ಸಣ್ಣ ಕೈಗಾರಿಕೆ, ಸಹಕಾರ, ಜಲಸಂಪನ್ಮೂಲ, ಗೃಹ, ಸಾರಿಗೆ, ಸಣ್ಣ ನೀರಾವರಿ, ಮೊದಲಾದ ಖಾತೆಗಳ ಸಚಿವರಾಗಿ, ವಿರೋಧಪಕ್ಷದ ನಾಯಕ, ಪಕ್ಷಾಧ್ಯಕ್ಷ ಎಲ್ಲವೂ ಆಗಿ ರಾಜ್ಯ ರಾಜಕಾರಣದಲ್ಲಿ ತಮ್ಮದೇ ಆದ ಛಾಪು ಮೂಡಿಸಿದರು. ತರುವಾಯ. ಲೋಕಸಭಾ ಸದಸ್ಯರಾಗಿ ಕೇಂದ್ರ ದಲ್ಲಿ ಕಾರ್ಮಿಕ ಹಾಗೂ ಉದ್ಯೋಗ, ರೈಲ್ವೆ ಹಾಗೂ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಖಾತೆಗಳ ಸಚಿವರಾಗಿ, ಲೋಕಸಭೆಯಲ್ಲಿ ಕಾಂಗ್ರೆಸ್ ಪಕ್ಷದ ನಾಯಕರಾಗಿ ಕೀರ್ತಿ ಗಳಿಸಿದ ಖರ್ಗೆಯವರು ಪ್ರಸ್ತುತ ರಾಜ್ಯಸಭೆಯಲ್ಲಿ ವಿಪಕ್ಷ ನಾಯಕರಾಗಿ, ಎಐಸಿಸಿ ಅಧ್ಯಕ್ಷರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

ಖರ್ಗೆಯವರು ಐದೂವರೆ ಸಕ್ರಿಯ ರಾಜಕಾರಣದಲ್ಲಿದ್ದರೂ, ಸತತ ಬಾರಿ ಶಾಸಕರಾಗಿ ಆಯ್ಕೆಯಾದರೂ, ಸಚಿವರಾಗಿ ಹಲವು ಮಹತ್ವಪೂರ್ಣ ಖಾತೆ ಗಳನ್ನು ಸಮರ್ಥವಾಗಿ ನಿಭಾಯಿಸಿದ್ದರೂ, ಹಿರಿಯ ದಲಿತ ನಾಯಕರಾಗಿ ದ್ದರೂ, ಗಾಂಧಿ ಕುಟುಂಬಕ್ಕೆ ನಿಷ್ಠರಾಗಿದ್ದರೂ, ಸೋನಿಯ ಗಾಂಧಿ ಮತ್ತು ರಾಹುಲ್ ಗಾ0ಧಿಯವರ ಆಪ್ತ ವಲಯದವರಾಗಿದ್ದರೂ, ರಾಜ್ಯ ರಾಜಕಾರಣದಲ್ಲಿ ಇದಾವುದೂ ಅವರನ್ನು ಸಿಎಂ ಸ್ಥಾನದೆಡೆಗೆ ಕೈಹಿಡಿದು ನಡೆಸಲಿಲ್ಲ ಎನ್ನುವುದು ದುರದೃಷ್ಟಕರ ಸಂಗತಿ. ಈ ಬಗ್ಗೆ ಅವರಿಗೆ ಬೇಸರವಿದ್ದರೂ, ಅವರ ಆಪ್ತರು ಈ ಕಾರಣಕ್ಕಾಗಿ ಕಾಂಗ್ರೆಸ್ ನಾಯಕತ್ವದ ಬಗ್ಗೆ ಸಿಟ್ಟಾದ ಸಂದರ್ಭಗಳಿದ್ದರೂ, ಪಕ್ಷದ ಅನೇಕ ಹಿರಿಯ ನಾಯಕರು ಆಸೆ–ಆಮಿಷಗಳಿಗೆ ಶರಣಾಗಿ ಬಂಡೆದ್ದರೂ, ಖರ್ಗೆಯವರು ಮಾತ್ರ ತಮ್ಮ ಅದಲ ನಿಷ್ಠೆಯನ್ನು ಯಾವತ್ತೂ ಬಿಟ್ಟುಕೊಡದೆ ಪಕ್ಷದಲಿ ನೆಲೆ ನಿಂತರು.

ಪಕ್ಷದ ನಿರ್ಧಾರಗಳನ್ನೆಲ್ಲ ಅತ್ಯಂತ ತಾಳ್ಮೆಯಿಂದ ಸ್ವೀಕರಿಸಿದ್ದು, ಎಲ್ಲಾ ಸಂದರ್ಭಗಳನ್ನು ಅರ್ಥಮಾಡಿಕೊಂಡು ಸಂಯಮ ತೋರಿಸಿದ್ದು, ವಹಿಸಿದ ಜವಾಬ್ದಾರಿಗಳನ್ನೆಲ್ಲಾ ಸಮರ್ಥವಾಗಿ ನಿರ್ವಹಿಸಿದ್ದು ಖರ್ಗೆ ಯವರ ಹೆಚ್ಚುಗಾರಿಕೆ. ಪಕ್ಷದ ನಾಯಕತ್ವ ಹಾಗೂ ಸಿದ್ಧಾಂತಕ್ಕೆ ಅಚಲನಿಷ್ಠೆ, ಕೊಟ್ಟ ಹುದ್ದೆಯನ್ನು ಸಮರ್ಥವಾಗಿ ನಿಭಾಯಿಸುವ ಸಾಮರ್ಥ್ಯ, ಸಾಧಿಸಿ ತೋರಿಸುವ ಛಲ, ಆಳವಾದ ಅಧ್ಯಯನದಿಂದ ಬಂದಿರುವ ವೈಚಾರಿಕ ಸ್ಪಷ್ಟತೆ, ಕಳಂಕರಹಿತ ರಾಜಕೀಯ ಜೀವನ, ಮುತ್ಸದ್ದಿ ನಡೆ ಈ ಎಲ್ಲವೂ ಅವರನ್ನು ರಾಷ್ಟ್ರ ರಾಜಕಾರಣದಲ್ಲಿ ಇನ್ನಷ್ಟು ಎತ್ತರಕ್ಕೆ ಕೊಂಡೊಯ್ದಿವೆ. ಜೀವನದಲ್ಲಿ ಅಂಬೇಡ್ಕರ್ ಅವರ ಆದರ್ಶ ವ್ಯಕ್ತಿಯಾದರೆ ರಾಜಕಾರಣದಲ್ಲಿ ಇಂದಿರಾ ಗಾಂಧಿಯವರನ್ನು ಅನುಸರಿಸಿ ನಿಷ್ಠೆ ಮೆರೆದವರು. ರಾಜ್ಯ ರಾಜಕಾರಣದ ಇತಿಹಾಸದಲ್ಲಿ ಪ್ರಥಮ ಬಾರಿಗೆ ಮೇಲ್ವರ್ಗಗಳನ್ನು ವಿರೋಧಿಸಿ, ಕೆಳವರ್ಗಗಳನ್ನು ಪೋಷಿಸಿ ಬೆಳೆಸಿದ ಮುಖ್ಯಮಂತ್ರಿ ದೇವರಾಜ ಅರಸರ ಶಿಷ್ಯನಾಗಿ ಬೆಳೆದರೂ ಖರ್ಗೆಯವರು ಎಂದೂ ಮೇಲ್ವರ್ಗ ಗಳನ್ನು ವಿರೋಧಿಸಲಿಲ್ಲ.

ಬಸವಲಿಂಗಪ್ಪನವರಂತೆ ಕೆಳವರ್ಗದ ಪರ ಘರ್ಜಿಸಲೂ ಇಲ್ಲ, ಮೇಲ್ವರ್ಗಗಳ ವಿಶ್ವಾಸ ಗಳಿಸಿ ಕೊಂಡು, ಕೆಳವರ್ಗದ ಜನರ ಹಿತಕ್ಕಾಗಿ ದುಡಿದರು. ಆಜಾನುಬಾಹು ಶರೀರ, ಪ್ರಬುದ್ಧ ವ್ಯಕ್ತಿತ್ವ ಎರಡನ್ನೂ ಬಹಳ ಎಚ್ಚರಿಕೆಯಿಂದ ಕಾಪಾಡಿಕೊಂಡು ಬಂದವರು, ಸತತ 54 ವರ್ಷ ರಾಜಕಾರಣದಲ್ಲಿದ್ದರೂ ಅವರೆಂದೂ ತಪ್ಪು ಹೆಜ್ಜೆ ಇಡಲಿಲ್ಲ. ಮಾಧ್ಯಮಗಳಿಗೆ ಆಹಾರವಾಗಲಿಲ್ಲ, ಉಡಾಫೆಯಿಂದ ನಡೆದುಕೊಳ್ಳಲಿಲ್ಲ. ಈ ಒಂಟಿಸಲಗ ಅರಣ್ಯದ ಹಾದಿಯಲ್ಲೂ ಅಷ್ಟೇ, ರಾಜಮಾರ್ಗದಲ್ಲೂ ಅಷ್ಟೇ ಒಂದೇ ವೇಗ, ಒಂದೇ ಗುರಿ.ಐಎನ್‌ಡಿಐಎ ಮೈತ್ರಿಕೂಟದಲ್ಲಿ ಕಾಂಗ್ರೆಸ್ ಸೇರಿ 26 ಪಕ್ಷಗಳಿವೆ. ಈ ಮೈತ್ರಿಕೂಟದ ಹಿರಿಯ ನಾಯಕರಿಗೆ ಭಾರತದ ಬಹುತ್ವ ಮತ್ತು ಸೌಹಾರ್ದದ ಬದುಕನ್ನು ಪುನಃ ಸ್ಥಾಪಿಸುವುದು ಆದ್ಯತೆಯಾಗಿದೆ.

ಪ್ರಜಾಪ್ರಭುತ್ವದ ಮೌಲ್ಯಗಳನ್ನು ಉಳಿಸುವುದು, ಸಮೃದ್ಧ ಭಾರತವನ್ನು ನಿರ್ಮಿಸುವುದು ಅವರ ಕನಸಾಗಿದೆ. ಮೈತ್ರಿಕೂಟದ ಸಹಭಾಗಿಗಳಾಗಿರುವ ವಿವಿಧ ಪಕ್ಷಗಳ ನಡುವೆ ಸಮನ್ವಯ. ತರಲು ಯತ್ನಿಸುತ್ತಿರುವ ಕಾಂಗ್ರೆಸ್ ಉದಾರವಾಗಿ – ನಡೆದುಕೊಳ್ಳುತ್ತಿದೆ.

ಕಾಂಗ್ರೆಸ್ ಪಕ್ಷದ ರಾಷ್ಟೀಯ – ಅಧ್ಯಕ್ಷರಾಗಿರುವ ಖರ್ಗೆಯವರು ಅಭಿಮಾನಪಡುವ ರೀತಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ.

ತಮ್ಮ ಅನುಭವವನ್ನು ಪಣಕ್ಕಿಟ್ಟು ಅವರು ಮೈತ್ರಿಕೂಟವನ್ನು ಬಲಪಡಿಸುತ್ತಿದ್ದಾರೆ, ಮುನ್ನಡೆಸುತ್ತಿದ್ದಾರೆ. ಹಾಗೆ ನೋಡಿದರೆ ಖರ್ಗೆಯವರಿಗೆ ಸೈದ್ಧಾಂತಿಕ ಸ್ಪಷ್ಟತೆ ಇದೆ. ಬುದ್ಧ, ಬಸವ, ಗಾಂಧಿ, ಅಂಬೇಡ್ಕರ್‌ರವರ ಆದರ್ಶಗಳಲ್ಲಿ ಬಲವಾದ ನಂಬಿಕೆಯಿಟ್ಟು ರಾಜಕಾರಣ ಮಾಡಿದ ನಾಯಕರವರು. ಖರ್ಗೆಯವರು ಭ್ರಷ್ಟಾಚಾರದಲ್ಲಿ ಹಗರಣಗಳಲ್ಲಿ ಸಿಲುಕದೆ ಪ್ರಚಾರ ಬಯಸದೆ ಬಂದವರು. ಟೀಕೆ–ಟಿಪ್ಪಣಿಗಳ ವಿರುದ್ಧ ಸೇಡಿನ ರಾಜಕಾರಣ ಮಾಡಿದವರಲ್ಲ, ಅವರ ಈ 'ಮಾದರಿ ರಾಜಕಾರಣ'ದ ವ್ಯಾಪಕ ಪ್ರಚಾರ ನಡೆದಿದ್ದರೆ, ಮೋದಿಯವರು ಇಷ್ಟೆಲ್ಲಾ ಅನಾಹುತ ಮಾಡಿಯೂ ಮಹಾನ್ ದೇಶಭಕ್ತರೆನಿಸಿಕೊಳ್ಳಲು ಅವಕಾಶವೇ ಇರುತ್ತಿರಲಿಲ್ಲ. ಖರ್ಗೆಯವರದು ಕಾಂಗ್ರೆಸಿಗರಿಗೆ ಮಾತ್ರವಲ್ಲದೆ. ಎಲ್ಲಾ ಪಕ್ಷಗಳ ರಾಜಕಾರಣಿಗಳ ಪಾಲಿಗೂ ಅನುಕರಣೀಯ ವ್ಯಕ್ತಿತ್ವ 'ಇಂಡಿಯ' ಮೈತ್ರಿಕೂಟದ ನೇತೃತ್ವ ವಹಿಸಿರುವ ಖರ್ಗೆಯವರು ತಮ್ಮದೇ ಆದ ಉದ್ದೇಶ, ಗುರಿ, ಸೈದ್ಧಾಂತಿಕ ಸ್ಪಷ್ಟತೆಯೊಂದಿಗೆ ಬದ್ಧತೆಯಿಂದ ಮುನ್ನಡೆಯುತ್ತಿರುವುದು ಸದ್ಯದ ಮಟ್ಟಿಗೆ ಆಶಾದಾಯಕ ಬೆಳವಣಿಗೆ, ಮೋದಿಯವರು ಕಟ್ಟುವ ಹುಸಿ ಕಥಾನಕಗಳ ಬಣ್ಣವನ್ನು ಬಯಲು ಮಾಡುವುದು, 2014ರ ಲೋಕಸಭಾ ಚುನಾವಣೆಯನ್ನು ಮೋದಿ–ಕೇಂದ್ರಿತವಾಗದಂತೆ ತಡೆಯುವುದು ಅಗತ್ಯವಾಗಿದೆ. ಎನ್‌ಡಿಎ ಸರಕಾರದ ವೈಫಲ್ಯವನ್ನು, ಜನಸಾಮಾನ್ಯರ ಕಷ್ಟ–ಕಾರ್ಪಣ್ಯವನ್ನು, ಮೋದಿ ಭಕ್ತರ ಹುಸಿ ದೇಶಭಕ್ತಿಯನ್ನು ಮತದಾರರಿಗೆ ಮನವರಿಕೆ ಮಾಡಿಕೊಡಬೇಕಿದೆ. ಅಪ್ಪಟ ದೇಶಭಕ್ತ, ಕರ್ನಾಟಕದ ಹೆಮ್ಮೆಯೆನಿಸಿರುವ ಖರ್ಗೆಯವರ ನೇತೃತ್ವದ 'ಇಂಡಿಯ' ಮೈತ್ರಿಕೂಟ ಯಶಸ್ವಿಯಾದರೆ ಪ್ರಜಾಪ್ರಭುತ್ವದ ಮೌಲ್ಯಗಳು ಗೆದ್ದಂತೆ.

ತಾಯಿ ದೇವರೇ ಅವರ ಸರ್ವಸ್ವ



ಬಹುಶಃ ರಾಜೀವ್‌ಗಾಂಧಿ ಬಲಿದಾನವಾಗದಿದ್ದರೆ, ಸೋನಿಯಾ ಗಾಂಧಿಯವರ ರಾಜಕೀಯ ಪ್ರವೇಶವಾಗುತ್ತಿರಲಿಲ್ಲ. ರಾಜೀವ್ ನಂತರ ರಾಹುಲ್ ಪ್ರಧಾನಿಯಾಗುತ್ತಿದ್ದರು. ಆದರೆ ದುರ್ದೈವ ರಾಜೀವ್ ಬಲಿಯಾದರು.


ರಾಹುಲ್‌ಗಾಂಧಿ ಯವರಿಗೆ ಭವ್ಯವಾದ ರಾಜಕೀಯ ಹಿನ್ನೆಲೆ ಇದೆ. ಭಾರತದ ಹೆಮ್ಮೆಯ ಮಹಿಳೆ ಸೋನಿಯಾ ಗಾಂಧಿ ಯವರ ಮಗ ಪ್ರಧಾನಿ ರಾಜೀವ್‌ಗಾಂಧಿಯವರ ಮಗ, ಪ್ರಧಾನಿ ಇಂದಿರಾಗಾಂಧಿಯವರ ಮೊಮ್ಮಗ, ಭಾರತದ ಪ್ರಥಮ ಪ್ರಧಾನಿ ಜವಹರಲಾಲ ನೆಹರೂರವರ ಮರಿಮಗ ಎಂಬ ಖ್ಯಾತಿ ಅವರದು. ಶ್ರೀಮಂತಿಕೆಯ ಸೋಗಿನಲ್ಲಿ ದುರ್ವ್ಯಸನ, ದುಶ್ಚಟಗಳಿಗೆ ಬಲಿಯಾಗಿ ಪ್ರೀತಿ ಪ್ರೇಮಗಳ ಬಗ್ಗೆ ತಲೆಕೆಡಿಸಿಕೊಂಡು 2004ರಲ್ಲೇ ಪಟ್ಟುಹಿಡಿದು ಪ್ರಧಾನಿಯಾಗಬಹುದಾಗಿದ್ದ ರಾಹುಲ್ ಬೆಳೆದದ್ದೇ ಬೇರೆ ಹಾದಿಯಲ್ಲಿ.

ರಾಜೀವ್ ಹತ್ಯೆಯಾದಾಗ 21 ವರ್ಷದ ರಾಹುಲ್ ಅಮೆರಿಕದಲ್ಲಿ ಅಭ್ಯಸಿಸುತ್ತಿದ್ದರು. 1994ರ ವರೆಗೆ ಫ್ಲೋರಿಡಾದ ರೋಲಿನ್ಸ್ ಕಾಲೇಜಿನಲ್ಲಿ ಅಧ್ಯಯನ, 1995ರಲ್ಲಿ ಅಭಿವೃದ್ಧಿ ಅಧ್ಯಯನದಲ್ಲಿ ಎಂಫಿಲ್, ನಂತರ ಲಂಡನ್‌ನ ಸ್ಟ್ರಾಟೆಜಿ ಕನ್ಸಲ್ಟೆನ್ಸಿ ಸಂಸ್ಥೆಯಲ್ಲಿ ಕಾರ್ಯ ನಿರ್ವಹಣೆ, 2002ರಲ್ಲಿ ಭಾರತಕ್ಕೆ ವಾಪಸ್ಸು.

ಅಣಲೇ ರಾಜಕೀಯಕ್ಕೆ ಅವ್ಯಕ್ತ ಪ್ರವೇಶ. ರಾಹುಲ್‌ರ ರಾಜಕೀಯಕ್ಕೆ ತಾಯಿಯೇ ಗುರು, ಮಾರ್ಗದರ್ಶಕಿ, ಗಾಡ್‌ಫಾದರ್ ಎಲ್ಲವೂ ಆಗಿದ್ದರು. 2004ರಲ್ಲಿ ರಾಜಕೀಯ ಪ್ರವೇಶ, ಆಗಲೇ ಅಮೇಥಿ ಕ್ಷೇತ್ರದಿಂದ ಲೋಕಸಭಾ ಸದಸ್ಯ, 2009ರಲ್ಲಿ ಮತ್ತೆ ಲೋಕಸಭಾ ಸದಸ್ಯ, 2013ರಲ್ಲಿ ಎಐಸಿಸಿ ಉಪಾಧ್ಯಕ್ಷ, 2017ರಲ್ಲಿ ಎಐಸಿಸಿ ಅಧ್ಯಕ್ಷ, 2019ರಲ್ಲಿ ಮತ್ತೆ ಲೋಕಸಭಾ ಸದಸ್ಯ.

ತಾನು ವಿರೋಧ ಪಕ್ಷದ ನಾಯಕನಾಗಬೇಕಿತ್ತು, ರಾಷ್ಟ್ರದ ಪ್ರಧಾನಿಯಾಗಬೇಕಿತ್ತು ಎಂದವರು ಕನಸಿ ನಲ್ಲಿಯೂ ನೆನೆಸಲಿಲ್ಲ. ಮಧುವೆಯಾಗಿ ಸಂಸಾರ ಹೊಂದಬೇಕೆಂದು ಬಯಸಲಿಲ್ಲ. ಅವಿವಾಹಿತನಾಗಿ ಉಳಿದರೆ ತನ್ನ ವ್ಯಕ್ತಿತ್ವಕ್ಕೆ ಧಕ್ಕೆಯಾಗುವುದೆಂಬ ಬಗ್ಗೆ ತಲೆಯನ್ನೇ ಕೆಡಿಸಿಕೊಳ್ಳಲಿಲ್ಲ. ರಾಹುಲ್‌ಗೆ ಜಗತ್ತಿನಲ್ಲಿ ಉಳಿದಿರುವುದು 'ತಾಯಿ' ಎಂಬ ಒಂದೇ ದೇವರು. ಆ ದೇವರೇ ಅವರ ಸರ್ವಸ್ವ, ಆ ದೇವರಿಗಾಗಿ ತಾನು ರಾಜಕಾರಣಿಯಾಗಿದ್ದೇನೆ. ಪಕ್ಷ ಸಂಘಟಿಸುತ್ತಿದ್ದೇನೆ ಎನ್ನುತ್ತಾರೆ ರಾಹುಲ್. ಕೊಳಗೇರಿಗಳಿಗೆ ಹೋಗುವುದು, ಹಳ್ಳಿಗಳಿಗೆ ಹೋಗುವುದು, ದಿನನಿತ್ಯವೂ ಸಾಮಾನ್ಯರನ್ನು ಸಂಪರ್ಕಿಸುವುದು, ಅವರೊಡನೆ ಬೆರೆಯುವುದು ನಿತ್ಯದ ದಿನಚರಿ. 1700 ಕಿ.ಮೀ. ನಡೆದು ಭಾರತ್ ಜೋಡೋ ಯಾತ್ರೆಯಲ್ಲಿಯೂ ಉದ್ದಕ್ಕೂ ಎಲ್ಲರೀತಿಯ ಜನರನ್ನು ಅವರು ಭೇಟಿಯಾದರು, ಕುಶಲೋಪರಿ ವಿಚಾರಿಸಿದರು. ದೇಶದೆಲ್ಲಡೆ ರಾಹುಲ್ ಪ್ರಧಾನಿಯಾಗ ಬೇಕು ಎಂಬ ಕೂಗಿದ್ದರೂ ಸೋನಿಯಾ – ರಾಹುಲ್ ಆ ಬಗ್ಗೆ ಎಂದೂ ಮಾತಾಡಿಲ್ಲ, ಒಚಿದೂ ಮಾತಾಡಿಲ್ಲ. ದೇಶದ ಎಲ್ಲ ಬಡಜನರೂ ಅವರ ಬಂಧುಗಳು. ಎಲ್ಲರೊಳಗೊಂದಾಗಿ ಬದುಕಿನ ಸಾರ್ಥಕ ಕಂಡುಕೊಳ್ಳುವ ನಿರ್ಧಾರ ಅವರದು.

ಸರಳ ಬದುಕಿನ ವಿರಳ ಸಾಧಕ ಡಾ॥ ಮನಮೋಹನ್ ಸಿಂಗ್



2004 ಮತ್ತು 2009 ರ ಎರಡು ಅವಧಿಯ ಪ್ರಧಾನಿ ಯಾಗಿ ದೇಶವನ್ನು ಪ್ರಗತಿ ಪಥದಲ್ಲಿ ಮುನ್ನಡೆಸಿದ ಹೆಗ್ಗಳಿಕೆ ಆರ್ಥಿಕ ತಜ್ಞ ಡಾ॥ ಮನಮೋಹನ್ ಸಿಂಗ್ ಅವರದು, ಮಾಹಿತಿ ಹಕ್ಕು ಕಾಯ್ದೆ, ಮಹಾತ್ಮಗಾಂಧಿ ಉದ್ಯೋಗ ಭರವಸೆ, ಯೋಜನೆ ಶಿಕ್ಷಣ ಹಕ್ಕು ಕಾಯ್ದೆ ಜೆ ನರ್ಮ್, ಪ್ರಧಾನ ಮಂತ್ರಿ ಗ್ರಾಮಸಡಕ್ ಯೋಜನೆ, ಇಂದಿರಾ ಅವಾಸ್ ಯೋಜನೆ, ಮಧ್ಯಾಹ್ನದ ಬಿಸಿಯೂಟ, ಸರ್ವ ಶಿಕ್ಷಾ ಅಭಿಯಾನ, ಬೀದಿ ವ್ಯಾಪಾರಿಗಳ ಹಕ್ಕು ರಕ್ಷಣೆ ಕಾಯ್ದೆ, 371 (ಎ) ಮೂಲಕ ಹೈದ್ರಬಾದ್ ಕರ್ನಾಟಕಕ್ಕೆ ವಿಶೇಷ ಸ್ಥಾನಮಾನ, ಮಹಿಳಾ ಬ್ಯಾಂಕ್ ಲೋಕಪಾಲ್ ಮಸೂದೆ, ಆಧಾರ್‌ಕಾರ್ಡ್, ರೈಲ್ವೆ ಯೋಜನೆಗಳು, ಗೃಹ ದೌರ್ಜನ್ಯ ತಡೆಕಾಯ್ದೆ, ರೈತರ ಸಾಲಮನ್ನಾ, ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಮಿಷನ್, ಆಹಾರ ಭದ್ರತಾ ಕಾಯ್ದೆ, 20 ಕೋಟಿ ಮಕ್ಕಳಿಗೆ ಉಚಿತ ಶಿಕ್ಷಣ, ರೈತರಿಗೆ ನೀಡಲಾಗುತ್ತಿದ್ದ ಬೆಂಬಲ ಬೆಲೆ ದ್ವಿಗುಣಗೊಳಿಸಿದ್ದು, ಅಸಂಘಟಿತ ಕಾರ್ಮಿಕರ ವಿಮಾ ಯೋಜನೆ, ಭೂಸ್ವಾಧೀನ ಕಾಯ್ದೆಯಡಿ ರೈತರ ಹಿತರಕ್ಷಣೆ ಮುಂತಾದ ಬಹಳ ಮಹತ್ವದ ಯೋಜನೆಗಳನ್ನು ಸಿಂಗ್ ಕಾಲದಲ್ಲಿ ಜಾರಿಗೆ ತರಲಾಯಿತು.

ಸಾಮಾಜಿಕ ನ್ಯಾಯ ಕಾಂಗ್ರೆಸ್ ಧ್ಯೇಯ

ಲೋಕಸಭಾ ಚುನಾವಣೆ 2024ರ ಕಾಂಗ್ರೆಸ್ ಪ್ರಣಾಳಿಕೆ

ಉದ್ಯೋಗ ಸೃಷ್ಟಿ, ಬೆಂಬಲ ಬೆಲೆ, ಮೂಲ ಸೌಕರ್ಯ ಅಭಿವೃದ್ಧಿ, ರಾಷ್ಟ್ರೀಯ ಜನಗಣತಿ, ಸಾಮಾಜಿಕ ನ್ಯಾಯ, ಅಲ್ಪ ಸಂಖ್ಯಾತರ ವೈಯಕ್ತಿಕ ಕಾನೂನುಗಳ ಸುಧಾರಣೆ ಇನ್ನಿತರ ಪ್ರಮುಖ ಭರವಸೆಗಳನ್ನು ನೀಡಲಾಗಿದೆ.

ಯುವನ್ಯಾಯ

1) ಶಿಕ್ಷಣ ಪಡೆದ ಪದವೀಧರ ಯುವಕರಿಗೆ 1 ಲಕ್ಷ ರೂ ಅಪ್ರೆಂಟಿಷಿಪ್
2) 30 ಲಕ್ಷ ಉದ್ಯೋಗ ಸೃಷ್ಟಿ
3) ಪ್ರಶ್ನೆಪತ್ರಿಕೆ ತಡೆಗೆ ಎಲ್ಲಾ ರೀತಿಯ ಕ್ರಮ
4) ಗುತ್ತಿಗೆ ಆಧಾರಿತ ಉದ್ಯೋಗಿಗಳ ರಕ್ಷಣೆ
5) ಯುವಕರಿಗೆ 5 ಸಾವಿರ ರೂ ಸ್ಟಾರ್ಟಪ್ ಫಂಡ್

ಮಹಿಳೆಯರಿಗೆ ನ್ಯಾಯ

1) ಬಡ ಕುಟುಂಬದ ಒಬ್ಬ ಮಹಿಳೆಗೆ ವಾರ್ಷಿಕ 1 ಲಕ್ಷ ರೂ ನೆರವು.
2) ಕೇಂದ್ರ ಸರ್ಕಾರದ ಉದ್ಯೋಗಗಳಲ್ಲಿ ಸ್ತ್ರೀಯರಿಗೆ ಶೇ 50% ರಷ್ಟು ಮೀಸಲಾತಿ.
3) ಆಶಾ, ಬಿಸಿಯೂಟ ಕಾರ್ಯಕರ್ತೆಯರ ಸಂಬಳ ದ್ವಿಗುಣ.
4) ಗ್ರಾಮೀಣ ಭಾಗದ ಮಹಿಳಾ ಕಾರ್ಮಿಕರಿಗೆ ಕಾನೂನು ನೆರವು
5) ಮಹಿಳಾ ಕಾರ್ಮಿಕರ ಹಾಸ್ಟೆಲುಗಳನ್ನು 2 ಪಟ್ಟು ಹೆಚ್ಚಿಸಲಾಗುವುದು.

ರೈತರಿಗೆ ನ್ಯಾಯ

1) ಎಂ.ಎಸ್. ಸ್ವಾಮಿನಾಥನ್ ಆಯೋಗದ ಶಿಫಾರಸ್ಸಿನಂತೆ ರೈತರ ಬೆಲೆಗಳಿಗೆ ಕನಿಷ್ಟ ಬೆಂಬಲ ಬೆಲೆಯ ಕಾನೂನು ಜಾರಿ.
2) ರೈತರ ಸಾಲ ಮನ್ನಾ ಮಾಡಲು ಶಾಶ್ವತ ಆಯೋಗ ರಚನೆ.
3) ಬೆಲೆ , ವಿಮೆ ಹಣವನ್ನು 30 ದಿನಗಳಲ್ಲಿ ನೇರವಾಗಿ ರೈತರ ಖಾತೆಗಳಿಗೆ ವರ್ಗಾವಣೆ.
4) ರೈತರ ಸ್ನೇಹಿಯಾಗಿ ಕೃಷಿ, ರಫ್ತು ನೀತಿ ರೂಪಿಸುವುದು.
5) ಕೃಷಿ ಸಲಕರಣೆಗಳಿಗೆ ಜಿ.ಎಸ್.ಟಿ.ಯಿಂದ ಮುಕ್ತಿ

ಕಾರ್ಮಿಕರಿಗೆ ನ್ಯಾಯ

1) ನರೇಗಾ ದಿನಗೂಲಿ ಕಾರ್ಮಿಕರಿಗೆ 400 ದಿನಗೂಲಿ ಏರಿಕೆ
2) ಪ್ರತಿಯೊಬ್ಬರಿಗೂ 25 ಲಕ್ಷ ರೂವರೆಗೆ ಆರೋಗ್ಯ ವಿಮೆ.
3) ನರೇಗಾ ರೀತಿ ನಗರಗಳಲ್ಲೂ ಉದ್ಯೋಗ ಖಾತ್ರಿ ಯೋಜನೆ.
4) ಅಸಂಘಟಿತ ಕಾರ್ಮಿಕರಿಗೆ ಜೀವ ವಿಮೆ.
5) ಸರ್ಕಾರಿ ನೌಕರರಿಗೆ ರಕ್ಷಣೆ, ಪಾರದರ್ಶಕತೆಗೆ ಆದ್ಯತೆ

ಸಮಾನತೆಯ ನ್ಯಾಯ

1) ಸಾಮಾಜಿಕ ಹಾಗೂ ಆರ್ಥಿಕ ಸಮಾನತೆಗಾಗಿ ದೇಶಾದ್ಯಂತ ಜಾತಿ ಗಣತಿ.
2) ಎಸ್.ಸಿ., ಎಸ್.ಟಿ., ಓ.ಬಿ.ಸಿ. ಮೀಸಲಾತಿಯ ಶೇ 50% ರ ಮಿತಿ ತೆಗೆದುಹಾಕಲಾಗುವುದು.
3) ಎಸ್.ಸಿ., ಎಸ್.ಟಿ.ಯವರಿಗೆ ವಿಶೇಷ ಬಜೆಟ್ ಮಂಡನೆ.
4) ಅರಣ್ಯ ಹಕ್ಕುಗಳ ಕಾಯ್ದೆಯ ವ್ಯಾಜ್ಯಗಳನ್ನು 1 ವರ್ಷದಲ್ಲಿ ವಿಲೇವಾರಿ.
5) ಎಸ್‌ಟಿ ಸಮುದಾಯದ ಜನಸಂಖ್ಯೆ ಹೆಚ್ಚಿರುವ ಪ್ರದೇಶಗಳಲ್ಲಿ PESA ಜಾರಿ.

ಬಿಜೆಪಿ ತಿರಸ್ಕರಿಸಿ, ಕಾಂಗ್ರೆಸ್ ಬೆಂಬಲಿಸಿ

ಎಸ್ಸಿ, ಎಸ್ಟಿ ಸಮಾವೇಶದಲ್ಲಿ ಶಾಸಕ ಎ.ಎಸ್.ಪೊನ್ನಣ್ಣ ಮನವಿ

ವಿರಾಜಪೇಟೆ, ಏ.22–ಧರ್ಮ ಹಾಗೂ ಜಾತಿಗಳ ನಡುವೆ ವಿಷಬೀಜ ಬಿತ್ತುವ ಬಿಜೆಪಿಯನ್ನು ತಿರಸ್ಕರಿಸಿ, ಎಲ್ಲಾ ಸಮಾಜದ ಅಭಿವೃದ್ಧಿಯ ಚಿಂತನೆ ನಡೆಸುವ ಕಾಂಗ್ರೆಸ್ ಬೆಂಬಲಿಸಬೇಕು ಎಂದು ಶಾಸಕ ಎ.ಎಸ್.ಪೊನ್ನಣ್ಣ ಮನವಿ ಮಾಡಿದರು.

ಬಿಟ್ಟಂಗಾಲ ಹೆಗ್ಗಡೆ ಸಮಾಜದ ಸಭಾಂಗಣದಲ್ಲಿ ನಡೆದ ವಿರಾಜಪೇಟೆ ವಿಧಾನಸಭಾ ಕ್ಷೇತ್ರದ ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಘಟಕ ಮತ್ತು ಬ್ಲಾಕ್ ಕಾಂಗ್ರೆಸ್ ಕಾರ್ಯಕರ್ತರ ಸಮಾವೇಶದಲ್ಲಿ ಮಾತನಾಡಿದ ಅವರು, ಧರ್ಮ ಮತ್ತು ಜಾತಿಯ ಆಧಾರದ ಮೇಲೆ ರಾಜಕೀಯ ಮಾಡುವುದು ಸಂವಿಧಾನ ವಿರೋಧ. ಪ್ರಜಾತಂತ್ರ ವ್ಯವಸ್ಥೆಯಲ್ಲಿ ಎಲ್ಲರೂ ಸಮಾನರು ಎಂಬ ತತ್ವ ಸಿದ್ಧಾಂತದ ಮೇಲೆ ರಾಜಕೀಯ ಮಾಡುವುದು ಕಾಂಗ್ರೆಸ್‌ನ ಧ್ಯೇಯವಾಗಿದೆ ಎಂದರು.

ರಾಜ್ಯ ಸರ್ಕಾರದ ಗ್ಯಾರಂಟಿಗಳ ಮೇಲೆ ಜನತೆಗೆ ವಿಶ್ವಾಸವಿದೆ. ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರ ಎಂದಿಗೂ ಶೋಷಿತರ ಪರವಾಗಿ ಯೋಜನೆಗಳಾಗಲಿ ಅಥವಾ ಸಮುದಾಯಗಳ ಅಭಿವೃದ್ಧಿ ಪರ ಚಿಂತನೆ ನಡೆಸಿಲ್ಲ. ಸುಳ್ಳು ಹೇಳಿಕೊಂಡು ರಾಜಕೀಯ ಮಾಡುತ್ತಿದೆ. ಬಡವರು, ದಲಿತರು, ಶೋಷಿತರು ಇಂದಿಗೂ ಶೋಚನೀಯ ಸ್ಥಿತಿಯಲ್ಲೇ ಜೀವನ ನಡೆಸುತಿದ್ದಾರೆ. ಶೋಷಿತರ ಸಮಗ್ರ ಅಭಿವೃದ್ಧಿ, ದೀನ ದಲಿತರ ಉದ್ಧಾರಕ್ಕಾಗಿ ಕಾಂಗ್ರೆಸ್ ಅಭ್ಯರ್ಥಿ ಎಂ.ಲಕ್ಷ್ಮಣಗೆ ಮತ ನೀಡಬೇಕು ಎಂದು ಮನವಿ ಮಾಡಿದರು.



ಬಿಟ್ಟಂಗಾಲ ಹೆಗ್ಗಡೆ ಸಮಾಜದ ಸಭಾಂಗಣದಲ್ಲಿ ನಡೆದ ಎಸ್ಸಿ ಮತ್ತು ಎಸ್ಟಿ ಬ್ಲಾಕ್ ಕಾಂಗ್ರೆಸ್ ಕಾರ್ಯಕರ್ತರ ಸಮಾವೇಶದಲ್ಲಿ ಶಾಸಕ ಎ.ಎಸ್.ಪೊನ್ನಣ್ಣ ಮಾತನಾಡಿದರು.

ವಿಧಾನಪರಿಷತ್ ಮಾಜಿ ಸದಸ್ಯ ಸಿ.ಎಸ್.ಅರುಣ್ ಮಾಚಯ್ಯ ಮಾತನಾಡಿ, ಮಾಜಿ ಪ್ರಧಾನಿ ಮನಮೋಹನ್ ಸಿಂಗ್ ಜಾರಿಗೊಳಿಸಿದ ಅನೇಕ ಯೋಜನೆಗಳಿಗೆ ಇಂದು ಬಿಜೆಪಿ ಹೊಸರೂಪ ನೀಡಿ ನಾವೇ ಮಾಡಿದ್ದು ಎಂದು ಸುಳ್ಳು ಹೇಳಿ ರಾಜಕೀಯ ಮಾಡುತ್ತಿದೆ ಎಂದು ಆರೋಪಿಸಿದರು.

ಕಾಂಗ್ರೆಸ್ ರಾಜ್ಯ ವಕ್ತಾರ ಟಿ.ಪಿ.ರಮೇಶ್ ಮಾತನಾಡಿದರು. ಕಾರ್ಯಕ್ರಮಕ್ಕೂ ಮುನ್ನ ಬಿಟ್ಟಂಗಾಲ ಜಂಕ್ಷನ್‌ನಿಂದ ಹೆಗ್ಗಡೆ ಸಮಾಜದ ಸಭಾಂಗಣವರೆಗೆ ನಾಗರಹೊಳೆ ಗಿರಿಜನ ಅಭಿವೃದ್ಧಿ ಸಂಘದ ಸದಸ್ಯರು ಜಾಥಾ ನಡೆಸಿದರು.

ಸಮಾವೇಶದಲ್ಲಿ ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಬಿ.ಶಾಂತಪ್ಪ, ಮುಖಂಡರಾದ ಎನ್.ವೀರಭದ್ರಯ್ಯ, ಕುಡಿಯರ ಮುತ್ತಪ್ಪ, ತಾರಾ ಅಮ್ಮಯ್ಯ, ಬಾನಂಡ ಪೃಥ್ವಿ, ಪ್ರಚಾರ ಸಮಿತಿ ಅಧ್ಯಕ್ಷ ವಿ.ಕೆ.ಸತೀಶ್, ಎಸ್‌ಸಿ ಘಟಕದ ಜಿಲ್ಲಾಧ್ಯಕ್ಷ ಜಯೇಂದ್ರ ವಿರಾಜಪೇಟೆ ಎಸ್‌ಸಿ ಘಟಕದ ಅಧ್ಯಕ್ಷ ಮಹದೇವ, ಎಸ್‌ಟಿ ಘಟಕದ ಅಧ್ಯಕ್ಷ ಶಿವಣ್ಣ, ವಿರಾಜಪೇಟೆ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಪಿ.ರಂಜಿ ಪೂಣಚ್ಚ, ನಾಪೋಕ್ಲು ಅಧ್ಯಕ್ಷ ಇಸ್ಮಾಯಿಲ್, ಪೊನ್ನಂಪೇಟೆ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮೀದೇರಿರ ನವೀನ್, ವಿವಿಧ ದಲಿತ ಸಂಘಟನೆ ಮತ್ತು ಬುಡಕಟ್ಟು ಸಂಘಟನೆಗಳ ಪ್ರಮುಖರು ಹಾಗೂ ಕಾಂಗ್ರೆಸ್ ಕಾರ್ಯಕರ್ತರು ಭಾಗವಹಿಸಿದ್ದರು.

ಬಿಯರ್ ಬಾಟಲ್‌ನಿಂದ ಹೊಡೆದು ಬಾರ್ ಸಿಬ್ಬಂದಿ ಕೊಲೆ

ಕೊಲೆ ಆರೋಪಿ ಹರ್ಷಿತ್ ಬಂಧನ

ಕುಶಾಲನಗರ: ಕ್ಷುಲ್ಲಕ ಕಾರಣಕ್ಕೆ ಬಾರ್ ಸಿಬ್ಬಂದಿ ಮೇಲೆ ಯುವಕ ಬಿಯರ್ ಬಾಟಲ್‌ನಿಂದ ಹಲ್ಲೆ ನಡೆಸಿ ಕೊಲೆ ಮಾಡಿರುವ ಘಟನೆ ಪಟ್ಟಣದ ಹೃದಯ ಭಾಗದಲ್ಲಿರುವ ಕನ್ನಿಕಾ ಇಂಟರ್ ನ್ಯಾಷನಲ್ ಹೋಟೆಲ್‌ನಲ್ಲಿ ಭಾನುವಾರ ತಡರಾತ್ರಿ ನಡೆದಿದೆ.

ಮೂಲತಃ ಸೋಮವಾರಪೇಟೆ ತಾಲೂಕಿನ ಕುಶಾಲನಗರದ ನಿವಾಸಿ ಸಂತೋಷ್(42) ಕೊಲೆಯಾಗಿದ್ದು, ಕೊಲೆ ಆರೋಪಿ ಜನತಾ ಕಾಲೋನಿ ನಿವಾಸಿ ಹರ್ಷಿತ್(33)ನನ್ನು ಪೊಲೀಸರು ಬಂಧಿಸಿದ್ದಾರೆ. ರೆಸ್ಟೋರೆಂಟ್‌ನಲ್ಲಿ ಭಾನುವಾರ ರಾತ್ರಿ 11.25ರವರೆಗೆ ಹರ್ಷಿತ್ ಮದ್ಯ ಸೇವಿಸಿದ್ದಾನೆ. ನಂತರ ತಡರಾತ್ರಿ ಆದ್ದರಿಂದ ರೆಸ್ಟೋರೆಂಟ್ ಮುಚ್ಚಿ ಹೊರ ಆಗಮಿಸಿದ ಸಿಬ್ಬಂದಿ ಸಂತೋಷ್ ಮತ್ತು ಹರ್ಷಿತ್ ನಡುವೆ ಕ್ಷುಲ್ಲಕ ವಿಚಾರಕ್ಕೆ ಮಾತಿನ ಚಕಮಕಿ ನಡೆದಿದೆ. ಈ ವೇಳೆ ಹರ್ಷಿತ್ ಬಿಯರ್ ಬಾಟಲ್‌ನಿಂದ ಸಂತೋಷ್ ತಲೆಗೆ ಹಲ್ಲೆ ನಡೆಸಿ, ಕುತ್ತಿಗೆಗೆ ಇರಿದಿದ್ದಾನೆ. ತೀವ್ರ ರಕ್ತಸ್ರಾವಗೊಂಡ ಸಂತೋಷ್‌ನನ್ನು ಮಾಲೀಕರು ತಕ್ಷಣ ಸ್ಥಳೀಯ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಪ್ರಥಮ ಚಿಕಿತ್ಸೆ ಕೊಡಿಸಿ, ಮಡಿಕೇರಿ ಆಸ್ಪತ್ರೆಗೆ ಕರೆದೊಯ್ಯುವಾಗ ಮಾರ್ಗಮಧ್ಯ ಸಂತೋಷ್ ಮೃತಪಟ್ಟಿದ್ದಾನೆ.

ಕೊಲೆ ಆರೋಪಿ ಹರ್ಷಿತ್‌ನನ್ನು ಕುಶಾಲನಗರ ಠಾಣೆ ಪೊಲೀಸರು ಬಂಧಿಸಿ, ಪ್ರಕರಣ ದಾಖಲಿಸಿಕೊಂಡಿದ್ದಾರೆ. ಸೋಮವಾರ ಘಟನಾ ಸ್ಥಳಕ್ಕೆ ಜಿಲ್ಲಾ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಸುಂದರ್ ರಾಜ್ ಹಾಗೂ ವಿಧಿವಿಜ್ಞಾನ ಪ್ರಯೋಗಾಲಯದ ಸಿಬ್ಬಂದಿ ಭೇಟಿ ನೀಡಿ, ಪರಿಶೀಲನೆ ನಡೆಸಿದರು.



ಕೊಲೆ ಆರೋಪಿ ಹರ್ಷಿತ್



ಕೊಲೆಯಾದ ಸಂತೋಷ್

ಪ್ರತಿಭಟನೆ: ಬಾರ್ ಸಿಬ್ಬಂದಿ ಸಂತೋಷ್ ಕೊಲೆ ಖಂಡಿಸಿ ಕಾಂಗ್ರೆಸ್ ಹಾಗೂ ದಲಿತ ಮುಖಂಡರು ಹೋಟೆಲ್ ಆವರಣದಲ್ಲಿ ಪ್ರತಿಭಟನೆ ನಡೆಸಿದರು. ಆರೋಪಿ ವಿರುದ್ಧ ಕಠಿಣ ಕ್ರಮ ಜರುಗಿಸಬೇಕೆಂದು ಪ್ರತಿಭಟನಾಕಾರರು ಆಗ್ರಹಿಸಿದರು. ಹೋಟೆಲ್, ಬಾರ್‌ಗಳಲ್ಲಿ ಕೆಲಸ ನಿರ್ವಹಿಸುವವರಿಗೆ ಸುರಕ್ಷತೆಯಿಲ್ಲದಂತಾಗಿದೆ. ಅಮಾಯಕ ಯುವಕನ ಸಾವಿಗೆ ಸರಿಯಾದ ನ್ಯಾಯ ಹಾಗೂ ಸೂಕ್ತ ಪರಿಹಾರ ನೀಡಬೇಕು ಎಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಕೆಪಿಸಿಸಿ ಸದಸ್ಯ ಮಂಜುನಾಥ್ ಗುಂಡುರಾವ್, ಕಾಂಗ್ರೆಸ್ ನಗರಾಧ್ಯಕ್ಷ ಪ್ರಮೋದ್ ಮುತ್ತಪ್ಪ, ಕಾರ್ಮಿಕ ಘಟಕ ಅಧ್ಯಕ್ಷ ಶಿವಶಂಕರ್ ಮತ್ತಿತರರು ಇದ್ದರು.

ಕಾದಾಟದಲ್ಲಿ ಹುಲಿ ಸಾವು



ಗಣಗೂರು ಗಸ್ತಿನ ಅರಣ್ಯ ಪ್ರದೇಶದ ಕೆರೆಯಲ್ಲಿ ಪತ್ತೆಯಾದ ಹುಲಿ ಶವ.

ಸಿದ್ದಾಪುರ, ಏ.22–ಗಣಗೂರು ಗಸ್ತಿನ ಅರಣ್ಯ ಪ್ರದೇಶದ ಕೆರೆಯೊಂದರಲ್ಲಿ ಹುಲಿ ಶವ ಪತ್ತೆಯಾಗಿದ್ದು, ಬೇರೊಂದು ಕಾಡುಪ್ರಾಣಿಯೊಂದಿಗೆ ಕಾದಾಟ ನಡೆಸಿ ಮೃತಪಟ್ಟಿದೆ.

ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶದ ಆನೆಚೌಕೂರು ವನ್ಯಜೀವಿ ವಲಯದ ಗಣಗೂರು ಗಸ್ತಿನ ಅರಣ್ಯ ಪ್ರದೇಶದ ಕೆರೆಯಲ್ಲಿ ಸುಮಾರು 6–7 ವರ್ಷದ ಗಂಡು ಹುಲಿಯ ಶವ ಸಿಕ್ಕಿದ್ದು, ಬೇರೊಂದು ಕಾಡುಪ್ರಾಣಿಯೊಂದಿಗೆ ಕಾದಾಟ ನಡೆಸಿ ಮೃತಪಟ್ಟಿದೆ ಎಂದು ಅರಣ್ಯಾಧಿಕಾರಿಗಳು ತಿಳಿಸಿದ್ದಾರೆ.

ವಿರಾಜಪೇಟೆ ಉಪ ಅರಣ್ಯ ಸಂರಕ್ಷಣಾಧಿಕಾರಿ ಎನ್.ಹೆಚ್.ಜಗನಾಥ್, ವನ್ಯಜೀವಿ ಉಪವಿಭಾಗದ ಸಹಾಯಕ ಅರಣ್ಯ ಸಂಕರಕ್ಷಣಾಧಿಕಾರಿ ಡಿ.ಎಸ್.ದಯಾನಂದ್, ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶದ ವನ್ಯಜೀವಿ ವೈದ್ಯಾಧಿಕಾರಿ ರಮೇಶ, ಬಾಳೆಲೆ ಪಶುವೈದ್ಯಾಧಿಕಾರಿ ಭವಿಷ್ಯ ಕುಮಾರ್, ರಾಷ್ಟ್ರೀಯ ಹುಲಿ ಪ್ರಾಧಿಕಾರದ ನಾಮ ನಿರ್ದೇಶನ ಸದಸ್ಯ ಬೋಸ್ ಮಾದಪ್ಪ, ಮುಖ್ಯ ವನ್ಯಜೀವಿ ಪರಿಪಾಲಕರ ನಾಮನಿರ್ದೇಶಿತ ತಮ್ಮಯ್ಯ, ಗ್ರಾಪಂ ಸದಸ್ಯ ನವೀನ್, ವಲಯ ಅರಣ್ಯಾಧಿಕಾರಿ ದೇವರಾಜು ಭೇಟಿ ನೀಡಿ, ಪರಿಶೀಲಿಸಿದರು. ಹುಲಿಯ ಮರಣೋತ್ತರ ಪರೀಕ್ಷೆ ನಡೆಸಿ, ಅಂತ್ಯಸಂಸ್ಕಾರ ನಡೆಸಲಾಯಿತು.

ಬೀದಿನಾಯಿ ದಾಳಿಗೆ ಜಿಂಕೆ ಬಲಿ

ಸಿದ್ದಾಪುರ, ಏ.22– ವಿರಾಜಪೇಟೆ ತಾಲೂಕಿನ ಚೆನ್ನಂಗಿ ಶಾಖೆಯ ಅರಣ್ಯದಂಚಿನ ಚೆನ್ನಯ್ಯನಕೋಟೆ ಗ್ರಾಮದ ಕಾಫಿ ತೋಟವೊಂದರಲ್ಲಿ ಜಿಂಕೆಯ ಮೇಲೆ ಬೀದಿ ನಾಯಿಗಳು ದಾಳಿ ನಡೆಸಿ, ಕೊಂದುಹಾಕಿವೆ.

ಕಾಡಿನಿಂದ ಆಹಾರ ಅರಸಿ ಬಂದು ಜಂಶೀ ಎಂಬುವರ ಮನೆಯ ಸಮೀಪ ಕಾಣಿಕೊಂಡ ಜಿಂಕೆಯ ಮೇಲೆ ಬೀದಿ ನಾಯಿಗಳ ಹಿಂಡು ದಾಳಿ ನಡೆಸಿ, ಗಂಭೀರವಾಗಿ ಗಾಯಗೊಳಿಸಿತ್ತು. ನಂತರ ಸ್ಥಳೀಯರು ನಾಯಿಗಳನ್ನು ಓಡಿಸಿದ್ದಾರೆ. ರಕ್ತಸ್ರಾವದಿಂದ ಜಿಂಕೆ ಮೃತಪಟ್ಟಿದೆ.

ಉಪ ವಲಯ ಅರಣ್ಯಾಧಿಕಾರಿ ಶ್ರೀನಿವಾಸ್, ಆರ್‌ಆರ್‌ಟಿ ಹಾಗೂ ಸಿಬ್ಬಂದಿಗಳಾದ ಶಂಕರ, ಮುತ್ತ, ಹರಿಪ್ರಸಾದ್, ಭರತ್, ರಂಜಿತ್, ಸಚಿನ್ ಸ್ಥಳ ಪರಿಶೀಲನೆ ನಡೆಸಿದರು. ಬಳಿಕ ಪಶುವೈದ್ಯ ನವೀನ್ ಜಿಂಕೆಯ ಮರಣೋತ್ತರ ಪರೀಕ್ಷೆ ನಡೆಸಿದರು.



ಚೆನ್ನಯ್ಯನಕೋಟೆ ಕಾಫಿ ತೋಟವೊಂದರಲ್ಲಿ ಜಿಂಕೆಯ ಮೇಲೆ ಬೀದಿ ನಾಯಿಗಳು ದಾಳಿ ನಡೆಸಿ, ಕೊಂದು ಹಾಕಿರುವುದು.

ಕೆ.ಆರ್.ಪೇಟೆ ತಾಲೂಕಿನ ವಿವಿಧೆಡೆ ಸ್ಟಾರ್‌ಚಂದ್ರು ಅಬ್ಬರದ ಪ್ರಚಾರ



ಕೆ,ಆರ್, ಪೇಟೆ ತಾಲೂಕಿನ ವಿವಿಧೆಡೆ ಮಂಡ್ಯ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ವೆಂಕಟರಮಣೇಗೌಡ (ಸ್ಟಾರ್ ಚಂದ್ರು) ಅವರು ರೋಡ್ ಶೋ ಮೂಲಕ ಮತಯಾಚನೆ ಮಾಡಿದರು.

ಕೆ.ಆರ್.ಪೇಟೆ,ಏ.22– ತಾಲೂಕಿನ ಸಂತೇಬಾಚಹಳ್ಳಿ ಹೋಬಳಿಯ ಅಘಾಲಯ, ಭಾರತೀಪುರ ಕ್ರಾಸ್, ರಂಗನಾಥಪುರ ಕ್ರಾಸ್, ಸಂತೇಬಾಚಹಳ್ಳಿ ಗ್ರಾಮ ಪಂಚಾಯಿತಿ ಕೇಂದ್ರಗಳಲ್ಲಿ ಮಂಡ್ಯ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ವೆಂಕಟರಮಣೇಗೌಡ (ಸ್ಟಾರ್ ಚಂದ್ರು) ಅವರು ರೋಡ್ ಶೋ ಮೂಲಕ ಬಿರುಸಿನ ಮತಯಾಚನೆ ಮಾಡಿದರು.

ಈ ವೇಳೆ ಮಾತನಾಡಿದ ಅವರು, ಮಂಡ್ಯ ಜಿಲ್ಲೆಯ ಮನೆ ಮಗನಾಗಿರುವ ನನ್ನನ್ನು ಗೆಲ್ಲಿಸುವ ಮೂಲಕ ಜಿಲ್ಲೆಯ ಸ್ವಾಭಿಮಾನವನ್ನು ಎತ್ತಿ ಹಿಡಿಯಬೇಕು. ನನ್ನನ್ನು ಗೆಲ್ಲಿಸಿದರೆ ಅರ್ಧಕ್ಕೆ ನಿಂತಿರುವ ಕೆ.ಆರ್.ಪೇಟೆ ತಾಲೂಕಿನ ಸಂತೇಬಾಚಹಳ್ಳಿ ಏತ ನೀರಾವರಿ ಕಾಮಗಾರಿಯನ್ನು ಪೂರ್ಣಗೊಳಿಸಿ, ಎಲ್ಲಾ ಕೆರೆಗಳಿಗೂ ನೀರು ತುಂಬಿಸಲು ಶ್ರಮಿಸುತ್ತೇನೆ. ಅಘಲಯ ಗ್ರಾಮದಲ್ಲಿ ಅಪೂರ್ಣಗೊಂಡಿರುವ ಸಮುದಾಯ ಭವನವನ್ನು ಪೂರ್ಣಗೊಳಿಸಿ ಉದ್ಘಾಟನೆ ಮಾಡಿಸಲು ಪ್ರಥಮ ಆಧ್ಯತೆ ನೀಡುತ್ತೇನೆ. ಜೊತೆಗೆ ಕೆ.ಆರ್.ಪೇಟೆ ಪಟ್ಟಣಕ್ಕೆ ರೈಲು ಮಾರ್ಗವನ್ನು ತಂದು ಕೊಡುವ ಮೂಲಕ ತಾಲೂಕಿನ ಸಮಗ್ರ ಅಭಿವೃದ್ಧಿಗೆ ಕೈಜೋಡಿಸುತ್ತೇನೆ. ಕೆ.ಆರ್.ಪೇಟೆ ಕ್ಷೇತ್ರದಲ್ಲಿ ಶಾಸಕರಿಲ್ಲ ಎಂಬ ಕೊರಗನ್ನು ದೂರ ಮಾಡಿ, ಸಂಸದನಾಗಿ ಹಾಗೂ ಶಾಸಕನಾಗಿಯೂ ತಾಲೂಕಿನ ಸಮಗ್ರ ಅಭಿವೃದ್ಧಿಗೆ ಕೆಲಸ ಮಾಡುತ್ತೇನೆ. ಕಾರ್ಯಕರ್ತರ ನೋವು ನಲಿವುಗಳಿಗೆ ಧ್ವನಿಯಾಗುತ್ತೇನೆ ಎಂದು ಭರವಸೆ ನೀಡಿದರು.

ಮಾಜಿ ಶಾಸಕ ಕೆ.ಬಿ.ಚಂದ್ರಶೇಖರ್ ಮಾತನಾಡಿ, ಕಳೆದ ಭಾರಿಯೂ ಸ್ಥಳೀಯ ಅಭ್ಯರ್ಥಿ ಸುಮಲತಾ ಅವರನ್ನು ಗೆಲ್ಲಿಸುವ ಮೂಲಕ ಜಿಲ್ಲೆಯ ಜನತೆಗೆ ಮಂಡ್ಯದ ಸ್ವಾಭಿಮಾನವನ್ನು ಉಳಿಸಿದ್ದೀರಿ, ಅದೇ ಮಾದರಿಯಲ್ಲಿ ಈ ಭಾರಿಯೂ ಸ್ಥಳೀಯ ಅಭ್ಯರ್ಥಿ ಸ್ಟಾರ್ ಚಂದ್ರು ಅವರನ್ನು ಗೆಲ್ಲಿಸಬೇಕು ಎಂದು ಮನವಿ ಮಾಡಿದರು.

ಈ ಸಂದರ್ಭದಲ್ಲಿ ಮೈಷುಗರ್ ಅಧ್ಯಕ್ಷರು ಹಾಗೂ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಸಿ.ಡಿ.ಗಂಗಾಧರ್, ಮಾಜಿ ಶಾಸಕ ಬಿ.ಪ್ರಕಾಶ್, ತಾಲೂಕು ಪಿ.ಎಲ್.ಡಿ.ಬ್ಯಾಂಕ್ ಮಾಜಿ ಅಧ್ಯಕ್ಷ ಅಘಲಯ ಎ.ಎಸ್.ರಮೇಶ್, ಕಾಂಗ್ರೆಸ್ ಮುಖಂಡರಾದ ಬಿ.ಎಲ್.ದೇವರಾಜು, ವಿಜಯ್ ರಾಮೇಗೌಡ, ಎಂ.ಡಿ.ಕೃಷ್ಣಮೂರ್ತಿ, ಅಘಲಯ ಮಂಜುನಾಥ್, ಮಹಡಿ ಮಂಜಣ್ಣ, ಕೊಡಗಹಳ್ಳಿ ವಿ.ಮಂಜೇಗೌಡ, ಎಲ್‌ಐಸಿ ಜಗದೀಶ್, ವನಿತಾ ಶಂಕರೇಗೌಡ, ಸೇರಿದಂತೆ ಸಾವಿರಾರು ಕಾರ್ಯಕರ್ತರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

ಐದು ಲಕ್ಷ ಮತಗಳ ಅಂತರದಲ್ಲಿ ಗೆಲ್ಲುತ್ತೇನೆ

ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ವಿಶ್ವಾಸ

ನಾಗಮಂಗಲ,ಏ.22– ಮಂಡ್ಯ ಲೋಕಸಭಾ ಕ್ಷೇತ್ರ ವ್ಯಾಪ್ತಿಯ 8 ತಾಲೂಕುಗಳಲ್ಲಿ ಜನರು ನನ್ನ ಮೇಲೆಟ್ಟಿರುವ ಅಭಿಮಾನವನ್ನು ನೋಡಿದರೆ ಸುಮಾರು 5 ಲಕ್ಷ ಮತಗಳ ಅಂತರದಲ್ಲಿ ಗೆಲ್ಲುವ ವಿಶ್ವಾಸ ನನಗಿದೆ ಎಂದು ಮಾಜಿ ಮುಖ್ಯಮಂತ್ರಿ ಹಾಗೂ ಮಂಡ್ಯ ಲೋಕಸಭಾ ಕ್ಷೇತ್ರದ ಎನ್‌ಡಿಎ ಮೈತ್ರಿ ಅಭ್ಯರ್ಥಿ ಹೆಚ್.ಡಿ.ಕುಮಾರಸ್ವಾಮಿ ವಿಶ್ವಾಸ ವ್ಯಕ್ತಪಡಿಸಿದರು.

ಸೋಮವಾರ ಪಟ್ಟಣದ ಬಿ.ಎಂ. ರಸ್ತೆಯಲ್ಲಿನ ಸಪ್ತಗಿರಿ ಪೆಟ್ರೋಲ್ ಬಂಕ್ ಸಮೀಪದ ಆವರಣದಲ್ಲಿ ಆಯೋಜಿಸಲಾಗಿದ್ದ ಬಹಿರಂಗ ಪ್ರಚಾರ ಸಭೆಯಲ್ಲಿ ಮಾತನಾಡಿದ ಅವರು, ಪೂರ್ವದಲ್ಲಿ ಸೂರ್ಯ ಹುಟ್ಟುವುದು ಎಷ್ಟು ಸತ್ಯವೋ ಕುಮಾರಸ್ವಾಮಿ ಸೋಲುವುದು ಅಷ್ಟೇ ಮುಖ್ಯ ಎಂದು ಹೇಳುತ್ತಿರುವ ಸಿಎಂ ಸಿದ್ದರಾಮಯ್ಯ ಅವರ ಸವಾಲನ್ನು ಸ್ವೀಕರಿಸಿ ಹೇಳುತ್ತಿದ್ದೇನೆ. 2019ರಲ್ಲಿ ಕುಮಾರಸ್ವಾಮಿ ನಮ್ಮಪ್ಪನಾಣೆ ಮುಖ್ಯಮಂತ್ರಿಯಾಗಲ್ಲ ಎಂದು ಹೇಳಿದ್ದರು. ಆದರೆ ನಾನು ಮುಖ್ಯಮಂತ್ರಿಯಾಗಲಿಲ್ಲವೇ?. ಮೇಕೆದಾಟು ಯೋಜನೆಯ ಅನುಷ್ಠಾನಕ್ಕಾಗಿ ಕೇಂದ್ರ ಸರ್ಕಾರದ ಅನುಮೋದನೆಯ ಅಪದಾನೆ ಮಾಡುತ್ತಿರುವ ನೀವು ತಮಿಳುನಾಡಿನ ಮುಖ್ಯಮಂತ್ರಿಯ ಒಪ್ಪಿಗೆಯನ್ನು ಮೊದಲು ಪಡೆಯಿರಿ. ನಂತರ ಕೇವಲ ಎರಡು ನಿಮಿಷದಲ್ಲಿ ಕೇಂದ್ರ ಸರ್ಕಾರದ ಅನುಮತಿಯನ್ನು ಕೊಡಿಸ್ತೀನಿ ಎಂದು ಸಿಎಂ ಮತ್ತು ಡಿಸಿಎಂಗೆ ಸವಾಲು ಹಾಕಿದರು.

ನನ್ನ ಪೂರ್ವಜನ್ಮದ ಕರ್ಮ: ವಿಶ್ವಾಸ ಹಾಗೂ ಮಾನವೀಯತೆಯ ಮೌಲ್ಯವೇ ತಿಳಿಯದಂತವರ ಜೊತೆಗಿನ ಹಿಂದಿನ ರಾಜಕೀಯ ಒಡನಾಟ ನನ್ನ ಪೂರ್ವಜನ್ಮದ ಕರ್ಮ. ಇವರನ್ನು ರಾಜಕೀಯವಾಗಿ ಬೆಳೆಯಲು ಹಗಲು–ರಾತ್ರಿಯೆನ್ನದೆ ನಾವು ಪಟ್ಟಿರುವ ಶ್ರಮ ಈ ಜಿಲ್ಲೆಯ ಜನತೆ ಮರೆತಿಲ್ಲ. ನನ್ನ ಹೃದಯ ಚಿಕಿತ್ಸೆಯ ಬಗ್ಗೆ ಮಾತ್ರವಲ್ಲದೆ, ಈ ಜಿಲ್ಲೆಗೆ ನನ್ನ ಕೊಡುಗೆ ಬಗ್ಗೆ ಕೀಳು ಮಟ್ಟದ ಪದ ಪ್ರಯೋಗ ಮಾಡುವ ಇವರಿಗೆ ಹೇಗೆ ಪ್ರಾಯಶ್ಚಿತ್ತವಾಗಬೇಕೆಂದು ಕಾಲಭೈರವೇಶ್ವರನಿಗೆ ಬಿಡುತ್ತೇನೆ ಎಂದು ಹೆಸರೇಳದೆ ಸಚಿವ ಚಲುವರಾಯಸ್ವಾಮಿ ಮತ್ತು ಶಾಸಕ ರವೀಶ್‌ಬಾಬು ಬಂಡಿಸಿದ್ದೇಗೌಡ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.



ಹಾಲಲ್ಲಾದರೂ ಹಾಕಿ ಅಥವಾ ನೀರಲ್ಲಾದರೂ ಹಾಕಿ: ಮಂಡ್ಯ ಲೋಕಸಭಾ ಕ್ಷೇತ್ರದ ಅಭ್ಯರ್ಥಿಯಾಗಬೇಕೆಂದು ನಾನು ಉದ್ದೇಶಪೂರ್ವಕವಾಗಿ ಬಂದವನಲ್ಲ. ಇದೇ ಜಿಲ್ಲೆಯರನ್ನೇ ಅಭ್ಯರ್ಥಿಯನ್ನಾಗಿಸಲು ಇನ್ನಿಲ್ಲದ ಪ್ರಯತ್ನ ಮಾಡಿದ್ದೇವೆ. ಆದರೆ ಈ ಕ್ಷೇತ್ರದ ಹಾಲಿ ಮತ್ತು ಮಾಜಿ ಶಾಸಕರು ಮಾತ್ರವಲ್ಲದೆ ಕಾರ್ಯಕರ್ತರ ಒಕ್ಕೊರಲ ಮನವಿಯನ್ನು ಪುರಸ್ಕರಿಸುವ ಮುನ್ನ ಈ ಚುನಾವಣೆಯಲ್ಲಿ ನಮ್ಮ ಪಕ್ಷಕ್ಕೆ ಹಿನ್ನಡೆಯಾದರೆ ಪಕ್ಷಕ್ಕೆ ತೊಂದರೆಯಾಗಬಹುದು ಎಂಬ ಕಾರಣಕ್ಕೆ ಪಕ್ಷದ ಉಳಿವಿಗಾಗಿ ಇಲ್ಲಿ ನಿಮ್ಮೆಲ್ಲರ ಒತ್ತಾಯಕ್ಕೆ ಮಣಿದು ಚುನಾವಣೆಗೆ ನಿಂತಿದ್ದೀನಿ. ನಾನು ಮಾಡಿರುವ ಅಳಿಲು ಸೇವೆಯ ಜೊತೆಗೆ ಮುಂದಿನ ದಿನಗಳಲ್ಲಿ ಕ್ಷೇತ್ರದ ಪ್ರಗತಿಗೆ ಶ್ರಮಿಸುವ ನನ್ನ ಭರವಸೆಯ ಮೇಲೆ ನಂಬಿಕೆ ಇಡುತ್ತೀರಿ ಎಂದು ನಂಬಿದ್ದೇನೆ. ಇಷ್ಟರ ಮೇಲೆ ಹಾಲಲ್ಲಾದರೂ ಹಾಕಿ ಅಥವಾ ನೀರಲ್ಲಾದರೂ ಹಾಕಿ ಎಂದು ಭಾವುಕರಾಗಿ ಮನವಿ ಮಾಡಿದರು.

ಕಾವೇರಿಗಾಗಿ ಕುಮಾರಣ್ಣ: ಸಂಸದ ಪ್ರತಾಪ್ ಸಿಂಹ ಮಾತನಾಡಿ, ವಿಶ್ವಮಟ್ಟದಲ್ಲಿ ನಮ್ಮ ಭಾರತದ ಹೆಗ್ಗುರುತು ಮೂಡಿಸುವ ಮೂಲಕ ಮೂರನೇ ಬಾರಿಗೆ ಈ ದೇಶ ಕಾಯಲು ನರೇಂದ್ರ ಮೋದಿಜೀ ಹೇಗೆ ಮುಖ್ಯವೂ ಅದೇ ರೀತಿ ಕಳೆದ ಹಲವಾರು ವರ್ಷಗಳಿಂದ ನೆನೆಗುದಿಗೆ ಬಿದ್ದಿರುವ ಕಾವೇರಿ ನೀರು ಹಂಚಿಕೆ ಪ್ರಕರಣದಲ್ಲಿ ರಾಜ್ಯಕ್ಕೆ ಸಿಗಬೇಕಿರುವ ನ್ಯಾಯ ಒದಗಿಸುವ ಮೂಲಕ ಕಾವೇರಿಯ ಕಾವಲಿಗಾಗಿ ಕುಮಾರಣ್ಣನ ಅವಶ್ಯವಿದೆ. ಇಂತಹ ಅವಕಾಶದ ಸದುಪಯೋಗ ಈ ಮಂಡ್ಯ ಲೋಕಸಭಾ ಕ್ಷೇತ್ರದ ಮತದಾರರ ಮೇಲಿದೆ. ರೈತರ ಸರ್ವಾಂಗೀಣ ಅಭಿವೃದ್ಧಿಗಾಗಿ ಸಂಕಲ್ಪ ಮಾಡಿರುವ ದೊಡ್ಡಗೌಡರ ಮಗನಾದ ಕುಮಾರಣ್ಣನ ಗೆಲುವು ಕೇವಲ ಈ ಜಿಲ್ಲೆಗೆ ಮಾತ್ರವಲ್ಲದೆ ಇಡೀ ರಾಜ್ಯ ಬಯಸುತ್ತಿದೆ. ಇಂಥ ಅವಕಾಶ ಕಳೆದುಕೊಳ್ಳದೆ ಮತ ನೀಡಬೇಕಾಗಿ ಮನವಿ ಮಾಡಿದರು. ಇದೇ ಸಂದರ್ಭ ಮಾಜಿ ಶಾಸಕರಾದ ಕೆ.ಸುರೇಶ್‌ಗೌಡ, ಕೆ.ಟಿ.ಶ್ರೀಕಂಠೇಗೌಡ, ಹಿರಿಯ ಮುಖಂಡ ಡಾ.ರವೀಂದ್ರ, ರಾಜ್ಯ ಪಡಿತರ ವಿತರಕರ ಸಂಘದ ರಾಜ್ಯಾಧ್ಯಕ್ಷ ಟಿ.ಕೃಷ್ಣಪ್ಪ, ರಾಜ್ಯ ಒಕ್ಕಲಿಗರ ಸಂಘದ ನಿರ್ದೇಶಕ ನಲ್ಲಿಗೆರೆ ಬಾಲು ಹಾಗೂ ಜೆಡಿಎಸ್ ಮತ್ತು ಬಿಜೆಪಿ ಪಕ್ಷಗಳ ಮುಖಂಡರು ಉಪಸ್ಥಿತರಿದ್ದು, ಇಪ್ಪತ್ತು ಸಾವಿರಕ್ಕೂ ಹೆಚ್ಚು ಮತದಾರರು ಭಾಗವಹಿಸಿದ್ದರು.

ಸಂವಿಧಾನ ಬದಲಾವಣೆ ಅಧಿಕಾರ ಯಾರಿಗೂ ಇಲ್ಲ

• ಕೇಂದ್ರ ಸಚಿವ ಎ.ನಾರಾಯಣಸ್ವಾಮಿ ಹೇಳಿಕೆ • ಜಿಲ್ಲಾ ಮಾದಿಗ ಸಮುದಾಯದ ಸಮಾವೇಶ

ಚಾಮರಾಜನಗರ, ಏ.22–ಸಂವಿಧಾನ ಬದಲಾವಣೆ ಮಾಡುವ ಹಕ್ಕು ಅಥವಾ ಅಧಿಕಾರ ಯಾವುದೇ ರಾಜಕೀಯ ಪಕ್ಷಗಳಿಗೆ ಇಲ್ಲ ಎಂದು ಕೇಂದ್ರ ಸಚಿವ ಎ.ನಾರಾಯಣಸ್ವಾಮಿ ಹೇಳಿದರು.

ನಗರದ ಶ್ರೀ ಭ್ರಮರಾಂಬ ಮಲ್ಲಿಕಾರ್ಜುನ ಕಲ್ಯಾಣ ಮಂಟಪದಲ್ಲಿ ನಡೆದ ಬಿಜೆಪಿ ಮತ್ತು ಜೆಡಿಎಸ್‌ನ ಜಿಲ್ಲಾ ಮಾದಿಗ ಸಮುದಾಯದ ಮುಖಂಡರು ಹಾಗೂ ಕಾರ್ಯಕರ್ತರ ಸಮಾವೇಶ ಉದ್ಘಾಟಿಸಿ ಮಾತನಾಡಿದ ಅವರು, ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಕಾಂಗ್ರೆಸ್ ನಾಯಕರು ಮೋದಿ ಮತ್ತೆ ಪ್ರಧಾನಿಯಾದರೆ ಸಂವಿಧಾನ, ಪ್ರಜಾಪ್ರಭುತ್ವ ನಾಶ ಮಾಡುತ್ತಾರೆ ಎಂದು ಸುಳ್ಳು ಹೇಳುವ ಮೂಲಕ ಜನತೆಯನ್ನು ದಿಕ್ಕುತಪ್ಪಿಸುವ ಕೆಲಸ ಮಾಡುತ್ತಿದ್ದಾರೆ. ಯಾವುದೇ ರಾಜಕೀಯ ಪಕ್ಷಗಳಿಗೆ ಸಂವಿಧಾನ ಬದಲಾಯಿಸುವ ಅಧಿಕಾರವಿಲ್ಲ ಎಂದು ತಿಳಿಸಿದರು.

ಒಳ ಮೀಸಲಾತಿ ಏಕೆ ಕೊಡಬೇಕು ಎಂದು ಹೇಳುವ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್‌ಗೆ ವೋಟ್ ಹಾಕಬೇಕಾ? ಒಳ ಮೀಸಲಾತಿ ಕೊಟ್ಟ ಬಿಜೆಪಿಗೆ ಮತ ಹಾಕುವ ಮೂಲಕ ಬಿಜೆಪಿ ಅಭ್ಯರ್ಥಿ ಎಸ್.ಬಾಲರಾಜು ಅವರನ್ನು ಅತ್ಯಧಿಕ ಮತಗಳಿಂದ ಗೆಲ್ಲಿಸುವ ಮೂಲಕ ನರೇಂದ್ರ ಮೋದಿ ಮತ್ತೆ ಪ್ರಧಾನಿ ಮಾಡುವ ಕೆಲಸ ಆಗಬೇಕು. ಕಾಂಗ್ರೆಸ್ ಮೂವತ್ತು ವರ್ಷವಾದರೂ ಒಳ ಮೀಸಲಾತಿ ನೀಡಲ್ಲಿಲ್ಲ. ಕಾಂಗ್ರೆಸ್ ದಲಿತರ ಬಗ್ಗೆ ಯಾವುದೇ ಕಾಳಜಿ ವಹಿಸಿಲ್ಲ. ಎರಡು ಬಾರಿ ಮುಖ್ಯಮಂತ್ರಿಯಾದ ಸಿದ್ದರಾಮಯ್ಯ ಒಳ ಮೀಸಲಾತಿ ಬಗ್ಗೆ ಕೇಂದ್ರ ಸರ್ಕಾರದತ್ತ ಬೆರಳು ತೋರಿಸುತ್ತಿದ್ದಾರೆ. ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನವನ್ನ ಹೆಚ್ಚಿಸುವ ಕೆಲಸ ಮಾಡಲ್ಲಿಲ್ಲ. ಆದರೂ ಕಾಂಗ್ರೆಸ್‌ಗೆ ಮತ ಬೇಕಾ ಎಂದು ಪ್ರಶ್ನಿಸಿದರು.



ಚಾಮರಾಜನಗರದ ಭ್ರಮರಾಂಬ ಮಲ್ಲಿಕಾರ್ಜುನ ಕಲ್ಯಾಣ ಮಂಟಪದಲ್ಲಿ ನಡೆದ ಬಿಜೆಪಿ ಮತ್ತು ಜೆಡಿಎಸ್‌ನ ಜಿಲ್ಲಾ ಮಾದಿಗ ಸಮುದಾಯದ ಸಮಾವೇಶವನ್ನು ಕೇಂದ್ರ ಸಚಿವ ಎ.ನಾರಾಯಣಸ್ವಾಮಿ ಉದ್ಘಾಟಿಸಿದರು.

ವಿಧಾನಪರಿಷತ್ ಮಾಜಿ ಸದಸ್ಯ ಸಿ.ರಮೇಶ್ ಮಾತನಾಡಿ, ಇದು ನೆಹರು ಕಾಂಗ್ರೆಸ್ ಅಲ್ಲ. ಸಿದ್ದರಾಮಯ್ಯ ಕಾಂಗ್ರೆಸ್ ಆಗಿದೆ. ಇವರು ಬುಡುಬುಡಿಕೆ ಸಿದ್ದರಾಮಯ್ಯ ಎಂದು ಲೇವಡಿ ಮಾಡಿದರು.

ಸಮಾವೇಶದಲ್ಲಿ ಮಾಜಿ ಸಚಿವ ಆಲ್ಕೋಡು ಹನುಮಂತಪ್ಪ, ವಿಧಾನ ಪರಿಷತ್ ಮಾಜಿ ಸದಸ್ಯ ಡಿ.ಎಸ್.ವೀರಯ್ಯ, ಕೇಂದ್ರ ಪರಿಹಾರ ಸಮಿತಿ ಮಾಜಿ ಅಧ್ಯಕ್ಷ ಎಂ.ರಾಮಚಂದ್ರ, ಬಿಜೆಪಿ ಜಿಲ್ಲಾಧ್ಯಕ್ಷ ಸಿ.ಎಸ್.ನಿರಂಜನ್ ಕುಮಾರ್, ಜಿಲ್ಲಾ ಉಪಾಧ್ಯಕ್ಷ ಅರಕಲವಾಡಿ ನಾಗೇಂದ್ರ, ಮಾಜಿ ಅಧ್ಯಕ್ಷ ಆರ್.ಸುಂದರ್, ಜಿಪಂ ಮಾಜಿ ಅಧ್ಯಕ್ಷೆ ನಾಗಶ್ರೀ ಪ್ರತಾಪ್, ಎಸ್ಸಿ ಮೋರ್ಚಾ ಜಿಲ್ಲಾಧ್ಯಕ್ಷ ಮೂಡಹಳ್ಳಿ ಮೂರ್ತಿ, ವಕೀಲ ಬೂದಿತಿಟ್ಟು ರಾಜೇಂದ್ರ, ಮುಖಂಡರಾದ ಶಿವಕುಮಾರ್, ಶಿವು, ದ್ವಾರ್ಕಿ, ಶಿವಮಲ್ಲು, ಚಿನ್ನಸ್ವಾಮಿ, ಲಿಂಗರಾಜು, ಚನ್ನಬಸಪ್ಪ, ಮಹದೇವಯ್ಯ, ರಾಚಯ್ಯ, ಹಸಗೂಲಿ ಸಿದ್ದಯ್ಯ, ವೆಂಕಟೇಶ್, ಗಣೇಶ್, ಗ್ರಾಪಂ ಮಾಜಿ ಅಧ್ಯಕ್ಷ ಅರಕಲವಾಡಿ ಮಹದೇವಯ್ಯ ಹಾಜರಿದ್ದರು.

ಬೈಕ್ ಡಿಕ್ಕಿ: 2 ವರ್ಷದ ಮಗು ಸಾವು

ಚಾಮರಾಜನಗರ, ಏ.22–ಬೈಕ್ ಡಿಕ್ಕಿ ಹೊಡೆದು ಎರಡು ವರ್ಷದ ಗಂಡು ಮಗು ಮೃತಪಟ್ಟಿದ್ದು, ಮಗುವಿನ ಅಜ್ಜಿ ಗಾಯಗೊಂಡಿರುವ ಘಟನೆ ನಗರದ ಸೋಮವಾರಪೇಟೆ ಬಳಿ ರಾತ್ರಿ ನಡೆದಿದೆ.



ಸೋಮವಾರಪೇಟೆಯ ಅಭಯ್ (2) ಮೃತಪಟ್ಟಿದ್ದು, ಅಜ್ಜಿ ಶೀಲಮ್ಮ ಗಾಯಗೊಂಡು ಆಸ್ಪತ್ರೆಗೆ ದಾಖಲಾಗಿದ್ದಾರೆ.

ಶೀಲಮ್ಮ ಮೊಮ್ಮಗ ಅಭಯ್‌ನೊಂದಿಗೆ ಸೋಮವಾರಪೇಟೆ ಬಳಿ ನಿಂತಿದ್ದರು. ಈ ವೇಳೆ ಚಾಮರಾಜನಗರದಿಂದ ಸೋಮವಾರಪೇಟೆ ಕಡೆಗೆ ಬೈಕ್‌ನಲ್ಲಿ ಬಂದ ಮಹೇಶ್ ಮತ್ತು ರಾಜೇಶ್ ಡಿಕ್ಕಿ ಹೊಡೆದಿದ್ದಾರೆ. ಪರಿಣಾಮ ಮಗು ಸ್ಥಳದಲ್ಲೇ ಮೃತಪಟ್ಟಿದ್ದು, ಅಜ್ಜಿಯ ಕಾಲಿಗೆ ಗಾಯವಾಗಿದೆ. ಬೈಕ್ ಸವಾರ ಮಹೇಶ್‌ಗೆ ಸಣ್ಣಪುಟ್ಟ ಗಾಯಗಳಾಗಿವೆ.

ಈ ಸಂಬಂಧ ಚಾಮರಾಜನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಹಿಂದೂಪರ ಸಂಘಟನೆಗಳ ಪ್ರತಿಭಟನೆ

ಚಾಮರಾಜನಗರ, ಏ.22–ಹುಬ್ಬಳ್ಳಿಯಲ್ಲಿ ವಿದ್ಯಾರ್ಥಿನಿ ನೇಹಾ ಹಿರೇಮಠ ಹತ್ಯೆ ಹಾಗೂ ಹಿಂದು ಯುವಕ ಮೇಲಿನ ಹಲ್ಲೆ ಖಂಡಿಸಿ ವಿಶ್ವ ಹಿಂದು ಪರಿಷತ್ ಹಾಗೂ ಬಜರಂಗ ದಳದ ಕಾರ್ಯಕರ್ತರು ನಗರದಲ್ಲಿ ಸೋಮವಾರ ಪ್ರತಿಭಟನೆ ನಡೆಸಿದರು.

ಚಾಮರಾಜೇಶ್ವರ ಉದ್ಯಾನ ಮುಂಭಾಗದಲ್ಲಿ ವಿಶ್ವ ಹಿಂದು ಪರಿಷತ್‌ನ ಪ್ರಾಂತ ಸೇವ ಪ್ರಮುಖ್ ರಾ.ಸತೀಶ್, ಬಜರಂಗ ದಳ ವಿಭಾಗ ಸಹ ಸಂಯೋಜಕ ಎಂ.ಎಸ್.ಪೃಥ್ವಿರಾಜ್‌ನೇತೃತ್ವದಲ್ಲಿ ಸಮಾವೇಶಗೊಂಡ ಪ್ರತಿಭಟನಾಕಾರರು, ಅಲ್ಲಿಂದ ಮೆರವಣಿಗೆ ಹೊರಟು ನಗರಸಭೆ, ಚಿಕ್ಕಂಗಡಿ ಬೀದಿ, ಅಗ್ರಹಾರ ಬೀದಿ ಮೂಲಕ ಭುವನೇಶ್ವರಿ ವೃತ್ತಕ್ಕೆ ತೆರಳಿ ಅಲ್ಲಿ ಮಾನವ ಸರಪಳಿ ರಚಿಸಿ ರಸ್ತೆತಡೆ ನಡೆಸಿದರು. ಬಳಿಕ ತಹಸೀಲ್ದಾರ್ ಬಸವರಾಜುಗೆ ಮನವಿ ಸಲ್ಲಿಸಿದರು.



ವಿಶ್ವ ಹಿಂದು ಪರಿಷತ್ ಹಾಗೂ ಬಜರಂಗ ದಳದ ಕಾರ್ಯಕರ್ತರು ತಹಸೀಲ್ದಾರ್ ಬಸವರಾಜುಗೆ ಮನವಿ ಸಲ್ಲಿಸಿದರು.

ಮಾತಿನ ಚಕಮಕಿ: ಚಾಮರಾಜೇಶ್ವರ ಉದ್ಯಾನದಿಂದ ಹೊರಟ ಪ್ರತಿಭಟನಾ ಮೆರವಣಿಗೆ ಭುವನೇಶ್ವರಿ ವೃತ್ತಕ್ಕೆ ತೆರಳುತ್ತಿದ್ದಂತೆ ಪೊಲೀಸರು ಬ್ಯಾರಿಕೇಡ್ ಹಾಕಿ ತಡೆದರು. ಈ ವೇಳೆ ಪ್ರತಿಭಟನಾಕಾರರು ಹಾಗೂ ಪೊಲೀಸರ ನಡುವೆ ಮಾತಿನ ಚಕಮಕಿ ನಡೆಯಿತು. ವಿಶ್ವ ಹಿಂದು ಪರಿಷತ್ ಪ್ರಾಂತ ಸೇವ ಪ್ರಮುಖ್ ರಾ.ಸತೀಶ್ ಮಾತನಾಡಿ, ರಾಜ್ಯದಲ್ಲಿ ಹಿಂದೂಗಳ ಮೇಲೆ ನಿರಂತರವಾಗಿ ದೌರ್ಜನ್ಯ ನಡೆಸುತ್ತಿರುವ ಅಪರಾಧಿಗಳನ್ನು ಶಿಕ್ಷಿಸಿ ನ್ಯಾಯ ದೊರಕಿಸಿ ಕಾನೂನು ಸುವ್ಯವಸ್ಥೆ ಕಾಪಾಡಬೇಕು. ರಾಜ್ಯ ಸರ್ಕಾರ ಒಂದು ಕೋಮಿನ ಪಕ್ಷವೆಂಬಂತೆ ವರ್ತಿಸಿ ಬಹುಸಂಖ್ಯಾತ ಹಿಂದೂಗಳ ಮೇಲೆ ದೌರ್ಜನ್ಯ ನಡೆಯುತ್ತಿದ್ದರೂ ಸುಮ್ಮನಿರುವುದು ಸಂವಿಧಾನ ವಿರೋಧಿ ಎಂದರು.

ಪ್ರತಿಭಟನೆಯಲ್ಲಿ ಬಜರಂಗ ದಳದ ಜಿಲ್ಲಾ ಸಹ ಸಂಯೋಜಕ ರಮೇಶ್ ನಾಯಕ, ವಿಶ್ವ ಹಿಂದು ಪರಿಷತ್ ಜಿಲ್ಲಾ ಕಾರ್ಯದರ್ಶಿ ಮಧು, ಸಹ ಕಾರ್ಯದರ್ಶಿ ಶ್ರೀನಿವಾಸ ಹಾಗೂ ಬಜರಂಗ ದಳದ ಕಾರ್ಯಕರ್ತರು ಭಾಗವಹಿಸಿದ್ದರು.

ಯಳಂದೂರಲ್ಲಿ ಸುನೀಲ್ ಬೋಸ್ ರೋಡ್ ಶೋ



ಯಳಂದೂರು: ಪಟ್ಟಣದ ಪ್ರಮುಖ ಬೀದಿ ಹಾಗೂ ಹೊಂಗನೂರು, ಸಂತೆಮರಹಳ್ಳಿ ಸೇರಿದಂತೆ ವಿವಿಧ ಗ್ರಾಮಗಳಲ್ಲಿ ಕಾಂಗ್ರೆಸ್ ಅಭ್ಯರ್ಥಿ ಸುನೀಲ್ ಬೋಸ್ ರೋಡ್ ಶೋ ನಡೆಸಿದರು.

ಇವರಿಗೆ ಶಾಸಕ ಎ.ಆರ್.ಕೃಷ್ಣಮೂರ್ತಿ, ಮಾಜಿ ಶಾಸಕರಾದ ಎಸ್.ಜಯಣ್ಣ, ಜಿ.ಎನ್.ನಂಜುಂಡಸ್ವಾಮಿ, ಪಕ್ಷದ ಮುಖಂಡರು ಸಾಥ್ ನೀಡಿದರು. ನಂತರ ಪಟ್ಟಣದ ಸರ್ಕಾರಿ ಪಪೂ ಕಾಲೇಜಿನ ಮೈದಾನದಲ್ಲಿ ನಡೆದ ಪ್ರಚಾರ ಸಭೆಯಲ್ಲಿ ಸುನೀಲ್ ಬೋಸ್ ಮಾತನಾಡಿದರು. ಜಿಪಂ ಮಾಜಿ ಉಪಾಧ್ಯಕ್ಷ ಜೆ.ಯೋಗೇಶ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಚ್.ವಿ. ಚಂದ್ರು, ಮುಖಂಡರಾದ ಕಿನಕಹಳ್ಳಿ ರಾಚಯ್ಯ, ಡಿ.ಎನ್. ನಟರಾಜು, ವಡಗೆರೆ ದಾಸ್, ಮಹದೇವಯ್ಯ, ವೈ.ಕೆ.ಮೋಳೆ ನಾಗರಾಜು, ಮದ್ದೂರು ಶಿವಪ್ರಸಾದ್ ಇದ್ದರು.

ಮೈಸೂರು–ಕೊಡಗಿನ ಪ್ರವಾಸೋದ್ಯಮ, ಪಾರಂಪರಿಕತೆ ರಕ್ಷಣೆ, ಸ್ವಚ್ಛತೆ ನನ್ನ ಆದ್ಯತೆ

ಮೈಸೂರಿನ ವ್ಯಾಪಾರಸ್ಥರು, ಉದ್ದಿಮೆದಾರರೊಂದಿಗಿನ ಸಂವಾದದಲ್ಲಿ ಯದುವೀರ್ ಮುಕ್ತ ಮಾತು

ಮೈಸೂರು, ಏ.22(ಎಂಕೆ)– ಮೈಸೂರು ಮತ್ತು ಕೊಡಗು ಜಿಲ್ಲೆಯ ಪ್ರವಾಸೋದ್ಯಮ, ಪಾರಂಪರಿಕ ಕಟ್ಟಡಗಳ ಸಂರಕ್ಷಣೆ ಹಾಗೂ ಸ್ವಚ್ಛತೆಯೇ ನನ್ನ ಮೊದಲ ಆದ್ಯತೆಯಾಗಿದೆ ಎಂದು ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಹೇಳಿದರು.

ಮೈಸೂರಿನ ವಿಶ್ವೇಶ್ವರನಗರದಲ್ಲಿರುವ ಮೈಸೂರು ಬಿಲ್ಡರ್ಸ್ ಚಾರಿಟೆಬಲ್ ಟ್ರಸ್ಟ್(ಎಂಬಿಸಿಟಿ) ಸಭಾಂಗಣದಲ್ಲಿ ಸೋಮವಾರ ಆಯೋಜಿಸಿದ್ದ ಮೈಸೂರಿನ ವ್ಯಾಪಾರಸ್ಥರು ಮತ್ತು ಉದ್ದಿಮೆದಾರರೊಂದಿಗಿನ ಸಂವಾದ ಕಾರ್ಯಕ್ರಮದಲ್ಲಿ ತಾವು ಸಂಸದರಾಗಿ ಆಯ್ಕೆಯಾದರೆ ತಮ್ಮ ಮೊದಲ ಆದ್ಯತೆಗಳಾವುವು ಎಂಬ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, ಮೈಸೂರು ಮತ್ತು ಕೊಡಗು ಜಿಲ್ಲೆಯ ಪ್ರವಾಸೋದ್ಯಮ, ಪಾರಂಪರಿಕ ಕಟ್ಟಡಗಳ ಸಂರಕ್ಷಣೆ ಹಾಗೂ ಸ್ವಚ್ಛತೆಯೇ ನನ್ನ ಮೊದಲ ಆದ್ಯತೆಯಾಗಿದೆ. ನಂತರ ಉಳಿದ ಕಾರ್ಯಕ್ಷೇತ್ರಗಳತ್ತ ಗಮನ ಹರಿಸುತ್ತೇನೆ ಎಂದರು.

ಬೆಂಗಳೂರಿನಂತೆಯೇ ಮೈಸೂರಿನ ಅಭಿವೃದ್ಧಿ ಕುರಿತು ಪ್ರತಿಕ್ರಿಯಿಸಿ, ಬೆಂಗಳೂರಂತೆ ಮೈಸೂರು ಆಗಬಾರದು. ಮೈಸೂರು ಮೈಸೂರಿನಂತೆಯೇ ಇರಬೇಕು ಎಂಬುದು ಬಹುತೇಕರ ಅಭಿಪ್ರಾಯವಾಗಿದೆ. ಈ ನಿಟ್ಟಿನಲ್ಲಿ ಎರಡೂ ಜಿಲ್ಲೆಗಳ ಪಾರಂಪರಿಕ ಹಾಗೂ ಪ್ರಕೃತಿಯ ಕಾಳಜಿ ಇಟ್ಟುಕೊಂಡು ಅಭಿವೃದ್ಧಿ ಮಾಡುವುದು ಸೂಕ್ತವೆಂದು ಭಾವಿಸಿದ್ದೇನೆ. ಕೊಡಗು ಜಿಲ್ಲೆಯಲ್ಲಿಯೂ ಪಾರಂಪರಿಕ ಕಟ್ಟಡಗಳಿವೆ. ಮುಖ್ಯವಾಗಿ ಕೊಡಗಿನ ಜನತೆ ಪ್ರಕೃತಿ ಸಂರಕ್ಷಣೆಗೆ ಆದ್ಯತೆ ನೀಡುವುದರಿಂದ ಅದರಂತೆ ಮುಂದುವರೆಯುವುದು ಸೂಕ್ತವಾಗಿದೆ ಎಂದು ತಿಳಿಸಿದರು.



ಮೈಸೂರು ಬಿಲ್ಡರ್ಸ್ ಚಾರಿಟೆಬಲ್ ಟ್ರಸ್ಟ್(ಎಂಬಿಸಿಟಿ) ಸಭಾಂಗಣದಲ್ಲಿ ಸೋಮವಾರ ಆಯೋಜಿಸಿದ್ದ ಮೈಸೂರಿನ ವ್ಯಾಪಾರಸ್ಥರು ಮತ್ತು ಉದ್ದಿಮೆದಾರರೊಂದಿಗಿನ ಸಂವಾದ ಕಾರ್ಯಕ್ರಮವನ್ನು ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಯದುವೀರ್ ಉದ್ಘಾಟಿಸಿದರು. ಶಾಸಕ ಟಿ.ಎಸ್.ಶ್ರೀವತ್ಸ ಮತ್ತಿತರರಿದ್ದರು.

ಮೈಸೂರಿನಲ್ಲಿ ಪ್ರಗತಿಪರ ಅಭಿವೃದ್ಧಿ, ಶಿಕ್ಷಣ ಸಂಸ್ಥೆಗಳು ಕುರಿತು ಮಾತನಾಡಿದ ಯದುವೀರ್, ಮೈಸೂರಿನಲ್ಲಿ ಪ್ರತಿಭೆಗಳನ್ನು ಸೃಷ್ಟಿಸುವ ಸಾಕಷ್ಟು ಶೈಕ್ಷಣಿಕ ಸಂಸ್ಥೆಗಳಿವೆ. ಆದರೆ ಆ ಪ್ರತಿಭೆಗಳನ್ನು ಸೂಕ್ತ ರೀತಿಯಲ್ಲಿ ಸದ್ಬಳಕೆ ಮಾಡಿಕೊಳ್ಳುವ ಸಂಸ್ಥೆಗಳ ಕೊರತೆ ಇದೆ. ಪ್ರತಿ ವರ್ಷ ಸಾವಿರಾರು ಮಂದಿ ಐಟಿ–ಬಿಟಿ ವಿಷಯದಲ್ಲಿ ಉನ್ನತ ಶಿಕ್ಷಣ ಪಡೆದು ಬೆಂಗಳೂರು ಸೇರಿದಂತೆ ವಿದೇಶಗಳತ್ತ ತೆರಳುತ್ತಿದ್ದಾರೆ. ಈ ನಿಟ್ಟಿನಲ್ಲಿ ಮೈಸೂರು ವಾತಾವರಣಕ್ಕೆ ಸೂಕ್ತವಾದ ಆತಿಥ್ಯ, ಅಗ್ರಿಟೆಕ್ ಹಾಗೂ ಸ್ಟಾರ್ಟ್‌ಅಪ್‌ಗಳ ಸ್ಥಾಪನೆ ಮೂಲಕ ಬೆಂಗಳೂರಿಗೆ ಸಪೋರ್ಟಿಂಗ್ ಪಿಲ್ಲರ್ ಆಗಿ ಮೈಸೂರನ್ನು ಅಭಿವೃದ್ಧಿ ಮಾಡಬೇಕಿದೆ ಎಂದರು.

ಕೈಗಾರಿಕೆಗಳ ಅಭಿವೃದ್ಧಿ ಕುರಿತು ಮಾತನಾಡಿ, ಈಗಾಗಲೇ ಮೈಸೂರಿನಲ್ಲಿ ಕೈಗಾರಿಕಾ ಪ್ರದೇಶಗಳ ಅಭಿವೃದ್ಧಿ ಮಾಡಲಾಗುತ್ತಿದೆ. ಮುಂದಿನ ದಿನಗಳಲ್ಲಿಯೂ ಮೈಸೂರಿಗೆ ಸೂಕ್ತವಿರುವ ಕೈಗಾರಿಕೆಗಳ ಸ್ಥಾಪನೆಗೆ ಅವಕಾಶ ಮಾಡಿಕೊಡುವುದು ಸೂಕ್ತ. ಈ ನಿಟ್ಟಿನಲ್ಲಿ ಎಲ್ಲರ ಸಹಕಾರ, ಸಲಹೆಗಳೊಂದಿಗೆ ತೀರ್ಮಾನಿಸುವುದು ಮುಖ್ಯವಾಗಿದೆ. ರಾಜಕೀಯ ಪ್ರವೇಶ ಕುರಿತು, ನಮ್ಮದೇನು ರಾಜಕೀಯ ಕುಟುಂಬವಲ್ಲ. ಜನಸೇವೆ ಮಾಡುವ ಅವಕಾಶ ದೊರೆತಿರುವ ಹಿನ್ನೆಲೆ ರಾಜಕೀಯಕ್ಕೆ ಬಂದಿದ್ದೇನೆ. ಕಳೆದ 9 ವರ್ಷಗಳಿಂದ ಮೈಸೂರು–ಕೊಡಗು ಜನತೆಯೊಂದಿಗೆ ಸಾಕಷ್ಟು ಕಾರ್ಯಕ್ರಮಗಳಲ್ಲಿ ವೇದಿಕೆ ಹಂಚಿಕೊಳ್ಳುವ ಮೂಲಕ ಜನರ ಭಾವನೆಯನ್ನು ತಿಳಿಯುವ ಪ್ರಯತ್ನ ಮಾಡಿದ್ದೇನೆ ಎಂದು ತಿಳಿಸಿದರು.

ಟೀಕೆಗಳು ಸಾಂಬಾರ್‌ನಲ್ಲಿ ಸಿಗುವ ಮೆಣಸಿನಕಾಯಿ... ನುಂಗುವುದಷ್ಟೇ....!

ರಾಜಕೀಯ ಕ್ಷೇತ್ರದ ಟೀಕೆಗಳು ಸಾಮಾನ್ಯ. ತಮ್ಮ ವಿರುದ್ಧ ಟೀಕೆಗಳು ವ್ಯಕ್ತವಾದರೆ ತಮ್ಮ ಪ್ರತಿಕ್ರಿಯೆ ಏನೆಂಬುದಕ್ಕೆ ಪ್ರತಿಕ್ರಿಯಿಸಿ, ರಾಜಕೀಯ ಕ್ಷೇತ್ರದಲ್ಲಿ ಟೀಕೆಗಳು ಎದುರಾಗುವುದು ಸಾಮಾನ್ಯ. ಅಭಿವೃದ್ಧಿಗೆ ಪೂರಕವಾಗಿದ್ದರೆ ಸ್ವಾಗತ. ಇಲ್ಲವಾದರೆ ಸಾಂಬಾರ್‌ನಲ್ಲಿ ಸಿಗುವ ಮೆಣಸಿನಕಾಯಿಯಂತೆ ಟೀಕೆಗಳನ್ನು ನುಂಗುವುದಷ್ಟೇ.

- ಯದುವೀರ್, ಬಿಜೆಪಿ ಅಭ್ಯರ್ಥಿ, ಮೈಸೂರು–ಕೊಡಗು ಲೋಕಸಭಾ ಕ್ಷೇತ್ರ

ಸ್ವಾವಲಂಬಿತರಾಗಬೇಕು: ಮೈಸೂರು ಮತ್ತು ಕೊಡಗು ಜಿಲ್ಲೆಯ ಬಡವರು, ಪೌರಕಾರ್ಮಿಕರ ಆರ್ಥಿಕ ಪರಿಸ್ಥಿತಿ ಸುಧಾರಣೆ ಕುರಿತು ಪ್ರತಿಕ್ರಿಯಿಸಿದ ಯದುವೀರ್, ಎರಡೂ ಜಿಲ್ಲೆಯ ಬಡವರು, ಪೌರಕಾರ್ಮಿಕರ, ಆರ್ಥಿಕವಾಗಿ ಹಿಂದುಳಿದವರು ಸ್ವಾವಲಂಬಿಗಳಾಗಿ ಜೀವನ ನಡೆಸುವಂತಾಗಬೇಕು. ಇದಕ್ಕಾಗಿ ಅಗತ್ಯವಿರುವ ಕಾರ್ಯಕ್ರಮಗಳನ್ನು ರೂಪಿಸಲು ಸದಾ ಉತ್ಸುಕನಾಗಿರುತ್ತೇನೆ ಎಂದು ಭರವಸೆ ನೀಡಿದರು. ಶಾಸಕ ಟಿ.ಎಸ್.ಶ್ರೀವತ್ಸ, ಉದ್ಯಮಿ ಕಿಶೋರ್ ರಾಚಯ್ಯ ಮತ್ತಿತರರಿದ್ದರು.

ಜಿಲ್ಲಾಧಿಕಾರಿಗಳಿಂದ ಮತ ಎಣಿಕಾ ಕೇಂದ್ರ, ಸ್ಟ್ರಾಂಗ್ ರೂಂ ಪರಿಶೀಲನೆ



ಮೈಸೂರು, ಏ. 22(ಆರ್‌ಕೆ)– ಜಿಲ್ಲಾ ಚುನಾವಣಾಧಿಕಾರಿ ಡಾ. ಕೆ.ವಿ. ರಾಜೇಂದ್ರ ಇಂದು ಮೈಸೂರಿನ ಮಹಾರಾಣಿ ಮಹಿಳಾ ಕಾಮರ್ಸ್ ಅಂಡ್ ಮ್ಯಾನೇಜ್‌ಮೆಂಟ್ ಕಾಲೇಜಿನ ಮತ ಎಣಿಕಾ ಕೇಂದ್ರಕ್ಕೆ ಭೇಟಿ ನೀಡಿ ಸ್ಟ್ರಾಂಗ್ ರೂಂ ಸಿದ್ಧತಾ ಕಾರ್ಯ ಪರಿಶೀಲಿಸಿದರು.

ಕಾಲೇಜಿನ ನೆಲ ಮಹಡಿ, ಮೊದಲ ಮಹಡಿಯಲ್ಲಿ ಸಿದ್ಧಗೊಳಿಸಿರುವ ಮತ ಎಣಿಕೆ ಹಾಲ್, ಇವಿಎಂ, ವಿವಿ ಪ್ಯಾಟ್ ಇರಿಸಲು ಸ್ಟ್ರಾಂಗ್ ರೂಂ, ಚುನಾವಣಾ ವೀಕ್ಷಕರ ಕೊಠಡಿ, ಮಾಧ್ಯಮ ಕೊಠಡಿ, ಸಿಸಿ ಕ್ಯಾಮರಾಗಳ ಅಳವಡಿಕೆ ಮತ್ತು ಕಾರ್ಯವೈಖರಿ, ವಿದ್ಯುತ್ ಸಂಪರ್ಕ, ಭದ್ರತಾ ವ್ಯವಸ್ಥೆ, ಅಗ್ನಿಶಾಮಕ ದಳದ ವಾಹನಗಳು, ಆಂಬುಲೆನ್ಸ್ ನಿಲುಗಡೆ ಸ್ಥಳ, ತಾತ್ಕಾಲಿಕ ಶೌಚಾಲಯ, ಕುಡಿಯುವ ನೀರಿನ ವ್ಯವಸ್ಥೆ ಕೇಂದ್ರದ ಸುತ್ತಲಿನ ಬ್ಯಾರಿಕೇಡ್ ವ್ಯವಸ್ಥೆ, ಮತ ಎಣಿಕಾ ಕಾರ್ಯದಲ್ಲಿ ತೊಡಗುವ ಅಧಿಕಾರಿಗಳು, ಸಿಬ್ಬಂದಿ, ಅಭ್ಯರ್ಥಿಗಳು, ಪಕ್ಷದ ಏಜೆಂಟರುಗಳು ಪ್ರವೇಶಿಸಲು ಕಲ್ಪಿಸಿರುವ ವ್ಯವಸ್ಥೆ, ಪೊಲೀಸ್ ಭದ್ರತೆ ಕುರಿತಂತೆ ಕೈಗೊಂಡಿರುವ ಸಿದ್ಧತಾ ಕಾರ್ಯವನ್ನು ಡಾ. ರಾಜೇಂದ್ರ ಅವರಿಗೆ ಸಹಾಯಕ ಚುನಾವಣಾಧಿಕಾರಿಗಳು, ನಗರ ಪೊಲೀಸ್ ಆಯುಕ್ತರು ಮಾಹಿತಿ ನೀಡಿದರು.

ನಂತರ ಜಿಲ್ಲಾಧಿಕಾರಿಗಳು ಮೈಸೂರು ನಗರದ ಮಸ್ಟರಿಂಗ್ ಕೇಂದ್ರಗಳಿಗೂ ಭೇಟಿ ನೀಡಿ ಪರಿಶೀಲಿಸಿದರು. ಆಯಾ ವಿಧಾನಸಭಾ ಕ್ಷೇತ್ರಗಳ ಸಹಾಯಕ ಚುನಾವಣಾಧಿಕಾರಿಗಳು ಸಿದ್ಧತಾ ಕಾರ್ಯದ ಬಗ್ಗೆ ವಿವರಿಸಿದರು.

ಮೇ 1 ರಿಂದ 5ರವರೆಗೆ ಸುದರ್ಶನ ಕ್ರಿಯೆ

ಮೈಸೂರು, ಏ. 22– ಮೈಸೂರಿನ ಲಲಿತಾದ್ರಿಪುರ ರಸ್ತೆಯಲ್ಲಿರುವ ಮೈಸೂರಿನ ಆರ್ಟ್ ಆಫ್ ಲಿವಿಂಗ್ ಸಂಸ್ಥೆಯಲ್ಲಿ ಮೇ 1ರಿಂದ 5ರವರೆಗೆ ಆರೋಗ್ಯಕರ ಜೀವನ, ಧ್ಯಾನ, ಯೋಗ, ಪ್ರಾಣಾಯಾಮ, ಸುದರ್ಶನ ಕ್ರಿಯೆಯನ್ನು ಕಲಿಸುವ ಶಿಬಿರವನ್ನು ಏರ್ಪಡಿಸಲಾಗಿದೆ. ಶಿಬಿರವು ಬೆಳಿಗ್ಗೆ 6 ರಿಂದ 8–30 ಹಾಗೂ ಸಂಜೆ 6 ರಿಂದ 8–30 ವರೆಗೆ ನಡೆಯಲಿದೆ. ಹೆಚ್ಚಿನ ಮಾಹಿತಿಗೆ 9480476825 ಸಂಪರ್ಕಿಸಬಹುದು.

ಮೂರನೇ ಪುಟದಿಂದ

ಮೈಸೂರಲ್ಲಿ ಬಿಜೆಪಿ ಪ್ರತಿಭಟನೆ

ಬಂದ ಕೆಲವೇ ತಿಂಗಳಿನಲ್ಲಿ ಸಾಕಷ್ಟು ಕೊಲೆಗಳಾಗಿವೆ. ಆದರೂ ಸರ್ಕಾರ ಕಣ್ಮುಚ್ಚಿ ಕುಳಿತಿದ್ದು, ಅಲ್ಪಸಂಖ್ಯಾತರ ತುಷ್ಟೀಕರಣಕ್ಕೆ ಮುಂದಾಗಿದೆ. ಕೆಲಸಕ್ಕೆ ಹೊರಗೆ ಹೋಗುವ ಮಹಿಳೆ ಮನೆಗೆ ಬರುವ ಗ್ಯಾರಂಟಿ ಇಲ್ಲದಂತಾಗಿದೆ. ಕಾಂಗ್ರೆಸ್ ವೋಟಿನ ರಾಜಕಾರಣದಿಂದ ಬಹು ಸಂಖ್ಯಾತರ ಸಮುದಾಯಕ್ಕೆ ರಕ್ಷಣೆ ಇಲ್ಲ.

ಸಿಎಂ ಆರೂವರೆ ಕೋಟಿ ಜನರ ಸಿಎಂ ಎಂಬುದನ್ನು ಮರೆತಿದ್ದಾರೆ. ದೇಶದ ಪ್ರಧಾನಿ ಬಗ್ಗೆ ಅವಹೇಳನಕಾರಿಯಾಗಿ ಮಾತನಾಡಿದ್ದಾರೆ. ರಾಜ್ಯದಲ್ಲಿ ಸಂಪೂರ್ಣವಾಗಿ ಕಾನೂನು ಸುವ್ಯವಸ್ಥೆ ಹಾಳಾಗಿದೆ. ಗ್ಯಾರಂಟಿ ಇರಲಿ ಮಹಿಳೆಯರಿಗೆ ರಕ್ಷಣೆ ನೀಡದ ನಾಲಾಯಕ್ ಸರ್ಕಾರ. ಮುಂದಿನ ದಿನಗಳಲ್ಲಿ ರಾಜ್ಯದಲ್ಲಿ ಜನರು ಕಾಂಗ್ರೆಸ್‌ಗೆ ತಕ್ಕ ಪಾಠ ಕಲಿಸುತ್ತಾರೆ ಎಂದು ವಾಗ್ದಾಳಿ ನಡೆಸಿದರು.

ನಂತರ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ನೇಹಾ ಹತ್ಯೆ ಪ್ರಕರಣ ಸಂಬಂಧ, ರಾಜ್ಯದ ಯಾವೊಬ್ಬ ಸಚಿವ ಸಂತ್ರಸ್ತೆ ಕುಟುಂಬಕ್ಕೆ ಸಾಂತ್ವನ ಹೇಳಿಲ್ಲ. ಬದಲಿಗೆ ಪೊಲೀಸರನ್ನು ಬಳಸಿಕೊಂಡು ಆ ಕುಟುಂಬದ ತೇಜೋವಧೆ ಮಾಡಿದೆ. ಕೊಲೆಗಡುಕರಿಗೆ ಸರ್ಕಾರ ರಕ್ಷಣೆ ನೀಡುತ್ತಿದೆ. ಇದೊಂದು ಅಕ್ಷಮ್ಯ ಅಪರಾಧ. ನೇಹಾ ಹತ್ಯೆ ಪ್ರಕರಣವನ್ನು ಸಿಬಿಐಗೆ ವಹಿಸಬೇಕು. ಕೆಜಿ ಹಳ್ಳಿ ಮತ್ತು ಡಿಜಿ ಹಳ್ಳಿ ಪ್ರಕರಣದಲ್ಲಿ ಒಬ್ಬ ದಲಿತ ಶಾಸಕ ಅಖಂಡ ಶ್ರೀನಿವಾಸ್‌ಗೆ ನೀವು ಏನು ಮಾಡಿದ್ರಿ ಎಂಬುದು ಇಡೀ ರಾಜ್ಯಕ್ಕೆ ಗೊತ್ತಿದೆ ಎಂದು ಸರ್ಕಾರವನ್ನು ಪ್ರಶ್ನಿಸಿದರು. ಮಾಜಿ ಸಚಿವ ರಮೇಶ್ ಕುಮಾರ್ ಪ್ರಧಾನಿ ನರೇಂದ್ರ ಮೋದಿ ಅವರನ್ನು ಶನಿ ಎಂದು ನೀಡಿರುವ ಹೇಳಿಕೆ ಕುರಿತು ಪ್ರತಿಕ್ರಿಯಿಸಿ, ಅವರ ಹೇಳಿಕೆಯನ್ನು ಬಿಜೆಪಿ ಖಂಡಿಸಲಿದೆ. ಅವರ ಯೋಗ್ಯತೆ ಅವರ ಕ್ಷೇತ್ರದ ಮತದಾರರಿಗೆ ಗೊತ್ತಿದೆ. ಆ ಕಾರಣಕ್ಕೆ ಕ್ಷೇತ್ರದ ಜನ ಅವರನ್ನು ಕಳೆದ ಚುನಾವಣೆಯಲ್ಲಿ ಸೋಲಿಸಿದ್ದಾರೆ. ಅವರದ್ದು ಆಚಾರವಿಲ್ಲದ ನಾಲಗೆ. ಅದು ಅವರ ಸಂಸ್ಕೃತಿಯನ್ನು ತೋರಿಸಲಿದೆ ಎಂದರು.

ಲಾಡ್ ನಾಲಾಯಕ್: ಸಚಿವ ಸಂತೋಷ್ ಲಾಡ್ ಬಗ್ಗೆ ಪ್ರತಿಕ್ರಿಯಿಸಿ, ಯಾರ್ರೀ ಸಂತೋಷ್ ಲಾಡ್? ಅವನೊಬ್ಬ ನಾಲಾಯಕ್. ಇದೇ ರೀತಿ ಮಾತನಾಡುತ್ತಾ ಹೋಗಲಿ ಹೆಣ್ಣು ಮಕ್ಕಳು ಬಡಿಗೆಯಲ್ಲಿ ಹೊಡಿತಾರೆ. ನಾವು ಮುಸಲ್ಮಾನರ ಬಗ್ಗೆ ಮಾತನಾಡುತ್ತಿಲ್ಲ. ದೇಶ ದ್ರೋಹಿಗಳು, ಕೊಲೆಗಡುಕರ ಬಗ್ಗೆ ಮಾತನಾಡುತ್ತಿದ್ದೇವೆ. ಅಲ್ಪ ಸಂಖ್ಯಾತ ತುಷ್ಟೀಕರಣ ಮಾಡುತ್ತಿರುವವರ ವಿರುದ್ಧ ನಮ್ಮ ಬೇಸರ. ಅಂತಹವರ ರಕ್ಷಣೆ ಮಾಡುತ್ತಿರುವವರ ವಿರುದ್ಧ ನಮ್ಮ ಹೋರಾಟ. ಜನಗಳ ತಾಳ್ಮೆಗೂ ಕೂಡ ಇತಿಮಿತಿ ಇದೆ. ಮುಂದಿನ ದಿನಗಳಲ್ಲಿ ರಾಜ್ಯದ ಜನರು ತಕ್ಕ ಪಾಠ ಕಲಿಸ್ತಾರೆ ಎಂದರು.

ಜೈಪುರ ಮಾದರಿ ಪಾರಂಪರಿಕ ಪ್ರಾಧಿಕಾರ ರಚನೆ

ಕಚೇರಿಯಲ್ಲಿ ಈ ಪ್ರಣಾಳಿಕೆಯನ್ನು ಶಾಸಕ ತನ್ವೀರ್ ಸೇಠ್ ಬಿಡುಗಡೆ ಮಾಡಿ, ಶ್ಲಾಘನೆ ವ್ಯಕ್ತ ಪಡಿಸಿದರು. ಶಾಸಕ ಕೆ.ಹರೀಶ್ ಗೌಡ, ಮಾಜಿ ಶಾಸಕ ಡಾ.ಯತೀಂದ್ರ ಅವರುಗಳು ಲಕ್ಷ್ಮಣ ಅವರ ಪ್ರಣಾಳಿಕೆ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು. ಕಾರ್ಯಕ್ರಮದಲ್ಲಿ ನಗರ ಕಾಂಗ್ರೆಸ್ ಅಧ್ಯಕ್ಷ ಆರ್.ಮೂರ್ತಿ, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಡಾ.ಬಿ.ಜೆ.ವಿಜಯಕುಮಾರ್, ರಾಜ್ಯ ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ಡಾ.ಪುಷ್ಪಾ, ಮಾಜಿ ಶಾಸಕ ಎಂ.ಕೆ.ಸೋಮಶೇಖರ್, ಮುಡಾ ಮಾಜಿ ಅಧ್ಯಕ್ಷ ಎಚ್.ವಿ.ರಾಜೀವ್, ಜಿ.ಪಂ.ಮಾಜಿ ಅಧ್ಯಕ್ಷ ಬಿ.ಎಂ.ರಾಮು, ಮಾಜಿ ಮೇಯರ್‌ಗಳಾದ ಬಿ.ಕೆ.ಪ್ರಕಾಶ್, ಪುರುಶೋತ್ತಮ್ ಸೇರಿದಂತೆ ಹಲವು ಮುಖಂಡರು ಭಾಗವಹಿಸದ್ದರು.

ಕೆ.ಎಸ್.ಈಶ್ವರಪ್ಪ ಉಚ್ಚಾಟನೆ

ಬಿಜೆಪಿ ನಾಯಕರ ನಿರೀಕ್ಷೆ ಹುಸಿಯಾಗಿದೆ. ನಾಮಪತ್ರ ವಾಪಸ್ ಪಡೆಯದೇ ಕಣದಲ್ಲಿ ಉಳಿದಿರುವ ಕೆಎಸ್ ಈಶ್ವರಪ್ಪ ಅವರಿಗೆ ಚುನಾವಣಾ ಆಯೋಗ ಇಂದು ಚುನಾವಣಾ ಚಿಹ್ನೆ ನೀಡಿದೆ. ಕಬ್ಬಿನ ಜೊತೆ ಕೈ ಕಟ್ಟಿಕೊಂಡು ನಿಂತ ರೈತನ ಚಿಹ್ನೆಯನ್ನು ಈಶ್ವರಪ್ಪ ಅವರಿಗೆ ನೀಡಲಾಗಿದೆ. ಶಿವಮೊಗ್ಗ ಲೋಕಸಭಾ ಕ್ಷೇತ್ರದಲ್ಲಿ ಮೂವರು ಪಕ್ಷೇತರ ಅಭ್ಯರ್ಥಿಗಳು ತಮ್ಮ ನಾಮಪತ್ರ ಹಿಂಪಡೆದಿದ್ದು, ಅಂತಿಮವಾಗಿ ಈಶ್ವರಪ್ಪ ಸೇರಿದಂತೆ 23 ಅಭ್ಯರ್ಥಿಗಳು ಚುನಾವಣಾ ಕಣದಲ್ಲಿ ಇದ್ದಾರೆ. ಬಿಜೆಪಿಯಿಂದ ಹಾಲಿ ಸಂಸದ ಬಿ.ವೈ. ರಾಘವೇಂದ್ರ, ಕಾಂಗ್ರೆಸ್‌ನಿಂದ ಖ್ಯಾತ ನಟ ಶಿವರಾಜ್ ಕುಮಾರ್ ಅವರ ಪತ್ನಿ ಗೀತಾ ಶಿವರಾಜ್‌ಕುಮಾರ್ ಸ್ಪರ್ಧಿಸಿದ್ದಾರೆ. ಇನ್ನು ಕರ್ನಾಟಕ ರಾಷ್ಟ್ರ ಸಮಿತಿ ಪಕ್ಷದಿಂದ ಎಸ್.ಕೆ.ಪ್ರಭು, ಉತ್ತಮ ಪ್ರಜಾಕೀಯ ಪಕ್ಷದ ಅಭ್ಯರ್ಥಿಯಾಗಿ ಅರುಣ ಕೆ.ಎ, ಬಹುಜನ ಸಮಾಜವಾದಿ ಪಾರ್ಟಿಯಿಂದ ಎ.ಡಿ. ಶಿವಪ್ಪ, ಯಂಗ್‌ಸ್ಟರ್ ಎಂಪರ್ಮೆಂಟ್ ಪಾರ್ಟಿಯಿಂದ ಯೂಸುಫ್ ಖಾನ್ ಕಣದಲ್ಲಿದ್ದಾರೆ.

ಬರ ಪರಿಹಾರ ಬಿಡುಗಡೆ

ನೀಡದಿದ್ದಾಗ, ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ನಿಯೋಗ, ಪ್ರಧಾನಿ ನರೇಂದ್ರ ಮೋದಿ, ಕೇಂದ್ರ ಗೃಹ ಸಚಿವ ಅಮಿತ್ ಷಾ ಅವರನ್ನು ಭೇಟಿ ಮಾಡಿ ಬರ ಪರಿಹಾರ ಬಿಡುಗಡೆ ಮಾಡುವಂತೆ ಮನವಿ ಮಾಡಿಕೊಂಡಿದ್ದರು. ವರದಿ ನೀಡಿ 4 ತಿಂಗಳು ಕಳೆದರೂ ಪರಿಹಾರ ಬಾರದೆ ಲೋಕಸಭಾ ಚುನಾವಣೆ ಘೋಷಣೆ ಆಗುತ್ತದೆ ಎಂಬ ಹಿನ್ನೆಲೆಯಲ್ಲಿ ಮುಖ್ಯಮಂತ್ರಿ, ವಿಷಯವನ್ನು ಸಂಪುಟದಲ್ಲಿ ಪ್ರಸ್ತಾಪಿಸಿ, ಸುಪ್ರೀಂಕೋರ್ಟ್ ಮೊರೆ ಹೋಗುವ ನಿರ್ಧಾರ ಕೈಗೊಂಡಿದ್ದಲ್ಲದೆ, ಕೇಂದ್ರದ ವಿರುದ್ಧ ಬಹಿರಂಗ ಕಾನೂನು ಸಮರಕ್ಕೆ ಮುಂದಾಗಲು ತೀರ್ಮಾನ ಕೈಗೊಂಡರು. ಇತಿಹಾಸದಲ್ಲೇ ರಾಜ್ಯ ಸರ್ಕಾರವೊಂದು ಪರಿಹಾರಕ್ಕಾಗಿ ಕೇಂದ್ರದ ವಿರುದ್ಧ ನ್ಯಾಯಾಲಯದ ಮೊರೆ ಹೋಗಿದ್ದು ಕರ್ನಾಟಕ ಸರ್ಕಾರ ಒಂದೆ.

ಹುಕ್ಕಾ ನಿಷೇಧ ಎತ್ತಿ ಹಿಡಿದ ಹೈಕೋರ್ಟ್

ಮತ್ತು ಹಂಚಿಕೆ ಕಾಯ್ದೆ–2003 (ಸಿಒಟಿಪಿ ಕಾಯ್ದೆ) ಕೇಂದ್ರ ಸರ್ಕಾರದ ಕಾನೂನಾಗಿದ್ದು, ಹುಕ್ಕಾ ನಿಷೇಧಿಸಲು ರಾಜ್ಯ ಸರ್ಕಾರಕ್ಕೆ ಯಾವುದೇ ಅಧಿಕಾರವಿಲ್ಲ. ಆಹಾರ ಪೂರೈಸದ ನಿರ್ದಿಷ್ಟ ಸ್ಥಳಗಳಲ್ಲಿ ಹುಕ್ಕಾ ಸೇದಲು ಅವಕಾಶವಿದೆ ಎಂಬ ಅರ್ಜಿದಾರರ ಪರ ವಕೀಲರ ವಾದವನ್ನು ನ್ಯಾಯಪೀಠ ತಳ್ಳಿ ಹಾಕಿದೆ. ಸಿಒಟಿಪಿಎ ಸಿಗರೇಟುಗಳಿಗೆ ಸಂಬಂಧಿಸಿ ಕಾಯ್ದೆಯಾಗಿದ್ದು, ಹುಕ್ಕಾಗೂ ಇದಕ್ಕೂ ಸಂಬಂಧವಿಲ್ಲ. ಸಾರ್ವಜನಿಕರ ಆರೋಗ್ಯದ ದೃಷ್ಟಿಯಿಂದ ಹುಕ್ಕಾಕ್ಕೆ ನಿಷೇಧ ವಿಧಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವಿದೆ. ಸಂವಿಧಾನದ 47ನೇ ವಿಧಿಯ ಅನ್ವಯ ಸಾರ್ವಜನಿಕ

ಆರೋಗ್ಯ ಸುಧಾರಿಸಲು ಸೂಕ್ತ ಕ್ರಮ ಕೈಗೊಳ್ಳುವ ಹೊಣೆಗಾರಿಕೆ ಹೊಂದಿದೆ ಎಂಬ ರಾಜ್ಯ ಸರ್ಕಾರದ ಪರ, ಅಡ್ವೊಕೇಟ್ ಜನರಲ್ ಕೆ.ಶಶಿಕಿರಣ ಶೆಟ್ಟಿ ಅವರ ಪ್ರತಿವಾದವನ್ನು ನ್ಯಾಯಪೀಠ ಎತ್ತಿ ಹಿಡಿದಿದೆ. ಒಂದು ದಂ ಹುಕ್ಕಾ ಸೇವನೆ 10 ಸಿಗರೇಟುಗಳನ್ನು ಸೇದಿದಷ್ಟೇ ಅಪಾಯ ಎಂಬ ಅಂಶದ ಮೇಲೆ ಬೆಳಕು ಚೆಲ್ಲಿರುವ ನ್ಯಾಯಪೀಠ, ತಂಬಾಕು ಉತ್ಪನ್ನ ಬಳಸದ ಹರ್ಬಲ್ ಹುಕ್ಕಾ ಸೇದಲು ನಿಷೇಧ ಹೇರಬಾರದು ಎಂಬ ಅರ್ಜಿದಾರರ ವಾದವನ್ನು ಸಾರಾಸಗಟಾಗಿ ತಳ್ಳಿ ಹಾಕಿದೆ. ರಾಜ್ಯದಲ್ಲಿ ಹತ್ತು ವರ್ಷಕ್ಕೂ ಹೆಚ್ಚು ಕಾಲದಿಂದ ಹುಕ್ಕಾ ವಹಿವಾಟು ನಡೆಯುತ್ತಿದೆ. ತಂಬಾಕು ಉತ್ಪಾದಕರು ಸರ್ಕಾರಕ್ಕೆ ತೆರಿಗೆ ಪಾವತಿಸುತ್ತಾರೆ. ಆದರೆ, ಹುಕ್ಕಾ ವಹಿವಾಟು ನಡೆಸುವವರು ಯಾವುದೇ ತೆರಿಗೆ ಪಾವತಿಸುವುದಿಲ್ಲ ಎಂಬ ಸರ್ಕಾರದ ನಿರ್ಧಾರವನ್ನು ಬೆಂಬಲಿಸಿದ ವಕೀಲರ ವಾದವನ್ನು ಮನ್ನಿಸಿದೆ.

ಪಡುವಾರಹಳ್ಳಿಯಲ್ಲಿ ಹರೀಶ್‌ಗೌಡರ ಮತಯಾಚನೆ



ಮೈಸೂರು, ಏ.22(ಎಂಕೆ)– ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಎಂ.ಲಕ್ಷ್ಮಣ ಪರ ಶಾಸಕ ಕೆ.ಹರೀಶ್‌ಗೌಡ ಸೋಮವಾರ ಪಾದಯಾತ್ರೆ ಮೂಲಕ ಮತಯಾಚಿಸಿದರು. ಪಡುವಾರಹಳ್ಳಿಯ ಮನೆ ಮನೆಗೆ ಭೇಟಿ ನೀಡಿದ ಅವರು, ರಾಜ್ಯ ಸರ್ಕಾರದ ಗ್ಯಾರಂಟಿ ಯೋಜನೆಗಳೊಂದಿಗೆ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಘೋಷಣೆ ಮಾಡಿರುವ ಗ್ಯಾರಂಟಿ ಯೋಜನೆಗಳು ಜಾರಿಗೊಂಡು ಉತ್ತಮ ಜೀವನ ನಡೆಸಲು ಕಾಂಗ್ರೆಸ್ ಅಭ್ಯರ್ಥಿಗೆ ಮತ ನೀಡಿ ಬೆಂಬಲಿಸುವಂತೆ ಕೋರಿದರು. ಎಂ.ಲಕ್ಷ್ಮಣ ಅವರು ಗೆದ್ದರೆ ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಅಭಿವೃದ್ಧಿಯ ಜೊತೆಗೆ ಗ್ಯಾರಂಟಿ ಯೋಜನೆಗಳು ಆರ್ಥಿಕ ಬೆಳವಣಿಗೆಗೆ ಸಹಕಾರಿಯಾಗಲಿವೆ ಎಂದರು. ಚಾಮರಾಜ ಕ್ಷೇತ್ರದ ಕಾಂಗ್ರೆಸ್ ಮುಖಂಡರು, ಬೂತ್‌ಮಟ್ಟದ ಪದಾಧಿಕಾರಿಗಳು, ಕಾರ್ಯಕರ್ತರು ಉಪಸ್ಥಿತರಿದ್ದರು. ಇದೇ ವೇಳೆ ಕೆ.ಹರೀಶ್ ಗೌಡರ ಅಭಿಮಾನಿಗಳು ಹಾರ ಹಾಕಿ ಅಭಿನಂದಿಸಿದರು.

ಬರ ಪರಿಹಾರ ಸಂಬಂಧ ಕೇಂದ್ರಕ್ಕೆ 'ಸುಪ್ರೀಂ' ಚಾಟಿ

ಮೈಸೂರು, ಏ.22– ಸಂವಿಧಾನ ದತ್ತವಾದ ಹಕ್ಕು, ಅಧಿಕಾರಗಳನ್ನು ದಮನ ಮಾಡುವ ಮೂಲಕ ಸರ್ವಾಧಿಕಾರಿ ಆಡಳಿತ ನಡೆಸಲು ಮುಂದಾಗಿದ್ದ ಮೋದಿ ಮತ್ತು ಅಮಿತ್ ಶಾ ಜೋಡಿಗೆ ಸುಪ್ರೀಂಕೋರ್ಟ್ ಸರಿಯಾಗಿಯೇ ಚಾಟಿ ಬೀಸಿದೆ ಎಂದು ಕೆಪಿಸಿಸಿ ವಕ್ತಾರ ಹೆಚ್.ಎ.ವೆಂಕಟೇಶ್ ಹೇಳಿದ್ದಾರೆ.



ಬರದಿಂದ ಬಳಲುತ್ತಿರುವ ಕರ್ನಾಟಕ ರಾಜ್ಯಕ್ಕೆ ನೀಡಬೇಕಿದ್ದ 20 ಸಾವಿರ ಕೋಟಿಗೂ ಅಧಿಕ ಪರಿಹಾರವನ್ನು ನೀಡದೆ ಕೇಂದ್ರದ ಬಿಜೆಪಿ ಸರ್ಕಾರ ತಾರತಮ್ಯ ಧೋರಣೆ ತಳೆದಿತ್ತು. ರಾಜ್ಯ ಸರ್ಕಾರದ ವತಿಯಿಂದಲೇ ನವದೆಹಲಿಯಲ್ಲಿ ಪ್ರತಿಭಟನೆ ನಡೆಸಿದರೂ ಪ್ರಧಾನಿ ಮೋದಿ ಮತ್ತು ಕೇಂದ್ರಸಚಿವ ಅಮಿತ್ ಶಾ ಜೋಡಿ ನಿರ್ಲಕ್ಷಿಸಿತ್ತು. ಕಾಂಗ್ರೆಸ್ ಸರ್ಕಾರವಿದೆ ಎನ್ನುವ ಕಾರಣಕ್ಕೆ ಅಸಹಕಾರದ ಮೂಲಕ ಬರ ಸಂಕಷ್ಟಕ್ಕೂ ಮರುಗದೆ ದ್ವೇಷ ಸಾಧಿಸಲಾಗುತ್ತಿತ್ತು ರಾಜ್ಯದಿಂದ ಪ್ರಸ್ತಾವನೆ ವಿಳಂಬ ಆರೋಪ, ಚುನಾವಣೆ ನೆಪದಲ್ಲಿ ಸುಳ್ಳು ಹರಡುತ್ತಿದ್ದರು. ಆದರೆ ರಾಜ್ಯ ಸರ್ಕಾರದ ಮನವಿಯನ್ನು ಪುರಸ್ಕರಿಸಿದ ಸುಪ್ರೀಂ ಕೋರ್ಟ್ ಕೇಂದ್ರ ಸರ್ಕಾರಕ್ಕೆ ಚಾಟಿ ಬೀಸಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕಾಂಗ್ರೆಸ್ ಅಭ್ಯರ್ಥಿ ಪರ ಮಾಜಿ ಶಾಸಕ ಸೋಮಶೇಖರ್ ಮತ ಬೇಟೆ

ಮೈಸೂರು, ಏ.22(ಎಸ್‌ಬಿಡಿ)– ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಎಂ.ಲಕ್ಷ್ಮಣ ಅವರು ಸೋಮವಾರ ಮಧ್ಯಾಹ್ನದ ನಂತರವೂ ಹಲವೆಡೆ ಮತ ಬೇಟೆ ನಡೆಸಿದರು.

ಕೃಷ್ಣರಾಜ ಕ್ಷೇತ್ರದ ವಿವಿಧೆಡೆ ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ನೇತೃತ್ವದಲ್ಲಿ ಮತ ಯಾಚಿಸಿದ ಎಂ.ಲಕ್ಷ್ಮಣ, ಮುಖ್ಯಮಂತ್ರಿ ಸಿದ್ದರಾಮಯ್ಯನವರ ನೇತೃತ್ವದ ಕಾಂಗ್ರೆಸ್ ಸರ್ಕಾರ ನುಡಿದಂತೆ ನಡೆದಿದೆ. ಐದು ಗ್ಯಾರಂಟಿಗಳು ಬಡ ಕುಟುಂಬಗಳಿಗೆ ಆರ್ಥಿಕ ಶಕ್ತಿ ತುಂಬಿವೆ. ಎಂ.ಕೆ.ಸೋಮಶೇಖರ್ ಅವರು ಶಾಸಕರಾಗಿದ್ದಾಗ ಕ್ಷೇತ್ರದ ಅಭಿವೃದ್ಧಿಗೆ ಪ್ರಾಮಾಣಿಕವಾಗಿ ಕೆಲಸ ಮಾಡಿದ್ದಾರೆ. ಏ.26ರಂದು ತಪ್ಪದೇ ಮತದಾನ ಮಾಡಿ, ಕಾಂಗ್ರೆಸ್ ಅಭ್ಯರ್ಥಿಯಾದ ನನಗೆ ಆಶೀರ್ವದಿಸುವ ಮೂಲಕ ನಿಮ್ಮಗಳ ಸೇವೆಗೆ ಅವಕಾಶ ನೀಡಿ ಎಂದು ಮನವಿ ಮಾಡಿದರು.

ಮಾಜಿ ಶಾಸಕ ಎಂ.ಕೆ.ಸೋಮಶೇಖರ್, ಎಂ.ಲಕ್ಷ್ಮಣ ಅವರಿಗೆ ಮತ ಹಾಕುವ ಮೂಲಕ ಜನಪರ ಆಡಳಿತ ನೀಡುತ್ತಿರುವ ಮುಖ್ಯಮಂತ್ರಿ ಸಿದ್ದರಾಮಯ್ಯನವರ ಕೈ ಬಲಪಡಿಸಬೇಕು ಎಂದು ಮತದಾರರನ್ನು ಕೋರಿದರು.



ಮೈಸೂರಿನ ಕೃಷ್ಣರಾಜ ವಿಧಾನಸಭಾ ಕ್ಷೇತ್ರದಲ್ಲಿ ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ನೇತೃತ್ವದಲ್ಲಿ ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಎಂ.ಲಕ್ಷ್ಮಣ ಮತ ಯಾಚಿಸಿದರು.


ಸುಣ್ಣದಕೇರಿ ಮಹದೇಶ್ವರ ಸ್ವಾಮಿ ದೇವಸ್ಥಾನದಿಂದ ಆರಂಭವಾದ ಪ್ರಚಾರ ಜಾಥಾ, ಸಿದ್ದಪ್ಪ ವೃತ್ತ, ಆರ್‌ಟಿಓ ಸರ್ಕಲ್, ಜಯನಗರ, ಚಿನ್ನಗಿರಿಕೊಪ್ಪಲು, ಚಿಕ್ಕಹರದನಹಳ್ಳಿ, ದೇವಯ್ಯನುಂಡಿ, ಭ್ರಮರಾಂಬ ಛತ್ರ, ವಿವೇಕಾನಂದ ವೃತ್ತ, ಕುವೆಂಪುನಗರ ಬಸ್ ಡಿಪೋ ವೃತ್ತ, ಕುವೆಂಪುನಗರ ಕಾಂಪ್ಲೆಕ್ಸ್, ನವಿಲು ರಸ್ತೆ, ಅಕ್ಷಯ ಭಂಡಾರ್ ಜಂಕ್ಷನ್, ಗಣೇಶ ಭಂಡಾರ್ ಮೂಲಕ ಟಿಕೆಲೇಔಟ್‌ವರೆಗೆ ಸಾಗಿತು.

ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್, ಕೆಪಿಸಿಸಿ ಮಹಿಳಾ ಘಟಕದ ಅಧ್ಯಕ್ಷೆ ಪುಷ್ಪಾ, ಕಾಂಗ್ರೆಸ್ ನಗರಾಧ್ಯಕ್ಷ ಆರ್.ಮೂರ್ತಿ, ಪ್ರಧಾನ ಕಾರ್ಯದರ್ಶಿ ಎಂ.ಶಿವಣ್ಣ, ಪಾಲಿಕೆ ಮಾಜಿ ಸದಸ್ಯರಾದ ಗೋಪಿ, ಶೋಭಾ ಸುನೀಲ್, ಲೋಕೇಶ್ ಪಿಯಾ, ಕೆ.ವಿ.ಮಲ್ಲೇಶ್, ಜಾಕೀರ್ ಪಾಷಾ, ಎಂ.ಸುನೀಲ್, ಮಾಜಿ ಮೇಯರ್ ಗಳಾದ ಪುರುಷೋತ್ತಮ್, ಭೈರಪ್ಪ, ಮುಖಂಡರಾದ ಜಿ.ಸೋಮಶೇಖರ್, ಶ್ರೀಧರ್ ಮತ್ತಿತರರು ಪ್ರಚಾರದಲ್ಲಿ ಪಾಲ್ಗೊಂಡಿದ್ದರು.

ಗುಂಗ್ರಾಲ್ ಛತ್ರ ಬಳಿ 5 ಲಕ್ಷ ರೂ. ಹಣ ವಶ

ಮೈಸೂರು, ಏ. 22(ಆರ್‌ಕೆ)– ಚಾಮುಂಡೇಶ್ವರಿ ಕ್ಷೇತ್ರ ವ್ಯಾಪ್ತಿಯ ಗುಂಗ್ರಾಲ್ ಛತ್ರ ಗ್ರಾಮದ ಬಳಿ ಸಾಗಿಸುತ್ತಿದ್ದ ದಾಖಲೆಗಳಿಲ್ಲದ 5 ಲಕ್ಷ ರೂ. ಹಣವನ್ನು ಎಫ್‌ಎಸ್‌ಟಿ ಅಧಿಕಾರಿಗಳು ಇಂದು ಮುಂಜಾನೆ ವಶಪಡಿಸಿಕೊಂಡಿದ್ದಾರೆ. ಕೆ.ಆರ್.ನಗರ ಕಡೆಯಿಂದ ಮೈಸೂರಿಗೆ ಬರುತ್ತಿದ್ದ ಕಾರನ್ನು ಮುಂಜಾನೆ 2.20ರಲ್ಲಿ ಗುಂಗ್ರಾಲ್ ಛತ್ರ ಬಳಿ ತಡೆದು ತಪಾಸಣೆ ನಡೆಸಿದ ಫ್ಲೈಯಿಂಗ್ ಸ್ಕ್ವಾಡ್ ತಂಡದ ಉಮೇಶ ಹಾಗೂ ಇತರರಿಗೆ 5 ಲಕ್ಷ ರೂ. ನಗದು ಪತ್ತೆಯಾಗಿದ್ದು, ಮನ್ಸೂರ್ ಷರೀಫ್‌ರಿಂದ ಹಣವನ್ನು ವಶಪಡಿಸಿಕೊಂಡಿದ್ದಾರೆ.

ಸಹಾಯಕ ಚುನಾವಣಾಧಿಕಾರಿ ನಂದೀಶ್, ತಹಶೀಲ್ದಾರ್ ಮಹೇಶ್ ಕುಮಾರ್ ಅವರ ನಿರ್ದೇಶನದಂತೆ ಜಪ್ತಿ ತಂಡದ ನೋಡಲ್ ಅಧಿಕಾರಿ ವಿಶ್ವನಾಥ್, ಗುರುಚೇತನ್, ಸತೀಶ್ ಪಾಲ್, ಮಹೇಶ್ ಜಪ್ತಿ ಮಾಡಿದ ಹಣವನ್ನು ಜಿಲ್ಲಾ ಖಜಾನೆ ಭದ್ರತಾ ಕೊಠಡಿ ಸುಪರ್ದಿಗೆ ವಹಿಸಿದ್ದಾರೆ.



ಮದ್ದೂರಿನ ವಿವಿಧೆಡೆ ನಟ ದರ್ಶನ್ ಭರ್ಜರಿ ರೋಡ್ ಶೋ


ಕಾಂಗ್ರೆಸ್ ಅಭ್ಯರ್ಥಿ ವೆಂಕಟರಮಣೇಗೌಡ (ಸ್ಟಾರ್ ಚಂದ್ರು) ಪರ ಬಿರುಸಿನ ಪ್ರಚಾರ

ಮದ್ದೂರು,ಏ.22– ಮಂಡ್ಯ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ವೆಂಕಟರಮಣೇಗೌಡ (ಸ್ಟಾರ್‌ಚಂದ್ರು) ಪರವಾಗಿ ಸಚಿವ ಎನ್.ಚಲುವರಾಯಸ್ವಾಮಿ, ಶಾಸಕ ಕೆ.ಎಂ.ಉದಯ್ ನೇತೃತ್ವದಲ್ಲಿ ಚಿತ್ರನಟ ದರ್ಶನ್ ಅವರು ಸೋಮವಾರ ಮದ್ದೂರು ತಾಲೂಕಿನ ಕೊಪ್ಪ, ಕೆಸ್ತೂರು, ಕೆ.ಹೊನ್ನಲಗೆರೆ, ಇನ್ನಿತರೆಡೆ ಭರ್ಜರಿ ರೋಡ್ ಶೋ ನಡೆಸಿ, ಮತ ಯಾಚಿಸಿದರು.

ಈ ವೇಳೆ ಮಾತನಾಡಿದ ಅವರು, ಕಳೆದ ಲೋಕಸಭಾ ಚುನಾವಣೆ ವೇಳೆ ಕಾಂಗ್ರೆಸ್ ಪಕ್ಷದ ಕಾರ್ಯಕರ್ತರ ಬೆಂಬಲದಿಂದ ಸುಮಲತಾ ಅವರ ಗೆಲುವಿಗೆ ಮಂಡ್ಯ ಜಿಲ್ಲೆಯಾದ್ಯಂತ ಸಿಕ್ಕ ಜನ ಬೆಂಬಲವನ್ನು ನೆನಪಿಸಿಕೊಂಡರು.

ಪ್ರಸ್ತುತ ಚುನಾವಣೆಯಲ್ಲಿ ಸ್ಟಾರ್‌ಚಂದ್ರು ಅವರು ನಿಮ್ಮ ಸೇವೆ ಮಾಡಲು ಬಂದಿದ್ದಾರೆ. ಅವರನ್ನು ಲೋಕಸಭೆಗೆ ಚುನಾಯಿಸುವ ಸಂಬಂಧ ಎಲ್ಲರೂ ಬೆಂಬಲ ನೀಡಬೇಕೆಂದು ದರ್ಶನ್ ಮನವಿ ಮಾಡಿದರು.

ದರ್ಶನ್ ರೋಡ್ ಶೋ ವೇಳೆ ಕೊಪ್ಪ ಬಸ್ ನಿಲ್ದಾಣದಲ್ಲಿ ಸಾರ್ವಜನಿಕರನ್ನು ಉದ್ದೇಶಿಸಿ ಮಾತನಾಡಿದ ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ, ರಾಜ್ಯ ಹಾಗೂ ಮಂಡ್ಯ ಜಿಲ್ಲೆಯ ಸಮಗ್ರ ಅಭಿವೃದ್ಧಿ ದೃಷ್ಟಿಯಿಂದ ಮತದಾರರು ಈ ಬಾರಿ ಕಾಂಗ್ರೆಸ್ ಪಕ್ಷವನ್ನು ಬೆಂಬಲಿಸಲಿದ್ದಾರೆಂದು ವಿಶ್ವಾಸ ವ್ಯಕ್ತಪಡಿಸಿದರು.



ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದಲ್ಲಿ ಕಾಂಗ್ರೆಸ್ ಸರಕಾರ ಕಳೆದ ವಿಧಾನಸಭಾ ಚುನಾವಣೆ ವೇಳೆ ನೀಡಿದ್ದ 5 ಭರವಸೆಗಳನ್ನು ಈಡೇರಿಸಿದ್ದು ರಾಜ್ಯದೆಲ್ಲೆಡೆ ಎದುರಾಗಿರುವ ಬರಗಾಲ ಸ್ಥಿತಿ ನಿಭಾಯಿಸಲು ಸರಕಾರದ 5 ಅಮೂಲ್ಯ ಗ್ಯಾರಂಟಿ ಯೋಜನೆಗಳು ಸಹಕಾರಿಯಾಗಿವೆ ಎಂದರು.


ಮದ್ದೂರು ತಾಲೂಕಿನಾದ್ಯಂತ ಶಾಸಕ ಕೆ.ಎಂ.ಉದಯ್ ವಾರದ 5 ದಿನವೂ ಪ್ರತೀ ಹೋಬಳಿ ಕೇಂದ್ರದಲ್ಲಿದ್ದು, ಜನರ ಸಮಸ್ಯೆ ಪರಿಹರಿಸುವ ಸಂಬಂಧ ಉಪಯುಕ್ತ ಕಾರ್ಯಗಳಲ್ಲಿ ತಮ್ಮನ್ನು ಸಮರ್ಪಿಸಿಕೊಂಡಿರುವುದರ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು.

ಶಾಸಕ ಕೆ.ಎಂ.ಉದಯ್ ಮಾತನಾಡಿ, ಆಡುವುದಕ್ಕಿಂತ ಮಾಡಿ ತೋರಿಸುವುದು ಲೇಸೆಂಬಂತೆ ಮಂಡ್ಯ ಜಿಲ್ಲೆಯ 7 ವಿಧಾನಸಭಾ ಕ್ಷೇತ್ರಗಳ ಸಮಗ್ರ ಅಭಿವೃದ್ಧಿಗೆ ಈಗಾಗಲೇ ಶಕ್ತಿ ಮೀರಿ ಶ್ರಮಿಸುತ್ತಿದ್ದು ಲೋಕಸಭಾ ಚುನಾವಣೆ ವೇಳೆ ಪಕ್ಷದ ಅಭ್ಯರ್ಥಿಯ ಗೆಲುವಿಗೆ ಸಹಕರಿಸುವಂತೆ ಮನವಿ ಮಾಡಿದರು.

ವ್ಯಾಪಕ ಜನ ಬೆಂಬಲ: ಕೊಪ್ಪ, ಕೆಸ್ತೂರು, ಕೆ.ಹೊನ್ನಲಗೆರೆ, ಪ್ರಮುಖ ಕೇಂದ್ರಗಳು ಸೇರಿದಂತೆ ಈ ಮಾರ್ಗದುದ್ದಕ್ಕೂ ಮಹಿಳೆಯರು, ಅಭಿಮಾನಿಗಳು ನಟ ದರ್ಶನ್ ಅವರನ್ನು ಅದ್ಧೂರಿಯಾಗಿ ಸ್ವಾಗತಿಸಿ, ಬೀಳ್ಕೊಟ್ಟರು.

ಕಾಂಗ್ರೆಸ್ ಸೇರ್ಪಡೆ: ಮದ್ದೂರು ಎಪಿಎಂಸಿ ಹಾಗೂ ಟಿಎಪಿಸಿಎಂಎಸ್ ಮಾಜಿ ಅಧ್ಯಕ್ಷ ಜೆಡಿಎಸ್ ಮುಖಂಡ ಕೆಸ್ತೂರು ದಾಸೇಗೌಡ ಅವರು ಸಚಿವ ಎನ್.ಚೆಲುವರಾಯಸ್ವಾಮಿ ಹಾಗೂ ಶಾಸಕ ಕೆ.ಎಂ ಉದಯ್ ಸಮ್ಮುಖದಲ್ಲಿ ಕೆಸ್ತೂರು ಗ್ರಾಮದ ಬಹಿರಂಗ ಸಭೆ ವೇಳೆ ನೂರಾರು ಬೆಂಬಲಿಗರೊಂದಿಗೆ ಜೆಡಿಎಸ್ ತೊರೆದು ಕಾಂಗ್ರೆಸ್ ಪಕ್ಷಕ್ಕೆ ಸೇರ್ಪಡೆಗೊಂಡರು.

ರೋಡ್ ಶೋ ವೇಳೆ ಶಾಸಕ ಗಣಿಗ ರವಿಕುಮಾರ್, ತಾ.ಪಂ ಮಾಜಿ ಅಧ್ಯಕ್ಷರಾದ ಸಿ.ನಾಗೇಗೌಡ, ಲಕ್ಷ್ಮೀ ಚನ್ನರಾಜು, ನಾಗಮಂಗಲ ಗ್ರಾಮಾಂತರ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಕೆ.ದಿವಾಕರ್, ತಾಲೂಕು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಕದಲೂರು ರಾಮಕೃಷ್ಣ, ಮನ್‌ಮುಲ್ ನಿರ್ದೇಶಕ ಎಂ.ಕೆ.ಹರೀಶ್‌ಬಾಬು, ತಾ.ಪಂ ಮಾಜಿ ಸದಸ್ಯ ಕೆ.ಆರ್.ಮಹೇಶ್, ಮುಖಂಡರಾದ ಶ್ರೀನಿವಾಸ್, ಚಿದಂಬರ್ ಇತರರಿದ್ದರು.



ಮತದಾರರ ಸೆಳೆಯಲು ಮೈಸೂರಲ್ಲಿ ವಿಷಯಾಧಾರಿತ ಮತಗಟ್ಟೆ ಸ್ಥಾಪನೆ







ಮೈಸೂರು,ಏ.22(ಆರ್‌ಕೆ)– ಏಪ್ರಿಲ್ 26ರಂದು ನಡೆಯಲಿರುವ ಮೈಸೂರು–ಕೊಡಗು ಲೋಕಸಭಾ ಚುನಾವಣೆಗೆ ಮತದಾನ ಪ್ರಮಾಣ ಹೆಚ್ಚಿಸಲು ಸ್ವೀಪ್ ಅಡಿ ಜಿಲ್ಲಾ ಸ್ವೀಪ್ ಸಮಿತಿ ಅಧಿಕಾರಿಗಳು ವಿವಿಧ ರೀತಿಯಲ್ಲಿ ಮತದಾನ ಜಾಗೃತಿ ಮೂಡಿಸುತ್ತಿದ್ದಾರೆ.

ಮೈಸೂರು ಮಹಾನಗರಪಾಲಿಕೆ ಆಯುಕ್ತೆ ಡಾ.ಎನ್.ಎನ್.ಮಧು ನೇತೃತ್ವದಲ್ಲಿ ಮೈಸೂರು ನಗರದ ಕೆಆರ್, ಎನ್‌ಆರ್ ಹಾಗೂ ಚಾಮರಾಜ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ತಲಾ 8 ವಿಶೇಷ ಮತಗಟ್ಟೆಗಳನ್ನು ಸಜ್ಜುಗೊಳಿಸಿದ್ದಾರೆ. ಪ್ರತೀ ಕ್ಷೇತ್ರದಲ್ಲಿ ಐದು ಸಖಿ ಮತಗಟ್ಟೆಗಳು, ಒಂದೊಂದು ಅಂಗವಿಕಲರ, ಥೀಮ್, ಯುವ ಮತಗಟ್ಟೆಗಳನ್ನು ಸ್ಥಾಪಿಸಲಾಗಿದೆ.

ಮಹಿಳಾ ಮತದಾರರೇ ಹೆಚ್ಚಾಗಿರುವ ಸ್ಥಳದ ಮತಗಟ್ಟೆಗಳನ್ನು ಸಖಿಮತಗಟ್ಟೆಯನ್ನಾಗಿ ಮಾಡಿ ಅಲ್ಲಿ ಕೇವಲ ಮಹಿಳಾ ಅಧಿಕಾರಿಗಳು ಹಾಗೂ ಸಿಬ್ಬಂದಿಗಳನ್ನು ನಿಯೋಜಿಸಿ ಸಮವಸ್ತ್ರ ಧರಿಸಿ ಬರುವಂತೆ ಸೂಚನೆ ನೀಡಲಾಗಿದೆ.

ಭಾರತ ಚುನಾವಣಾ ಆಯೋಗದ ನಿರ್ದೇಶನದಂತೆ ಸಿದ್ಧಪಡಿಸಿರುವ ಸಖಿ ಮತಗಟ್ಟೆಗಳಲ್ಲಿ ಮಹಿಳಾ ಸಬಲೀಕರಣದಂತೆ ಘೋಷಣೆ ಚಿತ್ರಗಳನ್ನು ಗೋಡೆ ಮೇಲೆ ಚಿತ್ರಿಸಲಾಗಿದೆ. ಭವ್ಯ ಭಾರತದ ಸದೃಢತೆಗಾಗಿ ಪ್ರತಿಯೊಬ್ಬರೂ ತಪ್ಪದೇ ಮತ ಚಲಾಯಿಸಬೇಕು ಎಂದು ಘೋಷಣೆಗಳನ್ನು ಗೋಡೆ ಮೇಲೆ ಬರೆಯಲಾಗಿದೆ. ವಿಶೇಷಚೇತನರಿಗೆ ಶೌಚಾಲಯ ರ್‍ಯಾಂಪ್, ಬ್ರೈಲ್‌ಲಿಪಿಯನ್ನು ಬರೆದು ಅಂಗವಿಕಲರ ಮತಗಟ್ಟೆ ಸಿದ್ಧಪಡಿಸಲಾಗಿದ್ದು, ಅಲ್ಲಿಯೂ ಮತದಾರರನ್ನು ಸೆಳೆಯಲು ಹಲವು ಪೇಂಟಿಂಗ್‌ಗಳನ್ನು ಬಿಡಿಸಲಾಗಿದೆ. ವಿಷಯಾಧಾರಿತ (ಥೀಮ್ ಬೇಸ್ಡ್) ಮತಗಟ್ಟೆಯನ್ನು ಮೂರು ಕ್ಷೇತ್ರದಲ್ಲಿ ಸ್ಥಾಪಿಸಿ ಒಂದೊಂದು ಮತಗಟ್ಟೆಗೆ ಒಂದೊಂದು ವಿಷಯವನ್ನು ನೀಡಲಾಗಿದೆ. ಯುವ ಮತದಾರರು ಹೆಚ್ಚಾಗಿರುವ ಸ್ಥಳಗಳಲ್ಲಿ ಯುವ ಮತಗಟ್ಟೆಯನ್ನು ಸ್ಥಾಪಿಸಿ ಕ್ರೀಡಾ ಸಬಲೀಕರಣ ಸಂಬಂಧ ಅಲ್ಲಿ ಮಾಹಿತಿ ನೀಡಲಾಗಿದೆ. ಮೈಸೂರಿನ ಎಲ್ಲಾ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಒಂದೊಂದು ಯುವ ಮತಗಟ್ಟೆ ಸ್ಥಾಪಿಸಲು ಉದ್ದೇಶಿಸಲಾಗಿದೆಯಾದರೂ ಆ ಬಗ್ಗೆ ಮಾಹಿತಿ ಸಂಗ್ರಹಿಸಲಾಗುತ್ತಿದೆ ಎಂದು ಪಾಲಿಕೆ ಕಮಿಷ್ನರ್ ಡಾ.ಮಧು ತಿಳಿಸಿದ್ದಾರೆ.

ಕಲಾವಿದರ ಕುಂಚದಲ್ಲಿ ನಾಗರಿಕರಿಗೆ ಮತ ಚಲಾಯಿಸುವಂತೆ ಪ್ರೇರೇಪಣೆ ನೀಡಲು ಗೋಡೆ ಮೇಲೆ ಚಿತ್ರ ಬಿಡಿಸಲಾಗಿದೆ. ಯುವ ಮತದಾರರಷ್ಟೇ ಅಲ್ಲದೆ ವಿಶೇಷಚೇತನರನ್ನು ಸೆಳೆಯಲು ಈ ವಿಶೇಷ ಮತಗಟ್ಟೆಗಳನ್ನು ಸ್ಥಾಪಿಸಲಾಗಿದೆ.

ಬೋಗಾದಿ, ಜನತಾನಗರ, ದಟ್ಟಗಳ್ಳಿಯಲ್ಲಿ ಯದುವೀರ್ ಭರ್ಜರಿ ರೋಡ್ ಶೋ

ಶಾಸಕ ಜಿಟಿಡಿ, ಬಿಜೆಪಿ ಮುಖಂಡ ಕವೀಶ್‌ಗೌಡ ಸಾಥ್



ಚಾಮುಂಡೇಶ್ವರಿ ಕ್ಷೇತ್ರ ವ್ಯಾಪ್ತಿಯಲ್ಲಿ ಬಿಜೆಪಿ ಅಭ್ಯರ್ಥಿ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಸೋಮವಾರ ರೋಡ್ ಶೋ ಮೂಲಕ ಮತ ಪ್ರಚಾರ ನಡೆಸಿದರು. ಈ ವೇಳೆ ಶಾಸಕರಾದ ಜಿ.ಟಿ.ದೇವೇಗೌಡ, ಬಿಜೆಪಿ ಮುಖಂಡ ಕವೀಶ್‌ಗೌಡ, ಮಾಜಿ ಕಾರ್ಪೊರೇಟರ್ ಸವಿತಾ, ಮುಖಂಡ ಸುರೇಶ್ ಇದ್ದಾರೆ.

ಮೈಸೂರು,ಏ.22(ಆರ್‌ಕೆ)– ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಅವರು ಇಂದು ಮೈಸೂರು ನಗರದ ಚಾಮುಂಡೇಶ್ವರಿ ಕ್ಷೇತ್ರ ವ್ಯಾಪ್ತಿಯ ಪ್ರಮುಖ ರಸ್ತೆಗಳಲ್ಲಿ ರೋಡ್ ಶೋ ಮಾಡುವ ಮೂಲಕ ಬಿರುಸಿನ ಚುನಾವಣಾ ಪ್ರಚಾರ ಮಾಡಿದರು.

ಬೋಗಾದಿ 2ನೇ ಹಂತ, ಜನತಾನಗರ, ಶಾರದಾದೇವಿನಗರ, ದಟ್ಟಗಳ್ಳಿ ಹಾಗೂ ರಾಮಕೃಷ್ಣನಗರಗಳಲ್ಲಿ ತೆರೆದ ವಾಹನದ ಮೂಲಕ ರೋಡ್ ಶೋ ನಡೆಸಿದ ಒಡೆಯರ್‌ಗೆ ಜನರಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಯಿತು. ದಾರಿಯುದ್ದಕ್ಕೂ ಯದುವೀರ ಅಭಿಮಾನಿಗಳು ಪುಷ್ಪಾರ್ಚನೆಗೈದು ರಾಜವಂಶಸ್ಥರಿಗೆ ಶುಭ ಕೋರಿ ಬೆಂಬಲ ವ್ಯಕ್ತಪಡಿಸಿದರು. ಮಹಿಳೆಯರು, ಯುವತಿಯರು ಹಾಗೂ ಹಿರಿಯ ನಾಗರಿಕರು ಶಾರದಾದೇವಿನಗರದಲ್ಲಿ ಪೂರ್ಣಕುಂಭ ಸ್ವಾಗತ ನೀಡಿ ರೋಡ್ ಶೋ ಮಾರ್ಗದುದ್ದಕ್ಕೂ ರಂಗೋಲಿ ಹಾಕಿ ಆರತಿ ಬೆಳಗಿ ರಾಜವಂಶಸ್ಥ ಒಡೆಯರ್‌ಗೆ ಗೌರವ ಸೂಚಿಸಿದರು. ಶ್ರೀ ಶಾರದಾ ತ್ರಿಶಾಖಾ ವಿಪ್ರ ಬಳಗದ ಸದಸ್ಯರು ವೇದ ಘೋಷದೊಂದಿಗೆ ಕಮಲ ನೀಡಿ ಶುಭ ಕೋರಿದರೆ, ಭಾವಸಾರ ಕ್ಷತ್ರಿಯ ಮರಾಠ ಸಂಘ, 24 ಮನೆ ತೆಲುಗು ಶೆಟ್ಟರ ಸಂಘದ ಸದಸ್ಯರು ಅಭ್ಯರ್ಥಿ ಯದುವೀರ್‌ಗೆ ಮಾಲಾರ್ಪಣೆ ಮಾಡಿದರು. ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ. ದೇವೇಗೌಡ, ಕೆ.ಆರ್. ಕ್ಷೇತ್ರದ ಶಾಸಕ ಟಿ.ಎಸ್. ಶ್ರೀವತ್ಸ, ಬಿಜೆಪಿ ಮುಖಂಡ ಕವೀಶ್‌ಗೌಡ ಅವರು ಯದುವೀರ್ ರೋಡ್ ಶೋಗೆ ಸಾಥ್ ನೀಡಿ ಮತ ಯಾಚನೆ ಮಾಡಿದರು. ಮೈಸೂರು ನಗರ ಬಿಜೆಪಿ ಪ್ರಧಾನ ಕಾರ್ಯದರ್ಶಿ ರಘು, ಮುಖಂಡರಾದ ರಾಕೇಶ್ ಭಟ್, ಸವಿತಾ ಸುರೇಶ್, ಲಕ್ಷ್ಮೀ ಕಿರಣ್, ಆರ್.ಕೆ. ಶರತ್‌ಕುಮಾರ್, ಅರುಣ್‌ಕುಮಾರ್‌ಗೌಡ, ವೇದರಾಜ್, ಜೆಡಿಎಸ್ ಮುಖಂಡರಾದ ದಿನೇಶ್, ರಮೇಶ್, ಮಹೇಶ್ ಸೇರಿದಂತೆ ಹಲವರು ರೋಡ್ ಶೋನಲ್ಲಿ ಪಾಲ್ಗೊಂಡಿದ್ದರು.



ವರುಣ ಕ್ಷೇತ್ರ ವ್ಯಾಪ್ತಿಯ ತಗಡೂರಿನಲ್ಲಿ ಚಾ.ನಗರ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಸುನಿಲ್ ಬೋಸ್ ಗೆಲ್ಲಿಸಿ ಅಭಿಯಾನದ ಪೋಸ್ಟರ್ ಅನ್ನು ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಬಿಡುಗಡೆಗೊಳಿಸಿದರು. ಈ ವೇಳೆ ರಾಜ್ಯ ಹಿಂದುಳಿದ ವರ್ಗಗಳ ಜಾಗೃತಿ ವೇದಿಕೆ ರಾಜ್ಯಾಧ್ಯಕ್ಷ ಕೆ.ಎಸ್.ಶಿವರಾಮ್, ಉಪ್ಪಾರ ಸಮಾಜದ ಜಿಲ್ಲಾಧ್ಯಕ್ಷ ಎಸ್.ಯೋಗೀಶ, ಕುಂಬಾರರ ಸಮಾಜದ ಜಿಲ್ಲಾಧ್ಯಕ್ಷ ಎಚ್.ಎಸ್.ಪ್ರಕಾಶ್, ಮಡಿವಾಳ ಸಮಾಜದ ಜಿಲ್ಲಾಧ್ಯಕ್ಷ ಎಸ್.ರವಿನಂದನ್, ಲೋಕೇಶ್‌ಕುಮಾರ್, ಕಾಂಗ್ರೆಸ್ ಹಿರಿಯ ಮುಖಂಡರಾದ ಬೆಡ್ ಮಾದಶೆಟ್ಟಿ, ಗ್ರಾಪಂ ಸದಸ್ಯರಾದ ಸ್ವಾಮಿ, ಮಂಜುನಾಥ್ ಹಾಗೂ ಇನ್ನಿತರರು ಹಾಜರಿದ್ದರು.

ಮಾದಿಗ ಸಮುದಾಯಕ್ಕೆ ರಾಜಕೀಯ ಶಕ್ತಿ ತುಂಬಲು ಬಿಜೆಪಿ ಬದ್ಧ

ಸಮುದಾಯದ ಮುಖಂಡರು, ಕಾರ್ಯಕರ್ತರ ಸಮಾವೇಶದಲ್ಲಿ ಪಕ್ಷದ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಭರವಸೆ

ಮೈಸೂರು, ಏ.22 (ಎಂಟಿವೈ)–ಪರಿಶಿಷ್ಟ ಜಾತಿಗೆ ಸೇರಿದ ಮಾದಿಗ ಸಮುದಾಯಕ್ಕೆ ರಾಜಕೀಯ ಶಕ್ತಿ ತುಂಬುವುದಕ್ಕೆ ಬಿಜೆಪಿ ಬದ್ಧವಾಗಿದ್ದು, ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿಗಳನ್ನು ಬೆಂಬಲಿಸುವಂತೆ ಪಕ್ಷದ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಮನವಿ ಮಾಡಿದ್ದಾರೆ.

ಮೈಸೂರಿನ ವಿಜಯನಗರದ ಸಪ್ತಪದಿ ಕಲ್ಯಾಣ ಮಂಟಪದಲ್ಲಿ ಸೋಮವಾರ ಆಯೋಜಿಸಿದ್ದ ಮಾದಿಗ ಸಮುದಾಯದ ಮುಖಂಡರು, ಕಾರ್ಯಕರ್ತರ ಸಮಾವೇಶವನ್ನು ಉದ್ಘಾಟಿಸಿ ಮಾತನಾಡಿದ ಅವರು, ಇದುವರೆಗೂ ಕಡೆಗಣಿಸಲ್ಪಡುತ್ತಿದ್ದ ಮಾದಿಗ ಸಮುದಾಯಕ್ಕೆ ನ್ಯಾಯ ಒದಗಿಸುವ ನಿಟ್ಟಿನಲ್ಲಿ ಮಾದಿಗ ಸಮುದಾಯಕ್ಕೆ ಸೇರಿದ ನಾರಾಯಣಸ್ವಾಮಿ ಅವರನ್ನು ಕೇಂದ್ರ ಸರ್ಕಾರ ಮಂತ್ರಿಯಾಗಿ ಮಾಡಿದೆ. ಗೋವಿಂದ ಕಾರಜೋಳ ಅವರಿಗೂ ಉತ್ತಮ ಸ್ಥಾನ ನೀಡಿದೆ. ಸದಾಶಿವ ಆಯೋಗದ ವರದಿ ಜಾರಿಗೊಳಿಸಲು ಪ್ರಯತ್ನಿಸಲಾಗುತ್ತಿದೆ. ಒಳ ಮೀಸಲಾತಿಯನ್ನು ಶೇ.16ಕ್ಕೆ ಹೆಚ್ಚಳ ಮಾಡಲು ಮುಖ್ಯಮಂತ್ರಿಯಾಗಿದ್ದ ಬಸವರಾಜ ಬೊಮ್ಮಾಯಿ ಅವರ ಸರ್ಕಾರ ಪ್ರಯತ್ನಿಸಿತ್ತು. ಆ ಮೂಲಕ ಈ ಸಮುದಾಯಕ್ಕೆ ನಮ್ಮ ಸರ್ಕಾರಕ್ಕೆ ಶಕ್ತಿ ತುಂಬುವ ಪ್ರಯತ್ನ ಮಾಡಿದೆ ಎಂದರು.

ಇದೇ ವೇಳೆ ಕೇಂದ್ರ ಸಚಿವ ಎ.ನಾರಾಯಣಸ್ವಾಮಿ ಮಾತನಾಡಿ, ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸರ್ಕಾರ ದೇಶದ ಅಭಿವೃದ್ಧಿಗೆ ಸಾಕಷ್ಟು ಯೋಜನೆಗಳನ್ನು ಜಾರಿಗೊಳಿಸಿದೆ. ಶೋಷಿತ ಸಮುದಾಯಗಳಲ್ಲಿ ಒಂದಾದ ಮಾದಿಗ ಸಮುದಾಯ ನಿರ್ಲಕ್ಷ್ಯಕ್ಕೆ ಒಳಗಾಗಿತ್ತು. ಯಾವುದೇ ಸೌಲಭ್ಯ ದೊರೆಯುತ್ತಿರಲಿಲ್ಲ. ಇದರಿಂದ ನಮ್ಮ ಸಮುದಾಯಕ್ಕೆ ಹಿನ್ನಡೆಯಾಗುತ್ತಿತ್ತು. ಈ ಹಿನ್ನೆಲೆಯಲ್ಲಿ ಮಾದಿಗ ಸಮುದಾಯಕ್ಕೆ ಮೀಸಲಾತಿ ಪ್ರಮಾಣ ಹೆಚ್ಚಿಸುವ ಅಗತ್ಯವಿದೆ. ಈ ಹಿಂದೆ ದೇಶದ ಜನಸಂಖ್ಯೆ 30 ಕೋಟಿ ಆಗಿದ್ದಾಗ ನೀಡಿದ್ದ ಶೇ.15ರಷ್ಟು ಮೀಸಲಾತಿ ಪ್ರಸ್ತುತ ಸಂದರ್ಭದಲ್ಲಿ ಸಾಲುತ್ತಿಲ್ಲ. ಈಗ ದೇಶದ ಜನಸಂಖ್ಯೆ 140 ಕೋಟಿಯಾಗುತ್ತಿದೆ. ಆದರೂ ಮೀಸಲಾತಿ ಪ್ರಮಾಣ ಹೆಚ್ಚಿಸಿಲ್ಲ. ಬಿಜೆಪಿ ಸರ್ಕಾರ ಮೀಸಲಾತಿ ಪ್ರಮಾಣವನ್ನು ಶೇ.17ಕ್ಕೆ ಹೆಚ್ಚಿಸಲು ಪ್ರಯತ್ನ ಮಾಡಿತ್ತು. ಸದಾಶಿವ ಆಯೋಗದ ವರದಿ ಜಾರಿಗೂ ಪ್ರಯತ್ನಿಸುತ್ತಿದೆ. ಹೀಗಿದ್ದರೂ ಮಾದಿಗ ಸಮುದಾಯವು ಬಿಜೆಪಿಗೆ ಮತ ನೀಡಲು ಮೀನಾಮೇಷ ಎಣಿಸುತ್ತಿರುವುದು ಸರಿಯಲ್ಲ ಎಂದು ವಿಷಾದಿಸಿದರು.

ಬಿಜೆಪಿ ಮುಖಂಡ, ಹಿರಿಯ ವಕೀಲ ಅರುಣ್ ಕುಮಾರ್ ಮಾತನಾಡಿ, ಸದಾಶಿವ ಆಯೋಗದ ವರದಿಯಂತೆ ಮಾದಿಗ ಸಮುದಾಯಕ್ಕೆ ಅಧಿಕಾರ ದೊರೆಯಬೇಕಾಗಿದೆ. ಈ ವಿಚಾರ ನ್ಯಾಯಾಲಯದಲ್ಲಿದ್ದು ಚುನಾವಣೆಯ ಬಳಿಕ ಸಮುದಾಯದ ಪರವಾಗಿ ತೀರ್ಪು ಬರಲಿದೆ. ಹೀಗೆ ಸಮುದಾಯದ ಬೆಳವಣಿಗೆಗೆ ನಾನಾ ರೀತಿಯಲ್ಲಿ ಬೆಂಬಲವಾಗಿ ನಿಂತಿರುವ ಬಿಜೆಪಿಗೆ ಈ ಬಾರಿ ಮತ ನೀಡಿ ಎಂದು ಮನವಿ ಮಾಡಿದರು. ಕಾರ್ಯಕ್ರಮದಲ್ಲಿ ಶಾಸಕ ಟಿ.ಎಸ್.ಶ್ರೀವತ್ಸ, ಮಾಜಿ ಶಾಸಕ ಸಿ.ರಮೇಶ್, ಬಿಜೆಪಿ ನಗರಾಧ್ಯಕ್ಷ ಎಲ್.ನಾಗೇಂದ್ರ, ಜಿಲ್ಲಾ ಬಿಜೆಪಿ ಅಧ್ಯಕ್ಷ ಎಲ್.ಆರ್.ಮಹದೇವಸ್ವಾಮಿ, ಹಿಂದುಳಿದ ವರ್ಗಗಳ ಮೋರ್ಚಾ ರಾಜ್ಯಾಧ್ಯಕ್ಷ ಕೌಟಿಲ್ಯ ರಘು, ರಾಜ್ಯ ಎಸ್‌ಸಿ ಮೋರ್ಚಾ ಉಪಾಧ್ಯಕ್ಷ ಶ್ರೀನಿವಾಸ್, ರಾಜ್ಯ ಎಸ್‌ಸಿ ಮೋರ್ಚಾ ಕಾರ್ಯಕಾರಣಿ ಸದಸ್ಯ ಕಿರಣ, ಮೈಸೂರು ನಗರ ಎಸ್‌ಸಿ ಮೋರ್ಚಾ ಪ್ರಧಾನ ಕಾರ್ಯದರ್ಶಿ ಸ್ವಾಮಿ, ಜಿಲ್ಲಾ ಯುವ ಮೋರ್ಚಾ ಪ್ರಧಾನ ಕಾರ್ಯದರ್ಶಿ ಮಧುರಾಜ್, ನಗರ ಪ್ರಧಾನ ಕಾರ್ಯದರ್ಶಿ ಮಹೇಶ್, ನರಸಿಂಹಯ್ಯ, ಪಾಲಿಕೆ ಮಾಜಿ ಸದಸ್ಯೆ ಶಾರದಮ್ಮ, ಮುಖಂಡರಾದ ಸ್ವಾಮಿ, ಭಾಗ್ಯ, ನರಸಿಂಹಯ್ಯ, ಧರ್ಮರಾಜ್, ಗಂಗಯ್ಯ, ಪಿಲ್ಲಹಳ್ಳಿ ಶಿವಣ್ಣ, ಕುರ್ಮಾ, ಆನಂದ್, ಮಹೇಶ್, ಸೋಮಶೇಖರ್, ಪುಟ್ಟಯ್ಯ, ಆನಂದ್, ಸೋಮು, ರವಿಶಂಕರ್, ಭಾಗ್ಯ, ಮೂಗೂರು ಸಿದ್ದರಾಜು, ಪುಟ್ಟಯ್ಯ ಹಾಗೂ ಇನ್ನಿತರರು ಪಾಲ್ಗೊಂಡಿದ್ದರು.



ಮೈಸೂರಿನ ಸಪ್ತಪದಿ ಕಲ್ಯಾಣ ಮಂಟಪದಲ್ಲಿ ನಡೆದ ಮಾದಿಗ ಸಮುದಾಯದ ಮುಖಂಡರು, ಕಾರ್ಯಕರ್ತರ ಸಮಾವೇಶವನ್ನು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಉದ್ಘಾಟಿಸಿದರು.

> “ಕಾಂಗ್ರೆಸ್ ಸರ್ಕಾರ ಮಾದಿಗ ಸಮುದಾಯದ ಅಭಿವೃದ್ಧಿಗೆ ನೀಡುವ ಅನುದಾನ ಸ್ಥಗಿತಗೊಳಿಸಿದೆ. ಮಾದಿಗ ಸಮುದಾಯಕ್ಕೆ ನೀಡಬೇಕಾದ ಸೌಲಭ್ಯಗಳನ್ನು ಸ್ಥಗಿತಗೊಳಿಸಿದೆ. ಈ ಹಿನ್ನೆಲೆಯಲ್ಲಿ ಲೋಕಸಭಾ ಚುನಾವಣೆಯಲ್ಲಿ ಮಾದಿಗ ಸಮುದಾಯ ಈ ಬಾರಿ ಬಿಜೆಪಿಯನ್ನು ಬೆಂಬಲಿಸಬೇಕು. ಇದರಿಂದ ಮುಂದಿನ ದಿನಗಳಲ್ಲಿ ಮಾದಿಗ ಸಮುದಾಯಕ್ಕೆ ಮತ್ತಷ್ಟು ಸೌಲಭ್ಯ ಒದಗಿಸಲು ಬಿಜೆಪಿಗೆ ಶಕ್ತಿ ಬರುತ್ತದೆ. **–ಬಿ.ವೈ.ವಿಜಯೇಂದ್ರ**

ಮಸ್ಟರಿಂಗ್ ಕೇಂದ್ರಗಳ ಸ್ಥಾಪನೆ

ಮೈಸೂರು: ಏ.26ರಂದು ಮತದಾನ ನಡೆಯುವ ಲೋಕಸಭಾ ಚುನಾವಣೆ ಸಂಬಂಧ ಏ.25ರಂದು ಜಿಲ್ಲೆಯ ಎಲ್ಲಾ ಮಸ್ಟರಿಂಗ್ ಕಾರ್ಯ ನಡೆಸಲು ಮಸ್ಟರಿಂಗ್ ಕೇಂದ್ರಗಳನ್ನು ಸ್ಥಾಪಿಸಲಾಗಿದೆ.

ಪಿರಿಯಾಪಟ್ಟಣದ ಪುಷ್ಪ ಆಂಗ್ಲ ಮಾಧ್ಯಮ ಶಾಲೆ, ಕೆಆರ್ ನಗರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹುಣಸೂರಿನ ಸೇಂಟ್ ಜೋಸೆಫ್ ಪದವಿ ಪೂರ್ವ ಕಾಲೇಜು, ಹೆಚ್.ಡಿ.ಕೋಟೆಯ ಸೇಂಟ್ ಮೇರಿಸ್ ಆಂಗ್ಲ ಮಾಧ್ಯಮ ಪ್ರೌಢಶಾಲೆ, ನಂಜನಗೂಡಿನ ಸರ್ಕಾರಿ ಬಾಲಕರ ಜೂನಿಯರ್ ಕಾಲೇಜು, ಮಹಾರಾಣಿ ಮಹಿಳಾ ಕಲಾ ಕಾಲೇಜು, ಮಹಾರಾಜ ಸರ್ಕಾರಿ ಪದವಿ ಪೂರ್ವ ಕಾಲೇಜು, ಮೈಸೂರಿನ ಬೇಡನ್ ಪೋವೆಲ್ ಆಂಗ್ಲ ಮಾಧ್ಯಮ ಪಬ್ಲಿಕ್ ಶಾಲೆ, ಶ್ರೀ ಶಿವರಾತ್ರೀಶ್ವರ ಕಲಾ ವಾಣಿಜ್ಯ–ವಿಜ್ಞಾನ ಕಾಲೇಜು, ನಂಜನಗೂಡಿನ ಜೆಎಸ್‌ಎಸ್ ಪ್ರಥಮ ದರ್ಜೆ ಕಾಲೇಜು, ಟಿ.ನರಸೀಪುರದ ವಿದ್ಯೋದಯ ಪದವಿ ಪೂರ್ವ ಕಾಲೇಜುಗಳಲ್ಲಿ ಮಸ್ಟರಿಂಗ್ ಕೇಂದ್ರಗಳನ್ನು ಸ್ಥಾಪಿಸಲಾಗಿದೆ. ಯಾವುದೇ ಮತದಾನಾಧಿಕಾರಿಗಳು ಬೆಳಗ್ಗೆ 8.30ರೊಳಗೆ ಕಡ್ಡಾಯವಾಗಿ ಹಾಜರಿರಬೇಕು ಎಂದು ಜಿಲ್ಲಾಧಿಕಾರಿ ಡಾ.ರಾಜೇಂದ್ರ ತಿಳಿಸಿದ್ದಾರೆ.

ಕೆ.ಆರ್.ಕ್ಷೇತ್ರದಲ್ಲಿ ಕಾಂಗ್ರೆಸ್ ಅಭ್ಯರ್ಥಿ ಲಕ್ಷ್ಮಣ ಭರ್ಜರಿ ಪ್ರಚಾರ

ಮೈಸೂರು,ಏ.22(ಎಂಟಿವೈ)– ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಎಂ.ಲಕ್ಷ್ಮಣ ಮೈಸೂರಿನ ಕೆ.ಆರ್. ಕ್ಷೇತ್ರ ವ್ಯಾಪ್ತಿಯ ವಿವಿಧೆಡೆ ಮಾಜಿ ಶಾಸಕ ಎಂ.ಕೆ.ಸೋಮಶೇಖರ್, ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್ ಹಾಗೂ ಕ್ಷೇತ್ರದ ಮುಖಂಡರೊಂದಿಗೆ ಭರ್ಜರಿ ರೋಡ್ ಶೋ, ಪಾದಯಾತ್ರೆ ನಡೆಸಿ ಬಿರುಸಿನ ಮತಯಾಚಿಸಿದರು.



ಮೈಸೂರಿನ ಜೆ.ಪಿ.ನಗರದಲ್ಲಿರುವ ಅಕ್ಕ ಮಹಾದೇವಿ ಪುತ್ಥಳಿಗೆ ಮಾಲಾರ್ಪಣೆ ಮಾಡಿ ಪ್ರಚಾರ ಆರಂಭಿಸಿದ ಅವರು, ಭರ್ಜರಿ ರೋಡ್ ಶೋ ನಡೆಸಿ, ಬೈಕ್ ರ್‍ಯಾಲಿಯಲ್ಲಿ ಪಾಲ್ಗೊಂಡರು. ಬಳಿಕ ಜನತಾ ಬಡಾವಣೆ, ಕವಿತಾ ಬೇಕರಿ, ನಾಚನಹಳ್ಳಿ ಪಾಳ್ಯ, ಅಶೋಕಪುರಂಗೆ ಆಗಮಿಸಿ ಡಾ.ಬಿ.ಆರ್.ಅಂಬೇಡ್ಕರ್ ಪ್ರತಿಮೆಗೆ ಮಾಲಾರ್ಪಣೆ ಮಾಡಿದರು. ನಂತರ ಅಶೋಕಪುರಂನಲ್ಲಿ ಪಾದಯಾತ್ರೆ ನಡೆಸಿ ಮತ ಯಾಚಿಸಿದರು. ನಂತರ ಆದಮ್ ಖಾನ್ ಮಸೀದಿ ರಸ್ತೆ, ಅಗ್ರಹಾರದ 101 ಗಣಪತಿ ದೇವಾಲಯ, ರಾಮಾನುಜ ರಸ್ತೆ ಚಾಮುಂಡಿಪುರಂ, ವಿದ್ಯಾರಣ್ಯಪುರಂ, ಕನಕಗಿರಿ, ದೇವರಾಜ ಕಾಲೋನಿಯಲ್ಲಿ ರೋಡ್ ಶೋ ನಡೆಸಿ, ಮತ ಯಾಚಿಸಿದರು.

ಇದೆ ವೇಳೆ ಮಾಜಿ ಶಾಸಕ ಎಂ.ಕೆ. ಸೋಮಶೇಖರ್ ಮಾತನಾಡಿ, ಕಾಂಗ್ರೆಸ್ ಅಭ್ಯರ್ಥಿ ಎಂ.ಲಕ್ಷ್ಮಣ ಕಳೆದ ಕೆಲವು ದಶಕಗಳಿಂದ ಸಾಮಾಜಿಕ ಕಳಕಳಿ ಇರುವ ಅನೇಕ ಹೋರಾಟ ಮಾಡಿಕೊಂಡು ಬಂದಿದ್ದಾರೆ. ಹೋರಾಟಗಾರನಿಗೆ ಕಾಂಗ್ರೆಸ್ ಪಕ್ಷ ಟಿಕೆಟ್ ನೀಡಿದೆ. ಸಂಸತ್ ಪ್ರವೇಶಿಸುವವರಿಗೆ ಹೆಚ್ಚು ತಿಳಿದಿರಬೇಕು. ಕಾಂಗ್ರೆಸ್ ಪಕ್ಷ ಎಲ್ಲಾ ಬಡ, ಮಧ್ಯಮ ವರ್ಗದ ಬಗ್ಗೆ ಕಾಳಜಿ ಹೊಂದಿದೆ. ಈ ಹಿನ್ನೆಲೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ಎಂ.ಲಕ್ಷ್ಮಣ ಅವರನ್ನು ಬೆಂಬಲಿಸುವಂತೆ ಕೋರಿದರು.

ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಎಂ.ಲಕ್ಷ್ಮಣ ಮಾತನಾಡಿ, ದೇಶದ ಮುಂದಿನ ಭವಿಷ್ಯದ ಚುನಾವಣೆಗೆ ಕ್ಷಣಗಣನೆ ಆರಂಭವಾಗಿದೆ. ನಾನು ಒಬ್ಬ ಸಾಮಾನ್ಯ ರೈತ ಮಗನಾಗಿ, ಬಡವರ ಕಷ್ಟವನ್ನು ಅರಿತಿದ್ದೇನೆ. ಹಲವು ವರ್ಷಗಳಿಂದ ಪಕ್ಷಕ್ಕೆ ಸೇವೆ ಸಲ್ಲಿಸುತ್ತಿರುವ ಕಾರ್ಯಕರ್ತ. ರಾಜಕೀಯದಲ್ಲಿ ಬಡವರ ಮಕ್ಕಳು ಬೆಳೆಯಬಹುದು ಎಂಬುದನ್ನು ನಮ್ಮ ಪಕ್ಷ ತೋರಿಸುತ್ತಿದೆ. ಮೈಸೂರು–ಕೊಡಗು ಕ್ಷೇತ್ರದ ಅಭಿವೃದ್ಧಿಗೆ ದೂರದೃಷ್ಟಿಯೊಂದಿಗೆ ಪ್ರಣಾಳಿಕೆಯನ್ನು ಬಿಡುಗಡೆ ಮಾಡಿದ್ದೇನೆ. 23 ಪ್ರಣಾಳಿಕೆ 23 ಕಾರ್ಯಕ್ರಮಗಳನ್ನು ಭರವಸೆ ನೀಡಿದ್ದೇನೆ. ಗೆದ್ದ ಬಳಿಕ ಅದನ್ನೆಲ್ಲ ಈಡೇರಿಸುವ ಕೆಲಸ ಮಾಡುತ್ತೇನೆ. ರಾಜ್ಯ ಸರ್ಕಾರ ನುಡಿದಂತೆ ನಡೆದಿದೆ. ಸರ್ಕಾರದ 5 ಗ್ಯಾರಂಟಿ ಯೋಜನೆಗಳ ಸದುಪಯೋಗ ಮಾಡಿಕೊಂಡು ಜನ ನೆಮ್ಮದಿಯಿಂದ ಜೀವನ ನಡೆಸುತ್ತಿದ್ದಾರೆ. ಕೇಂದ್ರದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದರೆ 5 ನ್ಯಾಯಗಳೂ ಜಾರಿಯಾಗುತ್ತವೆ. ಮಹಿಳೆಯರು ಸ್ವಾವಲಂಬಿಯಾಗಿ ಬದುಕಬಹುದು. ಅದೆಲ್ಲ ಜಾರಿಯಾಗಲು ನಮ್ಮ ಅಭ್ಯರ್ಥಿಗಳು ಗೆಲುವು ಸಾಧಿಸಬೇಕು. ಪ್ರಣಾಳಿಕೆಯಲ್ಲಿ ಕೊಟ್ಟಿರುವ ಅಭಿವೃದ್ಧಿ ಮಾಡಲಿಕ್ಕೆ ಬದ್ಧನಾಗಿದ್ದೇನೆ. ದಯ ಮಾಡಿ ಇದೊಂದು ಬಾರಿ ಮತ ನೀಡಿ ಎಂದು ಮನವಿ ಮಾಡಿದರು. ಕೆಪಿಸಿಸಿ ಮಹಿಳಾ ಘಟಕ ಮತ್ತು ಗ್ಯಾರಂಟಿ ಸಮಿತಿಯ ರಾಜ್ಯ ಉಪಾಧ್ಯಕ್ಷೆ ಡಾ.ಪುಷ್ಪಾ, ಮಾಜಿ ಮೇಯರ್‌ಗಳಾದ ಪುರುಷೋತ್ತಮ್, ಬಿ.ಎಲ್. ಭೈರಪ್ಪ, ಎಂ.ಶಿವಣ್ಣ, ಪಾಲಿಕೆ ಮಾಜಿ ಸದಸ್ಯ ಪ್ರದೀಪ್‌ಕುಮಾರ್ ಇನ್ನಿತರರಿದ್ದರು.

ಮೇ 7ರಂದು ರಾಜ್ಯದಲ್ಲಿ ಎರಡನೇ ಹಂತದ ಲೋಕ ಸಮರ

ಪ್ರಹ್ಲಾದ್ ಜೋಷಿ, ಜಗದೀಶ್ ಶೆಟ್ಟರ್, ಬಸವರಾಜ ಬೊಮ್ಮಾಯಿ ಸೇರಿ ಹಲವು ಪ್ರಮುಖರ ಹಣಾಹಣಿ

• ನಾಮಪತ್ರ ಹಿಂತೆಗೆದುಕೊಳ್ಳುವ ಪ್ರಕ್ರಿಯೆಗೆ ತೆರೆ • ಹಲವು ಕ್ಷೇತ್ರಗಳಲ್ಲಿ ಸಿದ್ದರಾಮಯ್ಯ ಸಂಪುಟ ಸದಸ್ಯರ ಸಂಬಂಧಿಗಳೇ ಸ್ಪರ್ಧಿಗಳು



ಬೆಂಗಳೂರು,ಏ.22(ಕೆಎಂಶಿ)–ಕೇಂದ್ರ ಸಚಿವ ಪ್ರಹ್ಲಾದ್ ಜೋಷಿ, ಮಾಜಿ ಮುಖ್ಯಮಂತ್ರಿಗಳಾದ ಜಗದೀಶ್ ಶೆಟ್ಟರ್, ಬಸವರಾಜ ಬೊಮ್ಮಾಯಿ ಸೇರಿದಂತೆ ಹಲವು ಘಟಾನುಘಟಿಗಳು ಮೇ 7ರಂದು ನಡೆಯುತ್ತಿರುವ ಎರಡನೇ ಹಂತದ ಲೋಕಸಭಾ ಚುನಾವಣಾ ಕಣದಲ್ಲಿದ್ದಾರೆ.

ನಾಮಪತ್ರ ಹಿಂತೆಗೆದುಕೊಳ್ಳಲು ಕಡೆಯ ದಿನವಾದ ಇಂದು ದಾವಣಗೆರೆ, ಶಿವಮೊಗ್ಗ, ಉತ್ತರ ಕನ್ನಡ, ಹಾವೇರಿ, ಧಾರವಾಡ, ಬೆಳಗಾವಿ, ಚಿಕ್ಕೋಡಿ, ವಿಜಾಪುರ, ಬಾಗಲಕೋಟೆ, ಬೀದರ್, ಗುಲ್ಬರ್ಗ, ರಾಯಚೂರು, ಕೊಪ್ಪಳ ಹಾಗೂ ಬಳ್ಳಾರಿ ಲೋಕಸಭಾ ಕ್ಷೇತ್ರಗಳಲ್ಲಿ ಇಂದು ನಾಮಪತ್ರ ಹಿಂದಕ್ಕೆ ಪಡೆಯುವ ಕಾರ್ಯ ಪೂರ್ಣಗೊಂಡ ನಂತರ ಘಟಾನುಘಟಿಗಳು ಕಣದಲ್ಲಿ ಉಳಿದಿದ್ದಾರೆ.

ಎನ್‌ಡಿಎ ಮೈತ್ರಿಕೂಟದಲ್ಲಿ ಜೆಡಿಎಸ್ ಭಾಗಿಯಾಗಿರುವುದರಿಂದ ಆ ಪಕ್ಷ ಎರಡನೇ ಹಂತದ ಯಾವುದೇ ಕ್ಷೇತ್ರಗಳಲ್ಲಿ ಸ್ಪರ್ಧಿಸದೆ, ಮಿತ್ರ ಪಕ್ಷ ಬಿಜೆಪಿಗೆ ಬೆಂಬಲ ವ್ಯಕ್ತಪಡಿಸಿದೆ.

ಏ.26ರಂದು ನಡೆಯುವ ಮೊದಲ ಹಂತದ 14 ಕ್ಷೇತ್ರಗಳಲ್ಲಿ ಎನ್‌ಡಿಎ ಕೂಟದ ಬಿಜೆಪಿ 11 ಹಾಗೂ ಜೆಡಿಎಸ್ ಮೂರು ಕ್ಷೇತ್ರಗಳಲ್ಲಿ ಕಣದಲ್ಲಿ ಉಳಿದಿದ್ದರೆ, ಕಾಂಗ್ರೆಸ್ ಎಲ್ಲಾ ಕ್ಷೇತ್ರಗಳಲ್ಲೂ ತನ್ನ ಉಮೇದುವಾರರನ್ನು ಅದೃಷ್ಟ ಪರೀಕ್ಷೆಗೆ ಇಳಿಸಿದೆ.

ಎರಡನೇ ಹಂತದಲ್ಲಿ ನಡೆಯುತ್ತಿರುವ ಧಾರವಾಡ, ಶಿವಮೊಗ್ಗ ಹಾಗೂ ದಾವಣಗೆರೆಯಲ್ಲಿ ಕೆಲವು ಪ್ರಭಾವಿಗಳು ವಿವಿಧ ಕಾರಣಕ್ಕೆ ಚುನಾವಣಾ ಕಣದಲ್ಲಿ ಉಳಿದಿದ್ದರೂ ಮೇಲ್ನೋಟಕ್ಕೆ ರಾಷ್ಟ್ರೀಯ ಪಕ್ಷಗಳ ಅಭ್ಯರ್ಥಿಗಳ ನಡುವೆಯೇ ಸೆಣಸಾಟ ನಡೆಯಲಿದೆ. ಕೇಂದ್ರ ಸಚಿವ ಪ್ರಹ್ಲಾದ್ ಜೋಷಿ ಧಾರವಾಡದಿಂದ ನಾಲ್ಕನೇ ಬಾರಿಗೆ ಮರು ಪ್ರವೇಶ ಬಯಸಿ ಕಣಕ್ಕಿಳಿದಿದ್ದರೆ, ಮಾಜಿ ಮುಖ್ಯಮಂತ್ರಿಗಳಾದ ಜಗದೀಶ್ ಶೆಟ್ಟರ್ ಹಾಗೂ ಬಸವರಾಜ ಬೊಮ್ಮಾಯಿ ಬಿಜೆಪಿಯಿಂದ ಇದೇ ಮೊದಲ ಬಾರಿಗೆ ಕೇಂದ್ರ ರಾಜಕಾರಣದತ್ತ ಮುಖ ಮಾಡಿದ್ದಾರೆ.







> **ಮೊದಲನೇ ಹಂತಕ್ಕಿಂತ 2ನೇ ಹಂತದಲ್ಲಿ ಪ್ರಭಾವಿಗಳ ಮುಂದೆ ಪ್ರಭಾವಿಗಳೇ ಸೆಣಸಾಟಕ್ಕೆ ಇಳಿದಿದ್ದಾರೆ.**

ಮುಖ್ಯಮಂತ್ರಿ ಸಿದ್ದರಾಮಯ್ಯ ಸಂಪುಟದ ಐವರು ಪ್ರಭಾವೀ ಸಚಿವರು ತಮ್ಮ ಪತ್ನಿ ಇಲ್ಲವೇ ಪುತ್ರ, ಪುತ್ರಿಗೆ ಕಾಂಗ್ರೆಸ್ ಟಿಕೆಟ್ ಕೊಡಿಸಿ ಚುನಾವಣಾ ಹೋರಾಟಕ್ಕೆ ಇಳಿಸಿದ್ದಾರೆ.

ರಾಷ್ಟ್ರೀಯ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ತಾವು ಈ ಹಿಂದೆ ಪ್ರತಿನಿಧಿಸುತ್ತಿದ್ದ ಗುಲ್ಬರ್ಗ ಮೀಸಲು ಕ್ಷೇತ್ರವನ್ನು ತಮ್ಮ ಅಳಿಯ ರಾಧಾಕೃಷ್ಣ ಅವರಿಗೆ ಬಿಟ್ಟುಕೊಟ್ಟಿದ್ದಾರೆ.

ಸಿದ್ದರಾಮಯ್ಯ ಸಂಪುಟದಲ್ಲಿ ಸಚಿವರಾಗಿರುವ ಎಸ್.ಎಸ್.ಮಲ್ಲಿಕಾರ್ಜುನ್ ತಮ್ಮ ಪತ್ನಿ ಪ್ರಭಾ ಮಲ್ಲಿಕಾರ್ಜುನ್ ಅವರನ್ನು ದಾವಣಗೆರೆಯಿಂದಲೂ, ಲಕ್ಷ್ಮಿ ಹೆಬ್ಬಾಳ್ಕರ್ ಪುತ್ರ ಮೃಣಾಲ್ ಹೆಬ್ಬಾಳ್ಕರ್ ಬೆಳಗಾವಿಯಿಂದ, ಸತೀಶ್ ಜಾರಕಿಹೊಳಿ ಪುತ್ರಿ ಪ್ರಿಯಾಂಕ ಜಾರಕಿಹೊಳಿ ಚಿಕ್ಕೋಡಿಯಿಂದಲೂ, ಶಿವಾನಂದ ಪಾಟೀಲ್ ಪುತ್ರಿ ಸಂಯುಕ್ತ ಪಾಟೀಲ್ ಬಾಗಲಕೋಟೆಯಿಂದಲೂ, ಈಶ್ವರಖಂಡ್ರೆ ಪುತ್ರ ಸಾಗರ್ ಖಂಡ್ರೆ ಬೀದರ್‌ನಿಂದ ಕಾಂಗ್ರೆಸ್ ಅಭ್ಯರ್ಥಿಗಳಾಗಿ ಕಣಕ್ಕಿಳಿದಿದ್ದಾರೆ.

ಇನ್ನು ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಪುತ್ರ ಬಿ.ವೈ.ರಾಘವೇಂದ್ರ ಶಿವಮೊಗ್ಗದಿಂದ, ಮಾಜಿ ಉಪಮುಖ್ಯಮಂತ್ರಿ ಬಿ.ಶ್ರೀರಾಮುಲು ಬಳ್ಳಾರಿಯಿಂದ, ಕೇಂದ್ರದ ಮತ್ತೊಬ್ಬ ಸಚಿವ ಭಗವಂತ ಖೂಬಾ ಬೀದರ್‌ನಿಂದ ಅದೃಷ್ಟ ಪರೀಕ್ಷೆಗೆ ಇಳಿದಿದ್ದಾರೆ. ಮೊದಲನೇ ಹಂತಕ್ಕಿಂತ ಎರಡನೇ ಹಂತದಲ್ಲಿ ಪ್ರಭಾವಿಗಳ ಮುಂದೆ ಪ್ರಭಾವಿಗಳೇ ಸೆಣಸಾಟಕ್ಕೆ ಇಳಿದಿದ್ದಾರೆ.



ಮೈಸೂರು ಮಿತ್ರ

ವಿವಿಧೆಡೆ 'ಕೈ' ಅಭ್ಯರ್ಥಿ ಲಕ್ಷ್ಮಣ ಪರ ಮತಯಾಚನೆ



ಹುಣಸೂರು, ಏ.22– ನಗರದ ಕಲ್ಕುಣಿಕೆ ಸೇರಿದಂತೆ ತಾಲೂಕಿನ ಹೊಸರಾಮೇನ ಹಳ್ಳಿ, ಗಾವಡಗೆರೆ, ಹರವೆ, ಬಿಳಿಕೆರೆ ಗ್ರಾಮ ಗಳಲ್ಲಿ ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಲಕ್ಷ್ಮಣ ಪರ ಶಾಸಕ ಅನಿಲ್ ಚಿಕ್ಕಮಾದು ಹಾಗೂ ಮಾಜಿ ಶಾಸಕ ಹೆಚ್.ಪಿ.ಮಂಜುನಾಥ್ ಮತಯಾಚಿಸಿದರು.

ಶಾಸಕ ಅನಿಲ್ ಚಿಕ್ಕಮಾದು ಮಾತನಾಡಿ, ಬಿಜೆಪಿಯವರು ಸಂವಿಧಾನ ತಿದ್ದುಪಡಿಗೆ 400 ಸ್ಥಾನದ ಗುರಿ ಇಟ್ಟುಕೊಂಡಿದ್ದಾರೆ. ಆದರೆ ಜನತೆ ಚುನಾವಣೆಯಲ್ಲಿ ಸಂವಿಧಾನ ವಿರೋಧಿಗಳಿಗೆ ತಕ್ಕ ಪಾಠ ಕಲಿಸಲಿದ್ದಾರೆ ಎಂದರು. ಮುಖ್ಯಮಂತ್ರಿ ಸಿದ್ದರಾಮಯ್ಯ ನಾಯಕ ಸಮಾಜಕ್ಕೆ ಸಾಕಷ್ಟು ಅನುಕೂಲ ಮಾಡಿಕೊಟ್ಟಿದ್ದಾರೆ. ತಾಲೂಕಿನ ನಾಯಕ ಸಮಾಜದ ಅಭಿವೃದ್ಧಿಗೆ ಮಾಜಿ ಶಾಸಕ ಹೆಚ್.ಪಿ.ಮಂಜುನಾಥ್ ಶ್ರಮಿಸಿದ್ದಾರೆ. ಹೀಗಾಗಿ ನಮ್ಮ ಸಮಾಜ ಈ ಬಾರಿ ಚುನಾವಣೆಯಲ್ಲಿ ಕಾಂಗ್ರೆಸ್‌ಗೆ ಹೆಚ್ಚು ಮತ ನೀಡಬೇಕು ಎಂದು ಮನವಿ ಮಾಡಿದರು.

ಮಾಜಿ ಶಾಸಕ ಹೆಚ್.ಪಿ.ಮಂಜುನಾಥ್ ಮಾತನಾಡಿ, ಮತದಾರರು ಜನಪರವಾಗಿ ನಿಲ್ಲುವ ವ್ಯಕ್ತಿಗೆ ಮತ ನೀಡಬೇಕು. ಈ ಚುನಾವಣೆ ಮಹತ್ವದ್ದಾಗಿದ್ದು, ನಮ್ಮ ಪಕ್ಷದ ಅಭ್ಯರ್ಥಿ ಲಕ್ಷ್ಮಣ ಅವರಿಗೆ ಮತ ನೀಡಬೇಕು. ಅವರು ಸಂಸದರಾದ ಬಳಿಕ ನನ್ನ ಜೊತೆ ನಿಂತು ಕೆಲಸ ಮಾಡು ತ್ತಾರೆ. ಲಕ್ಷ್ಮಣ ವಿದ್ಯಾವಂತರು, ಬುದ್ಧಿವಂತರು, ಪ್ರಜ್ಞಾವಂತರಿದ್ದಾರೆ. ಓರ್ವ ಎಂಪಿಯಾಗಲು ಬೇಕಾದ ಎಲ್ಲಾ ಅರ್ಹತೆ ಹೊಂದಿರುವ ಅವರ ಕೈ ಬಲಪಡಿಸಿದರೇ ಸಂಸತ್ತಿನಲ್ಲಿ ಜನರಿಗೆ ಆಗುತ್ತಿರುವ ಅನ್ಯಾಯದ ಬಗ್ಗೆ ಮಾತನಾಡಿ ಪರಿಹಾರ ಕೊಡಿಸುವ ಕೆಲಸ ಮಾಡುತ್ತಾರೆ. ಇದೊಂದು ಬಾರಿ ನಮ್ಮ ಪಕ್ಷದ ಅಭ್ಯರ್ಥಿಗೆ ಮತ ನೀಡಿ. ಮುಂದೆ ಇಂತಹ ಸಾಮಾನ್ಯ ವ್ಯಕ್ತಿ ಸಿಗುತ್ತಾರೋ ಗೊತ್ತಿಲ್ಲ. ಈ ಸಂದರ್ಭ ಸಿಕ್ಕಿರುವ ಪ್ರಾಮಾಣಿಕ ವ್ಯಕ್ತಿಯನ್ನು ಒಮ್ಮೆ ಉಳಿಸಿಕೊಳ್ಳುವುದು ನಿಮ್ಮ ಕರ್ತವ್ಯ ಎಂದರು.

ಈ ವೇಳೆ ಹುಣಸೂರು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ನಾರಾಯಣ್, ಜಿಪಂ ಮಾಜಿ ಸದಸ್ಯ ಡಿ.ಕೆ.ಕುನ್ನೇಗೌಡ, ಕುರುಬ ಸಮಾಜದ ನಿಕಟ ಪೂರ್ವ ಅಧ್ಯಕ್ಷ ಸುಬ್ರಹ್ಮಣ್ಯ, ನಾಯಕ ಸಮಾಜದ ತಾಲೂಕು ಅಧ್ಯಕ್ಷ ಅಣ್ಣಯ್ಯ ನಾಯಕ, ಮುಖಂಡರಾದ ಎ.ಪಿ.ಸ್ವಾಮಿ, ಬಸವ ರಾಜೇಗೌಡ, ಕೆಂಪನಾಯಕ, ಪ್ರೇಮ್ ಕುಮಾರ್, ನಾರಾಯಣ ನಾಯಕ, ರಾಜು, ಮಹೇಶ್ ಚಂದ್ರನಾಯಕ, ಕುಮಾರ್ ವಕೀಲರಾದ ಮಹದೇವ್, ಲೋಕೇಶ್, ಪಿ.ಟಿ.ಮಾದೇವ್ ಇತರರಿದ್ದರು.

ರೈತರನ್ನು ಭಿಕ್ಷುಕರಂತೆ ಕಾಣುವ ಸರ್ಕಾರ ಬದುಕಿದ್ದು ಸತ್ತಂತೆ

ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಆಕ್ರೋಶ



ತಿ.ನರಸೀಪುರ ತಾಲೂಕಿನ ಮೂಗೂರು ಗ್ರಾಮದಲ್ಲಿ ನಡೆದ ಕಾರ್ಯಕರ್ತರ ಬೃಹತ್ ಬಹಿರಂಗ ಸಭೆಯನ್ನು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಉದ್ಘಾಟಿಸಿದರು.

ತಿ.ನರಸೀಪುರ, ಏ.22– ನಾಡಿನ ಜನತೆಗೆ ಅನ್ನ ನೀಡುವ ರೈತರನ್ನು ಭಿಕ್ಷುಕರಂತೆ ಕಾಣುವ ರಾಜ್ಯ ಸರ್ಕಾರ ರೈತರ ಪಾಲಿಗೆ ಬದುಕಿದ್ದು ಸತ್ತಂತೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಆಕ್ರೋಶ ವ್ಯಕ್ತಪಡಿಸಿದರು.

ತಾಲೂಕಿನ ಮೂಗೂರು ಗ್ರಾಮದ ತ್ರಿಪುರ ಸುಂದರಿ ಅಮ್ಮನವರ ದೇವಸ್ಥಾನದ ಮುಂಭಾಗ ನಡೆದ ಜೆಡಿಎಸ್ ಮತ್ತು ಬಿಜೆಪಿ ಕಾರ್ಯಕರ್ತರ ಬೃಹತ್ ಬಹಿರಂಗ ಸಭೆಯಲ್ಲಿ ಮಾತನಾಡಿದ ಅವರು, ಲೋಕಸಭೆ ಚುನಾವಣೆ ನಿಮಿತ್ತ ಪ್ರವಾಸ ಕೈಗೊಂಡ ವೇಳೆ ರಾಜ್ಯದಲ್ಲಿ ಜವಾಬ್ದಾರಿ ಸರ್ಕಾರ ಬದುಕಿದೆ. ಜವಾಬ್ದಾರಿಯುತ ಮುಖ್ಯಮಂತ್ರಿ ಇದ್ದಾರೆ ಎಂದು ಅನಿಸಲೇ ಇಲ್ಲ. ಮುಖ್ಯಮಂತ್ರಿ ಸಿದ್ದರಾಮಯ್ಯ ಈ ಭಾಗದವರೇ ಆಗಿದ್ದರೂ ರೈತರ ಪರಿಸ್ಥಿತಿ ನೋಡಿ ದುಃಖವಾಯಿತು. ಕಾವೇರಿ ನೀರನ್ನು ತಮಿಳುನಾಡಿಗೆ ಹರಿಸಿ ಈ ಭಾಗದ ರೈತರ ಕೈಗೆ ಚೊಂಬು ಕೊಡುವ ಕೆಲಸವನ್ನು ಮುಖ್ಯಮಂತ್ರಿ ಮಾಡಿದ್ದಾರೆ. ತಮಿಳುನಾಡಿಗೆ ಹರಿಸಿದ ನೀರಿನಲ್ಲಿ ಸ್ವಲ್ಪ ನೀರನ್ನು ರಾಜ್ಯದ ರೈತರ ಬೆಳೆಗೆ ಬಿಟ್ಟಿದ್ದರೆ ರೈತರಿಗೆ ಈ ದುಸ್ಥಿತಿ ಬರುತ್ತಿರಲಿಲ್ಲ. ಬೆಳೆ ಬೆಳೆಯಲಾಗದೇ ರೈತರು ಕಂಗಾಲಾಗಿದ್ದಾರೆ. ಬರದ ಸಂದರ್ಭ ಪರಿಹಾರ ಕೊಡಲು ರಾಜ್ಯ ಸರ್ಕಾರಕ್ಕೆ ಸಾಧ್ಯವಾಗುತ್ತಿಲ್ಲ. ಜನ ಜಾನುವಾರುಗಳಿಗೆ ನೀರಿಲ್ಲದ ಪರಿಸ್ಥಿತಿ ನಿರ್ಮಾಣವಾಗಿದೆ ಎಂದು ಆರೋಪಿಸಿದರು.

10 ದಿನಕ್ಕೆ 9 ಕೊಲೆ: ಕಾಂಗ್ರೆಸ್ ಸರ್ಕಾರದಲ್ಲಿ ಕಾನೂನು ಸುವ್ಯವಸ್ಥೆ ಸಂಪೂರ್ಣ ಹದಗೆಟ್ಟಿದೆ. ಅಭಿವೃದ್ಧಿ ಕಾರ್ಯ ಮರೀಚಿಕೆಯಾಗಿದೆ. ದಲಿತರು ಮತ್ತು ರೈತರಿಗೆ ಅನ್ಯಾಯ ಮಾಡಲಾಗುತ್ತಿದೆ. ದಿನ ಬೆಳಗಾದರೆ ಕೊಲೆಗಳಾಗುತ್ತಿವೆ. ಕಳೆದ 10 ದಿನಗಳಲ್ಲಿ 9 ಕೊಲೆಗಳಾಗಿದ್ದು ಯಾರ ಪ್ರಾಣಕ್ಕೂ ಗ್ಯಾರಂಟಿ ಇಲ್ಲದಂತಾಗಿದೆ ಎಂದು ಗಂಭೀರ ಆರೋಪ ಮಾಡಿದರು.

ಬಾಲರಾಜುಗೆ ಲಕ್ಷ ಮತಗಳ ಅಂತರದ ಗೆಲುವು: ಚಾಮರಾಜನಗರ ಕ್ಷೇತ್ರದಲ್ಲಿ ಬಿಜೆಪಿ–ಜೆಡಿಎಸ್ ಕಾರ್ಯಕರ್ತರ ಶ್ರಮದಿಂದ ನಮ್ಮ ಅಭ್ಯರ್ಥಿ ಬಾಲರಾಜು ಒಂದು ಲಕ್ಷ ಮತಗಳ ಅಂತರದಿಂದ ಗೆದ್ದು ಬರುತ್ತಾರೆ. ಆ ವಿಶ್ವಾಸ ನನಗಿದೆ. ಕ್ಷೇತ್ರದ ಜನತೆ ಅವರಿಗೆ ಆಶೀರ್ವಾದ ಮಾಡಬೇಕು ಎಂದು ಮನವಿ ಮಾಡಿದರು.

ಕಣ್ಣೀರಾಕಿದ ಬಾಲರಾಜು: ಅಭ್ಯರ್ಥಿ ಬಾಲರಾಜು ಮಾತನಾಡಿ, ಒಮ್ಮೆ ಶಾಸಕನಾಗಿದ್ದೆ. 3 ವರ್ಷಗಳ ಅಧಿಕಾರ ಮಾತ್ರವೇ ನನಗೆ ಸಿಕ್ಕಿತ್ತು. ಈಗ ಲೋಕಸಭೆಗೆ ಎನ್‌ಡಿಎ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದೇನೆ. ಈ ಬಾರಿ ನನ್ನನ್ನು ಕೈ ಬಿಡಬೇಡಿ. ದೆಹಲಿಯಲ್ಲಿ ನಿಮ್ಮ ದನಿಯಾಗಿ ಕೆಲಸ ಮಾಡುತ್ತೇನೆ. ನಿಮ್ಮ ಕುಟುಂಬದಲ್ಲಿ ನನ್ನನ್ನು ಸದಸ್ಯನೆಂದು ಪರಿಗಣಿಸಿ ಅವಕಾಶಕೊಡಿ. ಇಂತಹ ಅವಕಾಶ ನನಗೆಂದೂ ಸಿಗದು, ಆಶೀರ್ವಾದ ಮಾಡಿ ಎಂದು ಗದ್ಗದಿತರಾಗಿ ಕಣ್ಣೀರು ಹಾಕಿದರು.

ಕಾರ್ಯಕ್ರಮದಲ್ಲಿ ಶಾಸಕ ಮಂಜುನಾಥ್, ಮಾಜಿ ಶಾಸಕ ಎಂ.ಅಶ್ವಿನ್ ಕುಮಾರ್, ಮುಖಂಡ ಡಾ.ರೇವಣ್ಣ, ಮೈಸೂರು ಜಿಲ್ಲಾ ಗ್ರಾಮಾಂತರ ಅಧ್ಯಕ್ಷ ಎಲ್.ಆರ್.ಮಹದೇವಸ್ವಾಮಿ, ಮೈಮುಲ್ ನಿರ್ದೇಶಕ ಅಶೋಕ್, ಜೆಡಿಎಸ್ ಕ್ಷೇತ್ರಾಧ್ಯಕ್ಷ ಚಿನ್ನಸ್ವಾಮಿ, ಬಿಜೆಪಿ ಮಂಡಲ ಅಧ್ಯಕ್ಷ ಶಿವಕುಮಾರ್, ಮೈಸೂರು ಜಿಲ್ಲಾ ಗ್ರಾಮಾಂತರ ಬಿಜೆಪಿ ಪ್ರಧಾನ ಕಾರ್ಯದರ್ಶಿ ಎನ್.ಎಂ.ರಾಮಚಂದ್ರ, ಉಪಾಧ್ಯಕ್ಷರಾದ ಹೆಳವರಹುಂಡಿ ಸಿದ್ದಪ್ಪ, ಗೂಳಿ ಮಹೇಶ್, ಪುರಸಭಾ ಸದಸ್ಯ ಕಿರಣ್, ಸೋಸಲೆ ಮಹಾಶಕ್ತಿ ಕೇಂದ್ರದ ಅಧ್ಯಕ್ಷ ಪುಟ್ಟಸ್ವಾಮಿ, ವಿಚಾರವಾದಿ ಪ್ರಭುಸ್ವಾಮಿ, ತಾಪಂ ಮಾಜಿ ಸದಸ್ಯ ಚಂದ್ರಶೇಖರ್, ಎಂ.ಶಿವಮೂರ್ತಿ, ರಾಜ್ಯ ಹಿಂದುಳಿದ ವರ್ಗಗಳ ಅಧ್ಯಕ್ಷ ರಘು ಕೌಟಿಲ್ಯ, ಜಿಪಂ ಮಾಜಿ ಸದಸ್ಯ ಸದಾನಂದ, ಕೆ.ಸಿ. ಲೋಕೇಶ್ ನಾಯಕ್, ಯುವ ಮೋರ್ಚಾ ಜಿಲ್ಲಾಧ್ಯಕ್ಷ ಸಾಮ್ರಾಟ್, ಗ್ರಾಪಂ ಉಪಾಧ್ಯಕ್ಷ ಕೈಯಂಬಳ್ಳಿ ಅಶೋಕ್, ಶಂಭುದೇವಪುರ ರಮೇಶ್, ದಯಾನಂದ್ ಪಟೇಲ್, ಶಿವಕುಮಾರ್ ಮತ್ತಿತರಿದ್ದರು.

ತಮಿಳುನಾಡಿಗೆ ನೀರು ಹರಿಸಿ ರೈತರಿಗೆ ಚೊಂಬು ಕೊಟ್ಟ ಕಾಂಗ್ರೆಸ್

ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಟೀಕೆ



ಹದಿನಾರು ಗ್ರಾಮದಲ್ಲಿ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ರೋಡ್ ಶೋ ನಡೆಸಿದರು.

ಕಾಂಗ್ರೆಸ್‌ನಲ್ಲಿ ಜೆಡಿಎಸ್‌ನವರ ದರ್ಬಾರ್

ಕಾಂಗ್ರೆಸ್ ಮೂಲ ಪಕ್ಷವಾಗಿ ಉಳಿಯದೇ ಜೆಡಿಎಸ್‌ನವರ ದರ್ಬಾರು ಹೆಚ್ಚಾಗಿದೆ. ಜೆಡಿಎಸ್ ಮೂಲದ ಸಿದ್ದರಾಮಯ್ಯ ಮುಖ್ಯಮಂತ್ರಿಯಾಗಿ, ಹೆಚ್.ಸಿ. ಮಹದೇವಪ್ಪ ಮೈಸೂರು ಉಸ್ತುವಾರಿಯಾಗಿ, ಕೆ.ವೆಂಕಟೇಶ್ ಚಾಮರಾಜನಗರ ಉಸ್ತುವಾರಿ, ಚಲುವರಾಯಸ್ವಾಮಿ ಮಂಡ್ಯ ಉಸ್ತುವಾರಿ ಸಚಿವರಾಗಿರುವುದರಿಂದ ಮೂಲ ಕಾಂಗ್ರೆಸ್ಸಿಗರನ್ನು ಗುರ್ತಿಸಲು ಕಾಂಗ್ರೆಸ್ ಹೈಕಮಾಂಡ್‌ಗೆ ಸಾಧ್ಯವಾಗಿಲ್ಲ. ಕಾಂಗ್ರೆಸ್ ಪಕ್ಷ ಕಟ್ಟಿದ ಹೆಚ್.ವಿಶ್ವನಾಥ್, ವಿ.ಶ್ರೀನಿವಾಸಪ್ರಸಾದ್, ಮಾದೇಗೌಡ ಸೇರಿದಂತೆ ಮೂಲ ಕಾಂಗ್ರೆಸ್ಸಿಗರು ಪಕ್ಷ ತೊರೆಯುವ ಪರಿಸ್ಥಿತಿ ನಿರ್ಮಾಣವಾಗಿದೆ. ಜೊತೆಗೆ ವಿಧಾನಸಭಾ ಚುನಾವಣೆಗೆ ನೀಡಿದ್ದ ಗ್ಯಾರಂಟಿ ಯೋಜನೆಗಳು ಈಡೇರಿವೆ. ಹೀಗಾಗಿ ಲೋಕಸಭಾ ಚುನಾವಣೆಗೆ ಗ್ಯಾರಂಟಿ ಹೆಸರೇಳಿಕೊಂಡು ಮತ ಕೇಳುವ ನೈತಿಕತೆ ಕಾಂಗ್ರೆಸ್‌ಗೆ ಇಲ್ಲ. ಜನರ ದುಡ್ಡನ್ನು ಕೊಳ್ಳೆ ಹೊಡೆದು ಗ್ಯಾರಂಟಿ ಜಾರಿಗೊಳಿಸಿದ್ದಾರೆ. ಎಸ್ಸಿ, ಎಸ್ಟಿ ಅನುದಾನವನ್ನು ದುರ್ಬಳಕೆ ಮಾಡಿಕೊಂಡು ದಲಿತರಿಗೆ ದ್ರೋಹ ಬಗೆದಿದ್ದಾರೆ. ಕ್ಷೇತ್ರದಲ್ಲಿ ದಲಿತರು, ಉಪ್ಪಾರರು, ಕುರುಬರು ಸಹ ಬಿಜೆಪಿ ಪರವಾಗಿರುವ ಕಾರಣ ಬಾಲರಾಜು ಗೆಲುವು ಶತಸಿದ್ಧ

– ಗುರುಪಾದಸ್ವಾಮಿ, ಬಿಜೆಪಿ ಮುಖಂಡ.

ನಂಜನಗೂಡು, ಏ.22– ಬರಗಾಲ ಸಂದರ್ಭ ನಾಲೆಗಳಿಗೆ ನೀರು ಹರಿಸದೇ ತಮಿಳುನಾಡಿಗೆ ನೀರು ಹರಿಸುವ ಮೂಲಕ ರಾಜ್ಯ ಕಾಂಗ್ರೆಸ್ ಸರ್ಕಾರ ರೈತರ ಕೈಗೆ ಚೊಂಬು ಕೊಟ್ಟಿದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಆರೋಪಿಸಿದರು.

ತಾಲೂಕಿನ ಹದಿನಾರು ಗ್ರಾಮದಲ್ಲಿ ಚಾಮರಾಜನಗರ ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಎಸ್.ಬಾಲರಾಜು ಪರ ಸೋಮವಾರ ರೋಡ್ ಶೋ ಮೂಲಕ ಮತಯಾಚಿಸಿ ಮಾತನಾಡಿದ ಅವರು, ರಾಜ್ಯದಲ್ಲಿ ಭೀಕರ ಬರಗಾಲ ಎದುರಾಗಿರುವ ಸಂಕಷ್ಟ ಪರಿಸ್ಥಿತಿಯಲ್ಲಿ ಕಾಂಗ್ರೆಸ್ ಸರ್ಕಾರ ತಮಿಳುನಾಡಿಗೆ ನೀರು ಹರಿಸುವ ಅವಶ್ಯಕತೆ ಏನಿತ್ತು ಎಂದು ಸಿಎಂ ಸಿದ್ದರಾಮಯ್ಯ ಹಾಗೂ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಅವರನ್ನು ಪ್ರಶ್ನಿಸಲು ಬಯಸುತ್ತೇನೆ. ವರುಣ ವ್ಯಾಪ್ತಿಯಲ್ಲೇ ಕಬಿನಿ ಜಲಾಶಯದ 2 ನಾಲೆಗಳಿವೆ. ಸಿದ್ದರಾಮಯ್ಯ ಅವರಿಗೆ ರಾಜಕೀಯವಾಗಿ ಶಕ್ತಿ ಕೊಟ್ಟ ವರುಣ ಕ್ಷೇತ್ರದ ನಾಲೆಗಳಿಗೆ ನೀರು ಹರಿಸಿದ್ದರೆ ರೈತರು ನೆಮ್ಮದಿಯಾಗಿರುತ್ತಿದ್ದರು. ತಮಿಳುನಾಡಿಗೆ ನೀರು ಬಿಡುವ ಅಗತ್ಯವೇನಿತ್ತು ಎಂಬ ಪ್ರಶ್ನೆಗೆ ಉಭಯ ನಾಯಕರು ಉತ್ತರಿಸಲಿ. ತಮಿಳುನಾಡಿಗೆ ನೀರು ಹರಿಸಿ ರೈತರ ಕೈಗೆ ಚೊಂಬು ಕೊಟ್ಟಿದ್ದಾರೆ ಎಂದು ಟೀಕಿಸಿದರು.

ಮೈಸೂರಿನ ರಾಜಮನೆತನಕ್ಕೂ ಹದಿನಾರು ಗ್ರಾಮಕ್ಕೂ ಭಾವನಾತ್ಮಕ ಸಂಬಂಧವಿದೆ. ಮೈಸೂರು ರಾಜರಿಗೆ ಆರಂಭದಲ್ಲಿ ಯದುನಾಡು ರಾಜಧಾನಿಯಾಗಿತ್ತು. ಯದುನಾಡು ಕ್ರಮೇಣ ಹದಿನಾರು ಗ್ರಾಮವಾಗಿದೆ. ಇಂತಹ ಹಿನ್ನೆಲೆಯುಳ್ಳ ಈ ಭಾಗದಲ್ಲಿ ಚಾಮರಾಜನಗರ ಅಭ್ಯರ್ಥಿ ಎಸ್.ಬಾಲರಾಜು ಅವರನ್ನು ಗೆಲ್ಲಿಸುವ ಮೂಲಕ ಪ್ರಧಾನಿ ಮೋದಿ ಅವರಿಗೆ ಶಕ್ತಿ ತುಂಬುವಂತೆ ಮನವಿ ಮಾಡಿದರು.

ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಯದುವೀರ್ ಮಾತನಾಡಿ, ಹದಿನಾರು ಗ್ರಾಮಕ್ಕೂ ನಮ್ಮ ವಂಶಕ್ಕೂ ಇರುವ ನಂಟಿನ ಬಗ್ಗೆ ನಿಮಗೆಲ್ಲ ತಿಳಿದಿದೆ. ದೇಶದ ಹಿತದೃಷ್ಟಿಯಿಂದ ಮೋದಿ ಮತ್ತೊಮ್ಮೆ ಪ್ರಧಾನಿಯಾಗಬೇಕಾಗಿದೆ. ಇದಕ್ಕಾಗಿ ಪ್ರತಿ ಕ್ಷೇತ್ರಗಳಲ್ಲೂ ಬಿಜೆಪಿ ಗೆಲುವು ಅಗತ್ಯ. ದೇಶದ ಸಮಗ್ರತೆ ದೃಷ್ಟಿಯಿಂದ ಬಿಜೆಪಿ ಅಭ್ಯರ್ಥಿಗಳ ಗೆಲುವಿಗೆ ಮತದಾರರು ಮುಂದಾಗಬೇಕು ಎಂದರು.

ಗ್ರಾಮಕ್ಕೆ ಬಿ.ವೈ.ವಿಜಯೇಂದ್ರ ಆಗಮಿಸುತ್ತಿದ್ದಂತೆ ಭವ್ಯ ಸ್ವಾಗತ ಕೋರಲಾಯಿತು. ಗ್ರಾಮದ ಪ್ರಮುಖ ರಸ್ತೆಗಳಲ್ಲಿ ರೋಡ್ ಶೋ ನಡೆಸಲಾಯಿತು. ವಿವಿಧ ಜನಪದ ಕಲಾತಂಡಗಳು ಭಾಗಿಯಾಗಿದ್ದವು. ಬಿಜೆಪಿ ಜಿಲ್ಲಾಧ್ಯಕ್ಷ ಎಲ್.ಆರ್. ಮಹದೇವಸ್ವಾಮಿ, ಜಿಪಂ ಮಾಜಿ ಸದಸ್ಯರಾದ ಬಿ.ಎನ್. ಸದಾನಂದ, ಗುರುಸ್ವಾಮಿ, ಬಿಜೆಪಿ ಎಸ್ಸಿ ಮೋರ್ಚಾ ಜಿಲ್ಲಾಧ್ಯಕ್ಷ ಸಿ.ಎಂ.ಮಹದೇವಯ್ಯ, ವರುಣ ಬಿಜೆಪಿ ಅಧ್ಯಕ್ಷ ಸತೀಶ್, ನಾಗೇಂದ್ರ ನಂಜುಂಡಸ್ವಾಮಿ, ಯುವ ಮೋರ್ಚಾ ಜಿಲ್ಲಾಧ್ಯಕ್ಷ ವಸಂತ ಸಾಮ್ರಾಟ್ ಸೇರಿದಂತೆ ಹಲವರಿದ್ದರು.

ನಂಜಮಣಿ ನಿಧನ



ತಿ.ನರಸೀಪುರ, ಏ.22– ತಾಲೂಕಿನ ತೊಟ್ಟವಾಡಿ ಗ್ರಾಮದ ಲೇ.ನಂಜುಂಡಪ್ಪನವರ ಪತ್ನಿ ನಂಜಮಣಿ(83) ಸೋಮವಾರ ರಾತ್ರಿ ನಿಧನರಾದರು. ಮೃತರು ತಾಲೂಕು ವಕೀಲರ ಸಂಘದ ಅಧ್ಯಕ್ಷ ಮಹದೇವಸ್ವಾಮಿ ಸೇರಿದಂತೆ ನಾಲ್ವರು ಪುತ್ರರು, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಮಂಗಳವಾರ ಮಧ್ಯಾಹ್ನ 2 ಗಂಟೆಗೆ ಸ್ವಗ್ರಾಮದಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಹನುಮೇಗೌಡ



ಹುಣಸೂರು, ಏ.22– ತಾಲೂಕಿನ ಹುಣಸೇಗಾಲ ಗ್ರಾಮದ ನಿವಾಸಿ ಹನುಮೇಗೌಡ (97) ಭಾನುವಾರ ಸಂಜೆ ನಿಧನರಾದರು. ಮೃತರು ಇಬ್ಬರು ಪುತ್ರಿಯರು, ಓರ್ವ ಪುತ್ರ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಸೋಮವಾರ ನಡೆಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ರಾಮಯ್ಯ



ಹುಣಸೂರು, ಏ.22– ತಾಲೂಕಿನ ಹನಗೋಡು ಗ್ರಾಮದ ಹಿರಿಯ ದಲಿತ ಹೋರಾಟಗಾರ ರಾಮಯ್ಯ(70) ಸೋಮವಾರ ಬೆಳಗ್ಗೆ ನಿಧನರಾದರು. ಮೃತರು ಪತ್ನಿ, ಇಬ್ಬರು ಪುತ್ರಿಯರು, ಓರ್ವ ಪುತ್ರ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಸ್ವಗ್ರಾಮದಲ್ಲಿ ನಡೆಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ದಶಕದಲ್ಲಿ ಪ್ರಧಾನಿ ನರೇಂದ್ರ ಮೋದಿ ಕಟ್ಟಿದ

ಭಾರತ ಈಗ ಜಗತ್ತಿನ 5ನೇ ಶ್ರೀಮಂತ ರಾಷ್ಟ್ರ

ದೇಶದ ಪ್ರಧಾನಿ ದಿನದ 18 ಗಂಟೆ ನಮಗಾಗಿ ಕೆಲಸ ಮಾಡುತ್ತಿದ್ದಾರೆ; ಚಿಂತಕ ಚಕ್ರವರ್ತಿ ಸೂಲಿಬೆಲೆ

ಮೈಸೂರು,ಏ.22(ಪಿಎಂ)– ಕಳೆದ ಒಂದು ದಶಕದಲ್ಲಿ ಪ್ರಧಾನಿ ನರೇಂದ್ರ ಮೋದಿ ಕಟ್ಟಿದ ಭಾರತ ಇಂದು ಜಗತ್ತಿನ ಐದನೇ ಶ್ರೀಮಂತ ರಾಷ್ಟ್ರವಾಗುವ ಮೂಲಕ ಆರ್ಥಿಕವಾಗಿ ಪ್ರಬಲವಾಗಿದೆ ಎಂದು ಚಿಂತಕ ಚಕ್ರವರ್ತಿ ಸೂಲಿಬೆಲೆ ಹೇಳಿದರು.

ಮೈಸೂರಿನ ದಸರಾ ವಸ್ತುಪ್ರದರ್ಶನ ಆವರಣದಲ್ಲಿ ನಮೋ ಬ್ರಿಗೇಡ್ ಮೈಸೂರು ವತಿಯಿಂದ 'ನಮೋ ಭಾರತ' ಶೀರ್ಷಿಕೆಯಡಿ ನರೇಂದ್ರ ಮೋದಿಯವರ ಹತ್ತು ವರ್ಷಗಳ ಅಭಿವೃದ್ಧಿ ಯೋಜನೆಗಳ ಕುರಿತು ಸೋಮವಾರ ಹಮ್ಮಿಕೊಂಡಿದ್ದ ಬಹಿರಂಗ ಸಮಾವೇಶದಲ್ಲಿ ಅವರು ಮುಖ್ಯ ಭಾಷಣ ಮಾಡಿದರು.

ಇಂದಿನ ಭಾರತದ ಎಕಾನಮಿ 3 ಟ್ರಿಲಿಯನ್ ಡಾಲರ್ಸ್ ಆಗಿದ್ದು, ಇನ್ನು 2ರಿಂದ 3 ವರ್ಷಗಳಲ್ಲಿ 5 ಟ್ರಿಲಿಯನ್ ಎಕಾನಮಿ ಮಾಡುವ ಮೂಲಕ ಭಾರತವನ್ನು ಜಗತ್ತಿನ ಮೂರನೇ ಶ್ರೀಮಂತ ರಾಷ್ಟ್ರ ಮಾಡುತ್ತೇನೆಂದು ನರೇಂದ್ರ ಮೋದಿಯವರು ಭರವಸೆ ನೀಡಿದ್ದು, ಅಮೆರಿಕ ಮತ್ತು ಚೀನಾದ ನಂತರ ಜಗತ್ತಿನ ಶ್ರೀಮಂತ ರಾಷ್ಟ್ರವಾಗಿ ಭಾರತ ಜಗತ್ತಿನ ಎದುರಿಗೆ ನಿಲ್ಲಲಿದೆ ಎಂದರು.

ಪ್ರತಿ ಚುನಾವಣೆ ಪ್ರಚಾರ ಮುಗಿದ ನಂತರ ರಾಹುಲ್‌ಗಾಂಧಿ ವಿದೇಶಕ್ಕೆ ಹೋಗಿ ಬರುತ್ತಾರೆ. ಅಂತೆಯೇ ಅನೇಕ ಮಂತ್ರಿಗಳು, ಶಾಸಕರು ಹೆಂಡತಿ ಮಕ್ಕಳೊಂದಿಗೆ ಪ್ರವಾಸಕ್ಕೆ ಹೋಗಿ ಬರುತ್ತಾರೆ. ಆದರೆ ಮೋದಿಯವರು ಕಳೆದ 10 ವರ್ಷಗಳಿಂದ ಒಂದೇ ಒಂದು ದಿನವು ತನ್ನ ಕೆಲಸಕ್ಕೆ ರಜೆ ತೆಗೆದುಕೊಳ್ಳದೇ ಪ್ರತಿ ದಿನ 24 ಗಂಟೆಯಲ್ಲಿ 18 ಗಂಟೆ ಕಾಲ ನಮಗಾಗಿ ಕೆಲಸ ಮಾಡುತ್ತಿದ್ದಾರೆ. ಇಡೀ ದೇಶದ ಜನತೆಯನ್ನು ತಮ್ಮ ಪರಿವಾರ ಎಂದು ಅವರು ಭಾವಿಸಿದ್ದಾರೆ ಎಂದು ಹೇಳಿದರು.

ಮೋದಿಗೆ ಪರಿವಾರ ಇಲ್ಲವೆಂದು ಬಿಹಾರದ ನಾಯಕನೊಬ್ಬ ಟೀಕೆ ಮಾಡಿದಾಗ, ದೇಶದ 140 ಕೋಟಿ ಜನರನ್ನೂ ಮೋದಿ ತನ್ನ ಪರಿವಾರ ಎಂದು ಭಾವಿಸಿಕೊಂಡಿದ್ದಾರೆ ಎಂದು ಈ ದೇಶದ ಜನ ಪ್ರತಿಕ್ರಿಯಿಸಿದರು. ಬಹಳ ಜನ ಬಿಜೆಪಿ ಜಗತ್ತಿನ ಅತ್ಯಂತ ದೊಡ್ಡ ಪಕ್ಷ ಎನ್ನುತ್ತಾರೆ. ಸಂಘ (ಆರ್‌ಎಸ್‌ಎಸ್) ಅತ್ಯಂತ ದೊಡ್ಡ ಸಂಘಟನೆ ಎನ್ನುತ್ತಾರೆ. ಆದರೆ ನನಗೆ ಇದರೊಂದಿಗೆ ಮತ್ತೊಂದು ಸೇರಿಸಬೇಕು ಎನ್ನಿಸುತ್ತದೆ. ಅದೆಂದರೆ ಜಗತ್ತಿನಲ್ಲಿ ಅತ್ಯಂತ ದೊಡ್ಡ ಪರಿವಾರ ಹೊಂದಿರುವ ವ್ಯಕ್ತಿ ಎಂದರೆ ಅದು ನರೇಂದ್ರ ಮೋದಿ. 140 ಕೋಟಿ ಜನರಲ್ಲಿ 25 ಕೋಟಿ ಜನರನ್ನು ಬಿಟ್ಟರೂ 120 ಕೋಟಿ ಜನ ಮೋದಿ ಪರಿವಾರದಲ್ಲಿ ಇದ್ದಾರೆ. ಅವರು ಮೂರನೇ ಬಾರಿ ಪ್ರಧಾನಿಯಾಗುತ್ತಿರುವುದಕ್ಕೆ ಅಭಿನಂದಿಸುತ್ತೇನೆ



ಮೈಸೂರಿನ ದಸರಾ ವಸ್ತುಪ್ರದರ್ಶನ ಆವರಣದಲ್ಲಿ ಸೋಮವಾರ ಹಮ್ಮಿಕೊಂಡಿದ್ದ ಬಹಿರಂಗ ಸಮಾವೇಶದಲ್ಲಿ ಚಿಂತಕ ಚಕ್ರವರ್ತಿ ಸೂಲಿಬೆಲೆ ಮುಖ್ಯ ಭಾಷಣ ಮಾಡಿದರು.

ಎಂದು ಅತೀವ ವಿಶ್ವಾಸ ವ್ಯಕ್ತಪಡಿಸಿದರು.

ಕಳೆದ 10 ವರ್ಷಗಳ ಹಿಂದೆ ಭಾರತ ಆರ್ಥಿಕವಾಗಿ ದುರ್ಬಲವಾಗಿತ್ತು. ಜೊತೆಗೆ ಆಗ ಈ ದೇಶದ ಭದ್ರತಾ ವ್ಯವಸ್ಥೆ ಹೇಗಿತ್ತೆಂದರೆ ಪಾಕಿಸ್ತಾನ ದಾಳಿ ಮಾಡುತ್ತಿತ್ತು. ಭಾರತದ ಎಲ್ಲೆಂದರಲ್ಲಿ ಬಾಂಬ್ ಸ್ಫೋಟ ಆಗುತ್ತಿತ್ತು. ಭಾರತದ ಮೂಲಭೂತ ಸೌಲಭ್ಯಗಳು ಹೇಗಿತ್ತೆಂದರೆ ದೇಶದ ಯಾವ ರಸ್ತೆಗಳೂ ಹೈಕ್ಲಾಸ್ ಆಗಿರಲಿಲ್ಲ. ಮಾರುಕಟ್ಟೆಯಲ್ಲಿ ಚೀನಾ ಐಟಂಗಳ ಹಾವಳಿ ಹೆಚ್ಚಾಗಿತ್ತು. ಹಿಂದೂ ಎಂದು ಹೇಳಿಕೊಳ್ಳಲು ಜಗತ್ತಿನ ವೇದಿಕೆಯಲ್ಲಿ ಮಾತ್ರವಲ್ಲ, ಭಾರತದಲ್ಲೂ ನಾಚಿಕೊಂಡು ತಲೆ ತಗ್ಗಿಸುವ ಸ್ಥಿತಿ ಇತ್ತು. ಆದರೆ ಇಂದು ಬದಲಾಗಿದೆ. ಅದಕ್ಕೆ ಕಾರಣ ನರೇಂದ್ರ ಮೋದಿ ಎಂದರು. ಇಂದು ಭಾರತದ ಎಲ್ಲಿಯೂ ಬಾಂಬ್ ಸ್ಫೋಟ ಇಲ್ಲ. ಸಿದ್ದರಾಮಯ್ಯನವರು ಬಂದ ಮೇಲೆ ಒಂದೇ ಒಂದು ರಾಮೇಶ್ವರಂ ಕೆಫೆಯಲ್ಲಿ ಆಯಿತು. ಸ್ಫೋಟ ಮಾಡಿದವರಿಗೆ ನಮ್ಮನ್ನು ಸಿದ್ದರಾಮಯ್ಯ ಉಳಿಸುತ್ತಾರೆ ಎಂಬ ವಿಶ್ವಾಸವಿದೆ ಎಂದು ದೂರಿದರು.

ಕಳೆದ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಗೆದ್ದಾಗ ಭಟ್ಕಳದಲ್ಲಿ ಪಾಕಿಸ್ತಾನ ಪರ ಘೋಷಣೆ ಕೂಗಲಾಯಿತು. ಆದರೆ ಕಾಂಗ್ರೆಸ್‌ನವರು ಅದನ್ನು ನಿರಾಕರಿಸಿದರು. ವಿಧಾನಸೌಧದೊಳಗೆ ಪಾಕಿಸ್ತಾನ ಪರ ಘೋಷಣೆ ಕೂಗಿದಾಗಲೂ ನಿರಾಕರಿಸಿದರು. ಆದರೆ ಎಫ್‌ಎಸ್‌ಎಲ್ ವರದಿಯಲ್ಲಿ ಅದು ಸಾಬೀತು ಆಯಿತು. ಪಾಕಿಸ್ತಾನ ಪರ ಘೋಷಣೆ ಕೂಗಿದವರಿಗೆ ಏನು ಮಾಡಿದರು ಎಂದು ಪ್ರಶ್ನಿಸಿದರು.

ಕಾಂಗ್ರೆಸ್ಸಿಗರಿದ್ದರೆ ತಲೆ ತಗ್ಗಿಸಿ: ಪುಲ್ವಾಮಾದಲ್ಲಿ ಪಾಕಿಸ್ತಾನ ದಾಳಿ ನಡೆಸಿದಾಗ, ಇದಕ್ಕೆ ಪ್ರತಿಯಾಗಿ ನರೇಂದ್ರ ಮೋದಿಯವರು ವಾಯು ಸೇನೆಯನ್ನು ಪಾಕಿಸ್ತಾನದ ಒಳಗೆ ಕಳುಹಿಸಿ ಏರ್ ಸ್ಟ್ರೈಕ್ ಮಾಡಿ, 200ಕ್ಕೂ ಹೆಚ್ಚು ಭಯೋತ್ಪಾದಕರನ್ನು ಹತ್ಯೆಯಾಗುವಂತೆ ಮಾಡಿದರು ಎಂದರು.

ಚಕ್ರವರ್ತಿ ಏನು ಮಾತನಾಡುತ್ತಾನೆಂದು ಯಾರಾದರೂ ಕಾಂಗ್ರೆಸ್‌ನವರು ಬಂದು ಕೂತಿದ್ದರೆ, ದಯಮಾಡಿ 1 ನಿಮಿಷ ತಲೆ ತಗ್ಗಿಸಿ ಕುಳಿತುಕೊಳ್ಳಿ. ತಲೆ ಎತ್ತುವ ಯೋಗ್ಯತೆ ಈ ಟೈಮ್‌ನಲ್ಲಿ ನಿಮಗಿಲ್ಲ ಎಂದು ಸೂಲಿಬೆಲೆ ಕಿಡಿಕಾರಿದರು. ಮುಂದುವರೆದು ಮಾತನಾಡಿದ ಅವರು, ಏಕೆಂದರೆ ದೇಶದ ಸೈನಿಕರು ಪ್ರಾಣದ ಹಂಗು ತೊರೆದು ಪಾಕಿಸ್ತಾನದ ಒಳಗೆ ಭಯೋತ್ಪಾದಕರನ್ನು ಧ್ವಂಸ ಮಾಡಿ ಬಂದರೆ ಸಾಕ್ಷ್ಯ ಕೇಳಿದವರು ನೀವು. ನಾಚಿಕೆ ಆಗುವುದಿಲ್ಲವೇ? ಎಂದು ಆಕ್ರೋಶ ವ್ಯಕ್ತಪಡಿಸಿ, ಇಂದು ಭಾರತೀಯ ಸೈನಿಕರು ಪಾಕಿಸ್ತಾನದೊಳಗೆ ಇದ್ದು ಭಯೋತ್ಪಾದಕರನ್ನು ಹತ್ಯೆ ಮಾಡುತ್ತಿದ್ದಾರೆ ಎಂದು ಹೇಳಿದರು.

ಈ ಲೋಕಸಭಾ ಚುನಾವಣೆಯ ಮೊದಲ ಹಂತದ ಮತದಾನದಲ್ಲಿ ಎಲ್ಲರೂ ಓಟ್ ಮಾಡಿರುವ ಟ್ರೆಂಡ್ ಕಂಡು ಕಾಂಗ್ರೆಸ್ ಈಗಾಗಲೇ ಹಿಂದೆ ಸರಿದಿದೆ. ಲೋಕಸಭಾ ಚುನಾವಣೆಯಲ್ಲಿ ಮೊದಲ ಸ್ಥಾನ ಈಗಾಗಲೇ ಬಿಜೆಪಿಗೆ ಬಂದಾಗಿದೆ. ಸೂರತ್‌ನ ಕಾಂಗ್ರೆಸ್ ಅಭ್ಯರ್ಥಿ ನಾಮಪತ್ರ ತಿರಸ್ಕೃತಗೊಂಡು, ಉಳಿದವರು ನಾಮಪತ್ರಗಳನ್ನು ಹಿಂಪಡೆದ ಹಿನ್ನೆಲೆಯಲ್ಲಿ ಮೊದಲ ಸ್ಥಾನ ಬಿಜೆಪಿಗೆ ಬಂದಾಗಿದೆ. ಆ ಮೂಲಕ ಗುಜರಾತಿನಲ್ಲಿ ಮೊದಲ ಕಮಲ ಅರಳಿಯಾಗಿದೆ. ಮೋದಿಯವರು ಮತ್ತೊಮ್ಮೆ ಪ್ರಧಾನಿಯಾಗಲು 400 ಸ್ಥಾನಗಳು ಬರಲಿದ್ದು, ಆ ಪೈಕಿ ಮೈಸೂರು–ಕೊಡಗು ಕ್ಷೇತ್ರದಲ್ಲೂ ಕಮಲ ಅರಳುವಂತೆ ನೋಡಿಕೊಳ್ಳುವುದು ನಮ್ಮೆಲ್ಲರ ಜವಾಬ್ದಾರಿ.

-ಚಕ್ರವರ್ತಿ ಸೂಲಿಬೆಲೆ.

ಬಿಜೆಪಿ ಕಾರ್ಯಕರ್ತರ ಪ್ರಾಬ್ಲಂ ಇದೇ!

ಭಾಷಣ ಮಾಡುತ್ತಿದ್ದ ಚಕ್ರವರ್ತಿ ಸೂಲಿಬೆಲೆ, ಯಾರಪ್ಪ ಹಂಚುತ್ತಿರುವುದು (ಕರಪತ್ರ). ಈ ಬಿಜೆಪಿ ಕಾರ್ಯಕರ್ತರ ಪ್ರಾಬ್ಲಂ ಇದೇ. ನೀವು ಅಲ್ಲಿಂದ ಹೊರಡುವವರೆಗೆ ನಾನು ಮಾತನಾಡುವುದಿಲ್ಲ ಎಂದರಲ್ಲದೆ, ಎಲ್ಲರೂ ಪ್ರಜ್ಞಾವಂತರಿದ್ದಾರಪ್ಪ ತಲೆ ಕೆಡಿಸಿಕೊಳ್ಳಬೇಡಿ ಎಂದು ಕರಪತ್ರ ಹಂಚುವುದನ್ನು ನಿಲ್ಲಿಸಿದ ಮೇಲೆ ಮಾತು ಮುಂದುವರೆಸಿದರು.

ಬೇಸಿಗೆ ಬಿರು ಬಿಸಿಲು ಪರಿಣಾಮ

ಎಳನೀರು, ತೆಂಗಿನಕಾಯಿ, ತರಕಾರಿ ಬೆಲೆ ಗಗನಕ್ಕೆ

ತರಕಾರಿಗಳು	ಹಳೇ ದರ	ಹೊಸ ದರ
ಎಳನೀರು	40ರಿಂದ 45 ರೂ.	40ರಿಂದ 50 ರೂ.
ತೆಂಗಿನಕಾಯಿ	35 ರೂ. (ಸಾಧಾರಣ)	40 ರೂ. (ಸಾಧಾರಣ)
ತೆಂಗಿನಕಾಯಿ	20 ರೂ. (ಸಣ್ಣ ಗಾತ್ರ)	25 ರೂ. (ಸಣ್ಣ ಗಾತ್ರ)
ಊಟಿ ಬೀನ್ಸ್	ಕೆಜಿ 70 ರೂ.	ಕೆಜಿ 150 ರೂ.
ನಾಟಿ ಬೀನ್ಸ್	ಕೆಜಿ 70 ರೂ.	ಕೆಜಿ 140 ರೂ.
ಕ್ಯಾಪ್ಸಿಕಂ	ಕೆಜಿ 60 ರೂ.	ಕೆಜಿ 50 ರೂ.
ಕ್ಯಾರೆಟ್	ಕೆಜಿ 60 ರೂ.	ಕೆಜಿ 50 ರೂ.
ಹಸಿಮೆಣಸಿನಕಾಯಿ	ಕೆಜಿ 70 ರೂ.	ಕೆಜಿ 80 ರೂ.
ಸೌತೇಕಾಯಿ	ಕೆಜಿ 20 ರೂ.	ಕೆಜಿ 40 ರೂ.
ಈರುಳ್ಳಿ	ಕೆಜಿ 25 ರೂ.	ಕೆಜಿ 20 ರೂ.
ಬೆಳ್ಳುಳ್ಳಿ	ಕೆಜಿ 150 ರೂ.	ಕೆಜಿ 180 ರೂ.
ಟೊಮ್ಯಾಟೊ	ಕೆಜಿ 35 ರೂ.	ಕೆಜಿ 30 ರೂ.





ದೇವರಾಜ ಮಾರುಕಟ್ಟೆಯ ತರಕಾರಿ ಅಂಗಡಿ

ಮೈಸೂರು, ಏ. 22(ಆರ್‌ಕೆ)– ಬರ ಹಾಗೂ ಬೇಸಿಗೆ ರಣಬಿಸಿಲಿನಿಂದಾಗಿ ಜನ ತತ್ತರಿಸಿರುವುದರ ನಡುವೆ ಎಳನೀರು, ತೆಂಗಿನಕಾಯಿ ಹಾಗೂ ತರಕಾರಿಗಳ ಬೆಲೆ ಗಗನಕ್ಕೇರಿದೆ.

ಮೈಸೂರು ನಗರದಲ್ಲಿ ಒಂದು ಎಳನೀರಿನ ಬೆಲೆ 50 ರೂ.ಗೇರಿದೆ. ಸಾಧಾರಣ ಗಾತ್ರದ ಎಳನೀರಿಗೆ 35ರಿಂದ 40 ರೂ. ತೆತ್ತಬೇಕು. ಉರಿ ಬಿಸಿಲಿನ ತಾಪ ತಾಳಲಾರದೇ ಜನರು ದಾಹ ತೀರಿಸಿಕೊಳ್ಳಲು ಬೆಲೆ ಏರಿಕೆಯಾಗಿದ್ದರೂ ಲೆಕ್ಕಿಸದೇ ಅನಿವಾರ್ಯವಾಗಿ ಪಾನೀಯಗಳ ಮೊರೆ ಹೋಗುತ್ತಿದ್ದಾರೆ.

ಅದೇ ರೀತಿ ತೆಂಗಿನಕಾಯಿ ಬೆಲೆಯೂ ಹೆಚ್ಚಾಗಿದ್ದು, 45ರಿಂದ 50 ರೂ. ಕರ್ನಾಟಕ ರಾಜ್ಯದಲ್ಲಿ ಮಳೆ ಪ್ರಮಾಣ ಕಡಿಮೆಯಾಗಿದ್ದು, ಇಳುವರಿ ಬಾರದ ಕಾರಣ ತಮಿಳುನಾಡಿನ ಪೊಲ್ಲಾಚಿಯಿಂದ ತರಿಸಲಾಗುತ್ತಿದೆ. ಸಾಗಣೆ ವೆಚ್ಚ ದುಬಾರಿಯಾಗಿರುವುದರಿಂದ ಸಾಮಾನ್ಯವಾಗಿ ಮಾರ್ಚ್, ಏಪ್ರಿಲ್ ಮಾಹೆಯಲ್ಲಿ ತೆಂಗಿನಕಾಯಿ ಬೆಲೆ ಜಾಸ್ತಿಯಾಗುತ್ತದೆ ಎಂದು ಮೈಸೂರಿನ ದೇವರಾಜ ಮಾರುಕಟ್ಟೆ ತೆಂಗಿನಕಾಯಿ ವ್ಯಾಪಾರಿಗಳಾದ ಮಂಜುನಾಥ ಮತ್ತು ಡಿ. ಕೃಷ್ಣಪ್ಪ 'ಮೈಸೂರು ಮಿತ್ರ'ನಿಗೆ ತಿಳಿಸಿದ್ದಾರೆ.

ಹಾಗೆಯೇ ಊಟಿ ಬೀನ್ಸ್ ಕೆಜಿಗೆ 150 ರೂ., ಫಾರ್ಮ್ ಬೀನ್ಸ್ 140 ರೂ.ಗಳಿಗೇರಿದ್ದು, 20 ದಿನಗಳ ಹಿಂದೆ ಇವುಗಳು ಕೆಜಿಗೆ 70 ರೂ.ಗಳಿಗೆ ಲಭ್ಯವಿದ್ದವು. ಉಳಿದಂತೆ ಕ್ಯಾಪ್ಸಿಕಂ 50 ರೂ., ಕ್ಯಾರೆಟ್ 50 ರೂ., ಹಸಿಮೆಣಸಿನಕಾಯಿ 80 ರೂ., ಸೌತೆಕಾಯಿ 40 ರೂ., ಬೆಳ್ಳುಳ್ಳಿ 180 ರೂ., ಆಲೂಗಡ್ಡೆ 35 ರೂ.ಗಳಿಗೆ ಮಾರುಕಟ್ಟೆಯಲ್ಲಿ ಮಾರಾಟವಾಗುತ್ತಿವೆ ಈರುಳ್ಳಿ ಮತ್ತು ಟೊಮ್ಯಾಟೊ ಕೆಜಿಗೆ 20ರಿಂದ 25 ರೂ., ದಂಟಿನ ಸೊಪ್ಪು ಕಂತೆಗೆ 10 ರೂ. ಹಾಗೂ ಇನ್ನಿತರ ಸೊಪ್ಪುಗಳ ಬೆಲೆಯೂ ಕಂತೆಗೆ 10 ರೂ.ನಂತೆ ಸಿಗುತ್ತಿವೆ.

ಮುಂಬೈ ವಿರುದ್ಧ ರಾಜಸ್ಥಾನ್ ರಾಯಲ್ಸ್‌ಗೆ ಗೆಲುವು



ಜೈಪುರ, ಏ.22– ಯಶಸ್ವಿ ಜೈಸ್ವಾಲ್ ಅವರ ಭರ್ಜರಿ ಶತಕದ ನೆರವಿನಿಂದ ರಾಜಸ್ಥಾನ್ ರಾಯಲ್ಸ್ ಮುಂಬೈ ಇಂಡಿಯನ್ಸ್ ವಿರುದ್ಧ 9 ವಿಕೆಟ್‌ಗಳ ಭರ್ಜರಿ ಜಯ ಸಾಧಿಸಿದೆ. ಆ ಮೂಲಕ ಟೂರ್ನಿಯಲ್ಲಿ ರಾಜಸ್ಥಾನ್ ರಾಯಲ್ಸ್ ಗೆಲುವಿನ ನಾಗಾಲೋಟ ಮುಂದುವರೆದಿದ್ದು, ಅಂಕಪಟ್ಟಿಯಲ್ಲಿ ಅಗ್ರಸ್ಥಾನದಲ್ಲೇ ಮುಂದುವರೆದಿದೆ.

ಇಲ್ಲಿನ ಸವಾಯ್ ಮಾನ್‌ಸಿಂಗ್ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಮುಂಬೈ ಇಂಡಿಯನ್ಸ್ ನೀಡಿದ 180 ರನ್‌ಗಳ ಗೆಲುವಿನ ಗುರಿ ಬೆನ್ನತ್ತಿದ ರಾಜಸ್ಥಾನ್ 18.4 ಓವರ್‌ಗಳಲ್ಲಿ 1 ವಿಕೆಟ್ ನಷ್ಟಕ್ಕೆ 183 ರನ್ ಗಳಿಸಿ ಜಯ ಗಳಿಸಿತು. ತಂಡದ ಪರ ಇನ್ನಿಂಗ್ಸ್ ಆರಂಭಿಸಿದ ಜೋಸ್ ಬಟ್ಲರ್ ಹಾಗೂ ಯಶಸ್ವಿ ಜೈಸ್ವಾಲ್ ಮೊದಲ ವಿಕೆಟ್‌ಗೆ 74 ರನ್‌ಗಳ ಜೊತೆಯಾಟವಾಡುವ ಮೂಲಕ ಉತ್ತಮ ಆರಂಭ ಒದಗಿಸಿದರು. ಆದರೆ 25 ಎಸೆತಗಳಲ್ಲಿ 6 ಬೌಂಡರಿ ಒಳಗೊಂಡ 35 ರನ್ ಗಳಿಸಿದ್ದ ಬಟ್ಲರ್ ವಿಕೆಟ್ ಒಪ್ಪಿಸಿದರು. ನಂತರ ಬಂದ ನಾಯಕ ಸಂಜು ಸ್ಯಾಮ್ಸನ್ ಜೈಸ್ವಾಲ್ ಜೊತೆಗೂಡಿ 2ನೇ ವಿಕೆಟ್‌ಗೆ 109 ರನ್‌ಗಳ ಜೊತೆಯಾಟವಾಡುವ ತಂಡಕ್ಕೆ ಜಯ ತಂದುಕೊಟ್ಟರು. ಪಂದ್ಯದಲ್ಲಿ ಬಿರುಸಿನ ಬ್ಯಾಟಿಂಗ್ ಮಾಡಿದ ಜೈಸ್ವಾಲ್ 60 ಎಸೆತಗಳಲ್ಲಿ 9 ಬೌಂಡರಿ, 7 ಸಿಕ್ಸರ್ ಒಳಗೊಂಡ 104 ರನ್ ಗಳಿಸಿದರೇ, ಸ್ಯಾಮ್ಸನ್ ತಲಾ 2 ಬೌಂಡರಿ, ಸಿಕ್ಸರ್ ಒಳಗೊಂಡ 38 ರನ್ ಗಳಿಸಿ ಅಜೇಯರಾಗಿ ಉಳಿದರು. ಮುಂಬೈ ಇಂಡಿಯನ್ಸ್ ಪರ ಪಿಯೂಷ್ ಚಾವ್ಲಾ ಒಂದು ವಿಕೆಟ್ ಪಡೆದರು.

ಇದಕ್ಕೂ ಮುನ್ನಾ ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ಮಾಡಿದ ಮುಂಬೈ ಇಂಡಿಯನ್ಸ್ 20 ಓವರ್‌ಗಳಲ್ಲಿ 9 ವಿಕೆಟ್ ನಷ್ಟಕ್ಕೆ 179ರನ್ ಗಳಿಸಿತು. ತಂಡದ ಪರ ತಿಲಕ್ ವರ್ಮಾ 45 ಎಸೆತಗಳಲ್ಲಿ 5 ಬೌಂಡರಿ, 3 ಸಿಕ್ಸರ್ ಒಳಗೊಂಡ 65 ರನ್ ಗಳಿಸಿದರು. ಉಳಿದಂತೆ ಸೂರ್ಯಕುಮಾರ್ ಯಾದವ್ 10, ಮೊಹಮ್ಮದ್ ನಬಿ 23, ನೆಹಾಲ್ ವಧೇರಾ 49, ಹಾರ್ದಿಕ್ ಪಾಂಡ್ಯ 10 ರನ್ ಗಳಿಸಿದರು. ರಾಜಸ್ಥಾನ್ ಪರ ಸಂದೀಪ್ ಶರ್ಮಾ 5, ಟ್ರೆಂಟ್ ಬೋಲ್ಟ್ 2, ಆವೇಶ್ ಖಾನ್, ಯಜುವೇಂದ್ರ ಚಹಲ್ ತಲಾ ಒಂದೊಂದು ವಿಕೆಟ್ ಉರುಳಿಸಿದರು. ಸಂದೀಪ್ ಶರ್ಮಾ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.

ಇಂದಿನ ಪಂದ್ಯ (ಏ.23)

ಚೆನ್ನೈ ಸೂಪರ್ ಕಿಂಗ್ಸ್ / ಲಕ್ನೋ ಸೂಪರ್ ಜೈಂಟ್ಸ್

ಸ್ಥಳ: ಚೆನ್ನೈ, ಎಂ.ಎ.ಚಿದಂಬರಂ ಕ್ರೀಡಾಂಗಣ

ಸಮಯ: ಸಂಜೆ 7.30ಕ್ಕೆ

ಚುನಾವಣಾ ಅಕ್ರಮ; ದಾಖಲೆ ಪ್ರಮಾಣದ ಸ್ವತ್ತು ವಶ

ಮೈಸೂರು, ಏ.22 (ಎಸ್‌ಬಿಡಿ)– ಲೋಕಸಭಾ ಚುನಾವಣೆಯಲ್ಲಿ ಅಕ್ರಮ ತಡೆ ಕಾರ್ಯಾಚರಣೆ ಮೂಲಕ ರಾಜ್ಯದಲ್ಲಿ ದಾಖಲೆ ಪ್ರಮಾಣದ ಸ್ವತ್ತುಗಳನ್ನು ವಶಪಡಿಸಿಕೊಳ್ಳಲಾಗಿದೆ.

ಚುನಾವಣೆ ಅಕ್ರಮ ತಡೆ ಕಾರ್ಯಾಚರಣೆಯಲ್ಲಿ ನಗದು, ಮದ್ಯ, ಚಿನ್ನಾಭರಣ, ಉಚಿತ ಉಡುಗೊರೆ ಹಾಗೂ ಇತರ ವಸ್ತುಗಳು ಸೇರಿದಂತೆ ಈವರೆಗೆ 406.73 ಕೋಟಿ ರೂ. ಮೌಲ್ಯದ ಸ್ವತ್ತುಗಳನ್ನು ವಶಪಡಿಸಿಕೊಳ್ಳಲಾಗಿದ್ದು, ಈ ಮೂಲಕ ಹೊಸ ದಾಖಲೆ ಸೃಷ್ಟಿಯಾದಂತಾಗಿದೆ. ಕಳೆದ 2019ರ ಲೋಕಸಭಾ ಚುನಾವಣೆಯಲ್ಲಿ ಒಟ್ಟು 88 ಕೋಟಿ ರೂ. ಮೌಲ್ಯದ ಸ್ವತ್ತುಗಳನ್ನು ವಶಪಡಿಸಿಕೊಳ್ಳಲಾಗಿತ್ತು. 2023ರ ವಿಧಾನಸಭಾ ಚುನಾವಣೆ ಸಂದರ್ಭದಲ್ಲಿ 384 ಕೋಟಿ ರೂ. ಮೌಲ್ಯದ ಸ್ವತ್ತುಗಳನ್ನು ಜಪ್ತಿ ಮಾಡಲಾಗಿತ್ತು. ಆದರೆ ಈ ಬಾರಿಯ ಲೋಕಸಭಾ ಚುನಾವಣೆಯಲ್ಲಿ ರಾಜ್ಯದ ಮೊದಲ ಹಂತದ ಮತದಾನ (ಏ.26)ಕ್ಕೂ ಮುನ್ನವೇ ಸುಮಾರು 407 ಕೋಟಿ ರೂ. ಮೌಲ್ಯದ ಸ್ವತ್ತುಗಳನ್ನು ವಶಪಡಿಸಿಕೊಳ್ಳಲಾಗಿದೆ.